ಹಕ್ಕಿಪಿಕ್ಕಿ ಬುಡಕಟ್ಟಿನ ಆರ್ಥಿಕ ಜೀವನ
(ಕಂಪ್ಲಿ ಪಟ್ಟಣವನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್(ಅರ್ಥಶಾಸ್ತ್ರ) ಪದವಿಗಾಗಿ ಸಲ್ಲಿಸಿದ ಪ್ರಬಂಧ

ಸಂಶೋಧನ ವಿದ್ಯಾರ್ಥಿ

ವೆಂಕಟೇಶ್ ಹೆಚ್

ನೋಂದಣಿ ಸಂಖ್ಯೆ: ೧೭೦೧೧೯೦೩೦೦೨೨

ಮಾರ್ಗದರ್ಶಕರು

ಡಾ ಚಲುವರಾಜು

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೭-೧೮

ಹಕ್ಕಿಪಿಕ್ಕಿ ಬುಡಕಟ್ಟಿನ ಆರ್ಥಿಕ ಜೀವನ

(ಕಂಪ್ಲಿ ಪಟ್ಟಣವನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ ಫಿಲ್(ಅರ್ಥಶಾಸ್ತ್ರ) ಪದವಿಗಾಗಿ ಸಾದರಪಡಿಸಿದ
ನಿಬಂಧ

ನೋಂದಣಿ ಸಂಖ್ಯೆ: ೧೭೦೧೧೨೦೩೦೦೨೨

ಸಂಶೋಧನ ವಿದ್ಯಾರ್ಥಿ
ವೆಂಕಟೇಶ್ ಹೆಚ್

ಮಾರ್ಗದರ್ಶಕರು
ಡಾ ಚಲುವರಾಜು
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೭-೧೮

ಸಂಶೋಧಕರ ಪ್ರಮಾಣ ಪತ್ರ

"ಹಕ್ಕಿಪಿಕ್ಕಿ ಬುಡಕಟ್ಟಿನ ಆರ್ಥಿಕ ಜೀವನ" (ಕಂಪ್ಲಿ ಪಟ್ಟಣವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಎಂ ಫಿಲ್(ಅರ್ಥಶಾಸ್ತ್ರ) ನಿಬಂಧವನ್ನು **ಡಾ. ಚಲುವರಾಜು** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ ಫಿಲ್ ಪದವಿಗಾಗಿ ಸಲ್ಲಿಸಲಾಗಿದೆ. ಪ್ರಸ್ತುತ ನಿಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: 31-10-2018
ಸ್ಥಳ : ವಿದ್ಯಾರಣ್ಯ

Venkatesh H

ವೆಂಕಟೇಶ್ ಹೆಚ್
ಸಂಶೋಧನ ವಿದ್ಯಾರ್ಥಿನಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ವೆಂಕಟೇಶ್ ಹೆಚ್ ಅವರು **"ಹಕ್ಕಿಪಿಕ್ಕಿ ಬುಡಕಟ್ಟಿನ ಆರ್ಥಿಕ ಜೀವನ" (ಕಂಪ್ಲಿ ಪಟ್ಟಣವನ್ನು ಅನುಲಕ್ಷಿಸಿ)** ಎಂಬ ಶಿರ್ಷಿಕೆಯ ಎಂ ಫಿಲ್(ಅರ್ಥಶಾಸ್ತ್ರ) ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಎಂ ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಈ ನಿಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ: 31-10-2018
ಸ್ಥಳ : ವಿದ್ಯಾರಣ್ಯ

ಡಾ. ಚಲುವರಾಜು
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ: ಒಂದು
ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ: ಒಂದು
ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧. ಪ್ರಸ್ತಾವನೆ

ಭಾರತದ ಬಹುತೇಕ ಬುಡಕಟ್ಟುಗಳು ಕಾಡುಮೇಡುಗಳಲ್ಲಿ ನೆಲೆಸಿವೆ. ಕಾಡಿನಿಂದ ದೊರೆಯುವ ಗೆಡ್ಡೆಗೆಣಸು, ಚಿಕ್ಕಮಟ್ಟ ಪ್ರಾಣಿಗಳೇ ಇವರ ಆಹಾರವಾಗಿದೆ. ಈ ಬುಡಕಟ್ಟುಗಳು ತಮ್ಮ ಜೀವನ ನಿರ್ವಹಣೆಗಾಗಿ ನಿರಂತರವಾದ ಅಲೆಮಾರಿತನವನ್ನು ಮೈಗೂಡಿಸಿಕೊಂಡಿವೆ. ಆದರೆ ಬ್ರಿಟೀಷರು ಭಾರತವನ್ನು ಆಳತೊಡಗಿದ ತರುವಾಯ ಭಾರತೀಯ ಬುಡಕಟ್ಟುಗಳ ಮೇಲೆ ಇನ್ನಿಲ್ಲದ ಪರಿಣಾಮಗಳುಂಟಾಗತೊಡಗಿದವು. ಬ್ರಿಟೀಷರು ಭಾರತದಲ್ಲಿಯ ತಮ್ಮ ಔದ್ಯೋಗಿಕ ಬೆಳವಣಿಗೆಗೆ ಪೂರಕವಾಗಿ ಇಂತಹ ಬುಡಕಟ್ಟುಗಳ ಶ್ರಮವನ್ನೇ ಆಶ್ರಯಿಸಿದರು. ಆ ಕಾರಣಕ್ಕಾಗಿ ಬ್ರಿಟೀಷರು ಭಾರತದೊಳಗಿನ ಎಷ್ಟೋ ಅಲೆಮಾರಿ ಬುಡಕಟ್ಟುಗಳನ್ನು ಕ್ರಿಮಿನಲ್ ಆಕ್ಟ್ ನೆಪದಲ್ಲಿ ಬಂಧಿಸಿ ಸೆಟಲ್‌ಮೆಂಟ್‌ಗಳಲ್ಲಿ ಕೂಡಿಹಾಕಿದರು. ಅವರನ್ನು ಅಪರಾಧಿ ಬುಡಕಟ್ಟುಗಳೆಂದು ಕರೆದು ಸಮಾಜದ ದೃಷ್ಟಿಯಲ್ಲಿಯೂ ಆ ಸಮುದಾಯಗಳು ಅಪರಾಧಿಗಳು ಎನ್ನುವ ಭಾವನೆ ಮೂಡಲು ಕಾರಣೀಕರ್ತರಾದರು. ಅಪರಾಧಿ ಬುಡಕಟ್ಟುಗಳೆಂದು ಕೂಡಿಹಾಕಿದ ಜನರಿಂದ ತಮ್ಮ ವ್ಯಾಪಾರ ವಹಿವಾಟಿಗೆ ಸಹಕಾರಿಯಾಗುವ ಸರಕು ಸಾಗಣೆಯ ರೈಲು ಮಾರ್ಗಗಳ ನಿರ್ಮಾಣ ಹಾಗೂ ತಮ್ಮ ಕಾರ್ಖಾನೆಗಳಲ್ಲಿ ಕೂಲಿಕಾರ್ಮಿಕರಾಗಿ ದುಡಿಸಿಕೊಳ್ಳತೊಡಗಿದರು. ಇಂತಹ ಅಪರಾಧಿ ಬುಡಕಟ್ಟು ಪಟ್ಟಿಯಲ್ಲಿರುವ ಸಮುದಾಯಗಳಲ್ಲಿ ಹಕ್ಕಿಪಿಕ್ಕಿ ಬುಡಕಟ್ಟೂ ಒಂದಾಗಿದೆ. ಯಾವುದೋ ಒಂದು ಹಂತದಲ್ಲಿ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದು ಅಲೆಮಾರಿಗಳಾಗಿ ರೂಪಾಂತರಗೊಂಡ ಸಮುದಾಯಗಳಲ್ಲಿ ಈ ಬುಡಕಟ್ಟೂ ಒಂದು.

ಹಕ್ಕಿಪಿಕ್ಕಿ ಬುಡಕಟ್ಟಿನವರು ಹೇಳುವ ಪ್ರಕಾರ ಅವರ ಮೂಲವು ಮಧ್ಯಭಾರತದ ವಿಂಧ್ಯಪರ್ವತವಂತೆ. ಹಕ್ಕಿಪಿಕ್ಕಿಗಳು ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ಗೋವಾ ಮುಂತಾದ ರಾಜ್ಯಗಳಲ್ಲಿ ನೆಲೆಸಿರುವರು. ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಈ ಸಮುದಾಯವು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತದೆ. ಹಾಗೆಯೇ ಗುಜರಾತ್, ರಾಜಸ್ಥಾನಗಳಲ್ಲಿಯೂ ಸಹ ಹೆಚ್ಚಿನ ಸಂಖ್ಯೆಯಲ್ಲಿ ಈ ಸಮುದಾಯ ನೆಲೆಸಿದೆ. ಹಕ್ಕಿಪಿಕ್ಕಿಯವರನ್ನು ಪ್ರಾದೇಶಿಕವಾಗಿ ಭಿನ್ನ ಭಿನ್ನ ಹೆಸರುಗಳಿಂದ ಕರೆಯಲಾಗುವುದು. ಕರ್ನಾಟಕವೊಂದರಲ್ಲಿಯೇ ಹಕ್ಕಿಪಿಕ್ಕಿ, ಪಾರ್ಧಿ, ಫಾನ್ಸೆ ಪಾರ್ಧಿ, ನೀಲಶಿಕಾರಿ,

ತಾಕಣಕರಿ, ಪಾಶೆಚಾರಿ, ಹರಿಣಿಶಿಕಾರಿ, ಹರಿಣಶಿಕಾರಿ, ರಾಜ್ ಪಾರ್ಧಿ, ಹಕ್ಕಿಪಿಕ್ಕಿ, ಅಡವಿಚಿಂಚರ್, ಚೆಂಚೇರ್, ಚಿಗರಬೇಟೆಗಾರ್, ಮೇಲುಶಿಕಾರಿ, ನರಿಶಿಕಾರಿ, ನರಿಕೊರವನ್, ನಕ್ಕಲರ್, ಪಿಚ್ಚೆಳ್ಳಿಯೋರು, ಕುರುವಿಕಾರನ್, ಪಿಂಡಂಡೆ, ಪಿಟ್ಟಲೋಳ್ಳು ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಇವೆಲ್ಲವೂ ಒಂದೇ ಸಮುದಾಯಕ್ಕೆ ಕರೆಯುವ ಹೆಸರುಗಳಾಗಿವೆ. ಹಣಕಾಸಿನ ಅಗತ್ಯವಿಲ್ಲದೆ ತಮ್ಮ ಪಾಡಿಗೆ ತಾವಾಗಿ ಕಾಡುಮೇಡಿನಲ್ಲಿ ನೆಲೆಸಿದ್ದ ಹಕ್ಕಿಪಿಕ್ಕಿಯವರನ್ನು ಅರಣ್ಯ ನೀತಿ, ಕಾನೂನುಗಳು ಕಾಡಿನಿಂದ ಹೊರಗುಳಿಯುವಂತೆ ಮಾಡಿದವು. ನಾಗರಿಕ ಪ್ರಪಂಚದೊಂದಿಗೆ ಸಹಜೀವನ ಮಾಡಬೇಕಾದ ಅನಿವಾರ್ಯ ಸ್ಥಿತಿಗೆ ತಳ್ಳಲ್ಪಟ್ಟ ಹಕ್ಕಿಪಿಕ್ಕಿಯರು ತಮ್ಮ ಮೂಲ ಕಸುಬನ್ನು ಬಿಟ್ಟು ಅನ್ಯ ಹುದ್ದೆಗಳಲ್ಲಿ ತೊಡಗಲೇಬೇಕಾಯಿತು. ನಾಗರಿಕ ಪ್ರಪಂಚದ ವ್ಯವಹಾರಗಳೇನಿದ್ದರೂ ಹಣದ ಮಾಪನದಿಂದಲೇ ನಡೆಯುವಂತಾದ್ದು. ಹಣವಿಲ್ಲದೆ ಬದುಕೇ ಇಲ್ಲ ಎಂಬ ಸಮಾಜದಲ್ಲಿ ಅತ್ತ ತಮ್ಮ ಮೂಲ ಕಸುಬೂ ಇಲ್ಲದೆ, ಇತ್ತ ನಾಗರಿಕ ಬದುಕಿನೊಂದಿಗೆ ಹೊಂದಾಣಿಕೆಯಾಗದೆ ಬಳಲುವ ಅಸಾಹಯಕತೆಯು ಹಕ್ಕಿಪಿಕ್ಕಿಯರದಾಗಿದೆ. ಕಾಡಿನಿಂದ ಹೊರದೂಡಲ್ಪಟ್ಟ ಹಕ್ಕಿಪಿಕ್ಕಿ ಬುಡಕಟ್ಟು ಕಾಡಿನಾಚೆಯ ನಾಗರಿಕ ಸಮಾಜದಲ್ಲಿ ಹೇಗೆ ಜೀವನ ನಿರ್ವಹಣೆ ಮಾಡುತ್ತದೆ ಎಂದು ನೋಡುವುದೇ ಈ ಅಧ್ಯಯನದ ಉದ್ದೇಶವಾಗಿದೆ.

ಇಂದು ಆರ್ಥಿಕತೆ ಎಂಬುದು ಮನುಷ್ಯನ ಜೀವನದಲ್ಲಿ ಒಂದು ಮುಖ್ಯವಾದ ಅಂಗವಾಗಿದೆ. ಮಾನವ ಕೈಗೊಳ್ಳುವ ಪ್ರತಿ ಕಾರ್ಯದಲ್ಲಿಯೂ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಆರ್ಥಿಕ(ಹಣ) ಚಟುವಟಿಕೆಯೇ ಕೇಂದ್ರವಾಗಿರುತ್ತದೆ.

ಆರ್ಥಿಕ ಜೀವನವನ್ನು ಯೋಜನಾಬದ್ಧವಾಗಿ ನಿರೂಪಿಸಿ ಅದರಂತೆಯೇ ನಡೆದುಕೊಂಡರೆ ಮಾತ್ರ ಇಂದು ಸಮಾಜದಲ್ಲಿ ಸದೃಢವಾಗಿ ಜೀವನ ನಡೆಸಬಹುದು ಎನ್ನುವ ನಂಬಿಕೆ ಆಧುನಿಕ ಸಮಾಜದ್ದಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಹಕ್ಕಿಪಿಕ್ಕಿ ಬುಡಕಟ್ಟಿನ ಆರ್ಥಿಕ ಜೀವನದ ಹಿನ್ನೆಲೆಯನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

೧.೨. ಉದ್ದೇಶಗಳು

ಅರ್ಥಶಾಸ್ತ್ರದ ಹಿನ್ನೆಲೆಯಲ್ಲಿ ಕಂಪ್ಲಿಯ ಹಕ್ಕಿಪಿಕ್ಕಿ ಬುಡಕಟ್ಟು ಹೇಗೆ ಜೀವನ ನಡೆಸುತ್ತಿದೆ, ಅವರ ಆರ್ಥಿಕ ಮೂಲ ಯಾವುದು ಎಂಬುದನ್ನು ಅರಿಯುವ ಉದ್ದೇಶವನ್ನು ಈ ನಿಬಂಧವು ಒಳಗೊಂಡಿದೆ.

೧. ಹಕ್ಕಿಪಿಕ್ಕಿಯರ ಪಾರಂಪರಿಕ ಮತ್ತು ಅವಲಂಬಿತ ವೃತ್ತಿಗಳನ್ನು ತಿಳಿಯುವುದು.

೨. ಹಕ್ಕಿಪಿಕ್ಕಿಯವರು ಎದುರಿಸುತ್ತರುವ ಆರ್ಥಿಕ ಸಮಸ್ಯೆಗಳನ್ನು ತಿಳಿಯುವುದು.

೩. ಹಕ್ಕಿಪಿಕ್ಕಿಯರಲ್ಲಿ ಆಗಿರುವ ಆರ್ಥಿಕ ಬದಲಾವಣೆಯನ್ನು ಗುರುತಿಸುವುದು.

೪. ಹಕ್ಕಿಪಿಕ್ಕಿಯರ ಒಟ್ಟಾರೆ ಆರ್ಥಿಕ ಜೀವನವನ್ನು ಅಮೂಲಾಗ್ರವಾಗಿ ವಿವರಿಸಿ ವಿಶ್ಲೇಷಿಸುವುದು.

೧.೩. ಅಧ್ಯಯನದ ವ್ಯಾಪ್ತಿ

ಕರ್ನಾಟಕದಾದ್ಯಂತ ಕಂಡುಬರುವ ಅಲೆಮಾರಿ ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯವನ್ನು ಆರ್ಥಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಕಾಲಮಿತಿಯ ದೃಷ್ಟಿಯಿಂದ ಕಷ್ಟಸಾಧ್ಯವಾದ ವಿಚಾರ. ಹೀಗಾಗಿ

ಅಧ್ಯಯನದ ಕಾಲಮಿತಿಗೆ ಹೊಂದಾಣಿಕೆಯಾಗುವಂತೆ ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಬುಡಕಟ್ಟಿನ ಕುಟುಂಬಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕಂಪ್ಲಿಯ ಹಕ್ಕಿಪಿಕ್ಕಿ ಕಾಲೋನಿಯ ಪ್ರತಿಯೊಂದು ಹಕ್ಕಿಪಿಕ್ಕಿ ಕುಟುಂಬವನ್ನೂ ಅಧ್ಯಯನಕ್ಕಾಗಿ ಸಮೀಕ್ಷಿಸಲಾಗಿದೆ.

೧.೪. ಅಧ್ಯಯನದ ಮಹತ್ವ

ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದವರು ಮೂಲತಃ ಅರಣ್ಯವಾಸಿಗಳು. ಅರಣ್ಯದಲ್ಲಿ ಸಿಗುವ ಆಹಾರ ಉತ್ಪನ್ನಗಳನ್ನು ಸಂಗ್ರಹಿಸುತ್ತಾ ಬೇಟೆ, ಪಶುಪಾಲನೆ, ಕೃಷಿ ಕೆಲಸವನ್ನು ಮಾಡುತ್ತಾ ಸ್ವಚಂಧವಾಗಿ ಬದುಕುತ್ತಿದ್ದರು. ಭಾರತಕ್ಕೆ ಬ್ರಿಟೀಷರ ಆಗಮನದ ನಂತರ ಮತ್ತು ಭಾರತವನ್ನು ತಮ್ಮ ಆಡಳಿತಕ್ಕೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಹಾಗೂ ಅರಣ್ಯ ಸಂಪತ್ತನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಬ್ರಿಟೀಷರಿಗೆ ಸವಲಾಗಿದ್ದು, ಈ ಬುಡಕಟ್ಟು ಸಮುದಾಯಗಳು ಆದುದ್ದರಿಂದ ಇವರುಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲ್ಲು ಬ್ರಿಟೀಷರು ಅನೇಕ ರೀತಿಯಾದಂತಹ ಕಾನೂನು ಕಾಯ್ದೆಗಳನ್ನು ಜಾರಿಗೆ ತಂದರು. ಅದರಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಬೇಟೆಯನ್ನು ನಿಷೇಧಿಸಿದರು. ಮತ್ತು ಅರಣ್ಯದಿಂದ ಒಕ್ಕಲೇಬ್ಬಿಸಿದರು. ಹಾಗೇಯೆ ೧೮೭೩ರಲ್ಲಿ ಕ್ರೀಮಿನಲ್ ಟ್ರೈಬ್ ಆಕ್ಟ್ (ಅಪರಾಧಿ ಬುಡಕಟ್ಟು ಕಾಯ್ದೆ)ಯನ್ನು ಜಾರಿಗೆ ತಂದರು ಆಗ ಬುಡಕಟ್ಟು ಸಮುದಾಯಗಳನ್ನು ಬಂಧಿಸಿ ಒಂದು ನಿರ್ಧಿಷ್ಟ ಪ್ರದೇಶದಲ್ಲಿ ಅವರನ್ನು ಇಡಲಾಯಿತು. ಅವುಗಳನ್ನು ಬ್ರಿಟೀಷರು ಸೆಟ್ಲ್‌ಮೆಂಟ್ ಎಂದು ಕರೆದರು. ಅಂದಿನಿಂದ ಬ್ರಿಟೀಷರ ದೌರ್ಜನ್ಯ, ಶೋಷಣೆಗಳನ್ನು ಅನುಭವಿಸುತ್ತಲೇ ಜೀವನವನ್ನು ನಡೆಸಿದರು. ಭಾರತ ಸ್ವಾತಂತ್ರ್ಯವಾದನಂತರ ಇಂತಹ ಸಮುದಾಯಗಳನ್ನು ಅಪರಾಧಿ ಬುಡಕಟ್ಟು ಸಮುದಾಯಗಳು ಎಂಬ ಹೆಸರಿನಿಂದ ವಿಮುಕ್ತಗೊಳ್ಳಿಸಿದರು. ಅಂದಿನಿಂದ ಇಂದಿನವರೆಗೆ ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯವು ತಮ್ಮ ಜೀವನವನ್ನು ಸಾಗಿಸಲು ವಿವಿಧ ವೃತ್ತಿಗಳನ್ನು ಮಾಡುತ್ತಾ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಅಲೆದಾಡುತ್ತಾ ತಮ್ಮ ಜೀವನವನ್ನು ಸಾಗಿಸಿದರು. ಹೀಗೆ ವಿವಿಧ ಪ್ರದೇಶಗಳಲ್ಲಿ ಚದುರಿಹೊದ ಹಕ್ಕಿಪಿಕ್ಕಿಯರು ಬಳ್ಳಾರಿ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಇದರಲ್ಲಿ ಕಂಪ್ಲಿ ಪಟ್ಟಣವು ಒಂದು. ಈ ಕಂಪ್ಲಿ ಪ್ರದೇಶದಲ್ಲಿ ಹಕ್ಕಿಪಿಕ್ಕಿಯರು ಹೇಗೆ ಜೀವನವನ್ನು ನಡೆಸುತ್ತಿದ್ದಾರೆ. ತಮ್ಮ ಜೀವನ ನಿರ್ವಹಣೆಗಾಗಿ ಯಾವ ಯಾವ ವೃತ್ತಿಗಳನ್ನು ಅವಲಂಭಿಸಿದ್ದಾರೆ, ಈ ಆಧುನಿಕತೆಯ ಯುಗದಲ್ಲಿ ಇವರ ಸಾಮಾಜಿಕ ಜೀವನ ಹಾಗೂ ಆರ್ಥಿಕ ಜೀವನ ಹೇಗಿದೆ ಎಂದು ತಿಳಿಸುವುದು ಅಧ್ಯಯನದ ಮಹತ್ವವಾಗಿದೆ.

೧.೫. ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

ಹಕ್ಕಿಪಿಕ್ಕಿ ಸಮುದಾಯಕ್ಕೆ ಸಂಬಂಧಿಸಿದಂತೆ ಹಲವಾರು ಕೃತಿಗಳು, ಲೇಖನಗಳು, ಪತ್ರಿಕಾ ವರದಿಗಳು ಪ್ರಕಟಗೊಂಡಿವೆ. ಅವುಗಳ ವಿವರ ಈ ಕೆಳಗಿನಂತಿದೆ.

೧. ಲಕ್ಕಿ ಪೃಥ್ವಿರಾಜ್, ಶಿಕಾರಿ ರಾಮು ಎಚ್. ಪಿ, 'ಪಾರ್ಧಿ' (ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

ಈ ಪುಸ್ತಕದಲ್ಲಿ ಪಾರ್ಧಿಯವರ ಬಂಧುತ್ವ ಮತ್ತು ವಿವಾಹ ಅರಾಧನೆ ಆಚರಣೆ ನಂಬಿಕೆ ಅವರ ಒಳಾಡಳಿತ ವ್ಯವಸ್ಥೆಯ ಬಗ್ಗೆ ವಿವರಸಿದ್ದು, ಅವರ ಆರ್ಥಿಕ ಜೀವನದ ಬಗ್ಗೆಯು ತಿಳಿಸಿದ್ದಾರೆ. ಇವರ

ಆರ್ಥಿಕ ಜೀವನದಲ್ಲಿ ರಾಜ್ಯದಲ್ಲಿ ಇವರುಗಳು ಕೆಲವು ಕಡೆ ಮಾಡುವಂತಹ ವೃತ್ತಿಗಳ ಬಗ್ಗೆ ವಿವರಣೆ ನೀಡಿದ್ದು ಆಧುನಿಕತೆಯ ಈ ಸಂದರ್ಭದಲ್ಲಿ ಇವರುಗಳ ಕುಲಕಸಬುಗಳು ಮಯಾವಾಗಿವೆ ಎಂದು ತಿಳಿಸಿದ್ದು. ಇತರರಂತೆ ಇವರು ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಿರುವುದಾಗಿ ತಿಳಿಸಿದ್ದಾರೆ. ಇವರುಗಳು ಮಾಡುವ ವೃತ್ತಿಗಳನ್ನು ತಿಳಿಯಲು ಸಂಶೋಧಕನಿಗೆ ಈ ಕೃತಿಯು ಪೂರಕವಾಗಿದೆ.

೨. ಮೇತ್ರಿ ಕೆ. ಎಂ, 'ಬುಡಕಟ್ಟು ಕುಲಕಸಬುಗಳು' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಈ ಕೃತಿಯಲ್ಲಿ ಹಕ್ಕಿಪಿಕ್ಕಿಯರು ಕರ್ನಾಟಕಕ್ಕೆ ರಾಜಸ್ಥಾನದಿಂದ ವಲಸೆ ಬಂದ ಬಗ್ಗೆ ಹಾಗೂ ಕರ್ನಾಟಕದಾದ್ಯಂತ ಇವರುಗಳು ನೆಲೆಸಿರುವ ಕೆಲವು ಸ್ಥಳಗಳ ಬಗ್ಗೆ ತಿಳಿಸುತ್ತಾ ಬಳ್ಳಾರಿ ಜಿಲ್ಲೆಯಲ್ಲಿ ಹರಿಶ್ಚಂದ್ರ ನಗರ, ಹೊಸಪೇಟೆ ತಾಲೂಕಿನ ಉರಮ್ಮನ ಬಯಲು, ಕಾರಿಗನೂರು ಗ್ರಾಮ ಇತ್ಯಾಧಿ ಸ್ಥಳಗಲ್ಲಿ ನೆಲೆಸಿರುದಾಗಿ ಉಲ್ಲೇಖಿಸಿದ್ದಾರೆ. ಹಾಗೂ ಇವರ ಕುಲಕಸಬುಗಳ ಬಗ್ಗೆ ತಿಳಿಸಿದ್ದು. ಅಲೆಮಾರಿಗಳಾಗಿದ್ದಾಗ ಮುಖ್ಯವಾಗಿ ವ್ಯಾಪಾರ, ಬೇಟೆ ಮತ್ತು ಗುಡಿಕೈಗಾರಿಕೆಗಳು ಇವರ ಉಪಕಸಬುಗಳಾಗಿರಬಹುದು ಎಂದು ತಿಳಿಸಿದ್ದಾರೆ. ಇವರ ಮೂಲ ಹಾಗೂ ಕರ್ನಾಟಕದಲ್ಲಿ ಇವರುಗಳು ವಾಸಿಸುತ್ತಿರುವ ಪ್ರದೇಶವನ್ನು ತಿಳಿಯಲು ಹಾಗೂ ಇವರು ಅಲೆಮಾರಿಗಳಾಗಿದ್ದಾಗ ಮಾಡುವ ಕಸಬುಗಳ ಬಗ್ಗೆ ತಿಳಿಯಲು ಈ ಕೃತಿಯು ನೆರವಾಗಿದೆ.

೩. ಮೇತ್ರಿ ಕೆ. ಎಂ, ಮತ್ತು ಚಲುವರಾಜು., (ಸಂ), 'ಬುಡಕಟ್ಟು ಅಧ್ಯಯನ ಸಂಪುಟ–೩' ಸಂಚಿಕೆ–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಈ ಅಧ್ಯಯನ ಪುಸ್ತಕದಲ್ಲಿ ಕರ್ನಾಟಕದ ಎಲ್ಲಾ ಜಿಲ್ಲಾವಾರು ಬುಡಕಟ್ಟು ಸಮುದಾಯಗಳ ಮಾಹಿತಿಯನ್ನು ನೀಡಲಾಗಿದೆ. ೫೦ ಬುಡಕಟ್ಟು ಸಮುದಾಯಗಳು ಕರ್ನಾಟಕದ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಸಂಖ್ಯೆಯಲ್ಲಿದ್ದಾರೆ ಎಂಬುದನ್ನು ಅಂಕಿಅಂಶಗಳ ಸಮೇತ ತಿಳಿಸಿದ್ದಾರೆ. ಬುಡಕಟ್ಟು ಸಮುದಾಯಗಳು ವಾಸಮಾಡುತ್ತಿರುವ ಪ್ರದೇಶ ಮತ್ತು ಅವರ ಸಂಖ್ಯೆಗಳನ್ನು ತಿಳಿಯುವಲ್ಲಿ ಈ ಪುಸ್ತಕವು ಸಂಶೋಧಕರಿಗೆ ನೆರವಾಗಿದೆ.

೪. ನಾಯಕ ಡಿ. ಬಿ, 'ಹಕ್ಕಿಪಿಕ್ಕಿ ಬುಡಕಟ್ಟು ಸಂಸ್ಕೃತಿ' ಬಂಜಾರ ಪ್ರಕಾಶನ, ಗುಲ್ಬರ್ಗ, ೨೦೦೮.

ಈ ಕೃತಿಯಲ್ಲಿ ಹಕ್ಕಿಪಿಕ್ಕಿಯರ ಸಾಮಾಜಿಕ ಸ್ವರೂಪ, ಧಾರ್ಮಿಕ ಸ್ಥಿತಿಗತಿ, ಒಳಾಡಳಿತ ವ್ಯವಸ್ಥೆ, ಆರ್ಥಿಕ ಸ್ಥಿತಿಗತಿ ಹಾಗೂ ಭಾಷಾ ಸಾಹಿತ್ಯದ ಬಗ್ಗೆ ವಿವರಣೆಯನ್ನು ನೀಡಿದ್ದು ಇದರಲ್ಲಿ ಹಕ್ಕಿಪಿಕ್ಕಿಯರ ಧಾರ್ಮಿಕ ಸ್ಥಿತಿಗತಿಯಲ್ಲಿ ಇವರ ಧಾರ್ಮಿಕ ಆಚರಣೆಗಳು, ವಿಧಿವಿಧಾನಗಳು ಬಗ್ಗೆ ವಿವರಿಸಿದ್ದಾರೆ. ಹಕ್ಕಿಪಿಕ್ಕಿಯರು ಧಾರ್ಮಿಕ ಆಚರಣೆಗಳಲ್ಲಿ ಬಹು ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸುವುದಾಗಿ ತಿಳಿಯುತ್ತದೆ. ಹಾಗೂ ಇವರುಗಳಿಗೆ ದೈವದ ಬಗ್ಗೆ ಇರುವ ಅಪಾರ ನಂಬಿಕೆಗಳ ಬಗ್ಗೆ ಹೇಳಿದ್ದಾರೆ. ಮತ್ತು ಆರ್ಥಿಕ ಸ್ಥಿತಿಗತಿಯಲ್ಲಿ ಮೂಲ ಕಸಬುಗಳಾದಂತಹ ಬೇಟೆಯ ಬಗ್ಗೆ, ಬೇಟೆಯ ತಂತ್ರದ ಬಗ್ಗೆ ತಿಳಿಸಿದ್ದಾರೆ. ಬೇಟೆಯ ಬಗ್ಗೆ ಇವರಿಗಿದ್ದ ಬುದ್ಧಿವಂತಿಕೆಯು ತುಂಬ ವಿಶೇಷವಾಗಿರುವುದು ಕಂಡುಬರುತ್ತದೆ. ಇವುಗಳು ಸಂಶೋಧಕರ ಅಧ್ಯಯನಕ್ಕೆ ಪೂರಕವಾಗಿದೆ.

೫. ತಾರಿಹಳ್ಳಿ ಹನುಮಂತಪ್ಪ., (ಸಂ), 'ಕರ್ನಾಟಕದ ಬುಡಕಟ್ಟು ಸಮುದಾಯಗಳು' ಮಲ್ಲಿಕಾರ್ಜುನ ಬಿ ಮಾನ್ವಡೆ., (ಲೇ) 'ಹಕ್ಕಿಪಿಕ್ಕಿ ಸಾಮುದಾಯದ ಸ್ಥಿತ್ಯಂತರಗಳು' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಈ ಲೇಖನದಲ್ಲಿ ಹಕ್ಕಿಪಿಕ್ಕಿ ಸಾಮುದಾಯದವರ ಐತಿಹ್ಯದ ಕುರಿತು ನಂಬಿಕೆಗಳು ಹಾಗೂ ಕಾರಣಗಳಲ್ಲಿ ಅಕ್ಬರ ಮತ್ತು ರಾಣ ಪ್ರತಾಪ್‌ಸಿಂಗ್‌ನ ಕಾಳಗದಿಂದ ತಪ್ಪಿಸಿಕೊಂಡು ಕಾಡುಪಾಲಾದ ಬಗ್ಗೆ ಉಲ್ಲೇಖಿಸಿದ್ದು ಜೀವನ ನಿರ್ವಹಣೆಗಾಗಿ ಅಲೆದಾಡುತ್ತಾ ದೇಶದ ಬೇರೆ ಬೇರೆ ಕಡೆ ನೆಲೆಸಿದ್ದಾರೆಂದು ತಿಳಿಸಿದ್ದಾರೆ. ಕುಲಕಸಬುಗಳ ಬಗ್ಗೆಯು ಮಾಹಿತಿಯನ್ನು ನೀಡಿದ್ದು ಅರಣ್ಯ ಕಾಯ್ದೆಯಿಂದ ಶಿಕಾರಿ ಮಾಡುವುದು ಸಾಧ್ಯವಾಗದೆ ವಿವಿದ ಕೈಕಸಬುಗಳಾದ ಗೊಂಬೆಗಳ ತಯಾರಿಕೆ, ರುದ್ರಾಕ್ಷಿ, ಬಟ್ಟೆಯ ಹೂ, ಪ್ಲಾಸ್ಟಿಕ್ ಮಣಿ ಸರ ಇತ್ಯಾದಿಗಳನ್ನು ತಯಾರಿಸಿ ಮಾರುತ್ತಿರುವ ಬಗ್ಗೆ ತಿಳಿಸಿದ್ದಾರೆ. ಹಕ್ಕಿಪಿಕ್ಕಿಯರ ಐತಿಹ್ಯ ನಂಬಿಕೆಗಳ ಕುರಿತು ತಿಳಿಯುವಲ್ಲಿ ಹಾಗೂ ಕೈಕಸಬುಗಳ ಬಗ್ಗೆ ತಿಳಿಯುವಲ್ಲಿ ಸಂಶೋಧಕರಿಗೆ ಈ ಲೇಖನವು ಸಹಾಯಕಾರಿಯಾಗಿದೆ.

೬. ತಾರಿಹಳ್ಳಿ ಹನುಮಂತಪ್ಪ, (ಸಂ), 'ಕರ್ನಾಟಕದ ಬುಡಕಟ್ಟು ಸಮುದಾಯಗಳು' ತಾರಾಚಂದ್ ಕೆ. ಸಿ., (ಲೇ) 'ಹಕ್ಕಿಪಿಕ್ಕಿ ಜನಾಂಗದ ಆರೋಗ್ಯ ಒಂದು ವಿಶ್ಲೇಷಣೆ' ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಈ ಕೃತಿಯಲ್ಲಿ ಲೇಖಕರು ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಹಕ್ಕಿಪಿಕ್ಕಿಯರ ಆಯುರ್ವೇಧ ಔಷಧಿಯನ್ನು ತಯಾರಿಸುವ ಜ್ಞಾನದ ಬಗ್ಗೆ ವಿವರಿಸಿದ್ದು ಕಾಡುಗಳಲ್ಲಿ ಸಿಗುವಂತಹ ಔಷಧಿ ಗುಣಗಳುಳ್ಳ ಗೀಡ, ಬಳ್ಳಿ, ಬೇರು, ಎಲೆಗಳನ್ನು ಉಪಯೋಗಿಸಿ ಕಾಯಿಲೆಗೆ ಔಷಧಿ ನೀಡುವ ಪಾರಂಪರಿಕ ಜ್ಞಾನದ ಬಗ್ಗೆ ತಿಳಿಸಿದ್ದಾರೆ. ಹಕ್ಕಿಪಿಕ್ಕಿಯರ ಪಾರಂಪರಿಕ ಜ್ಞಾನವನ್ನು ಅಭ್ಯಾಸಿಸುವ ನಿಟ್ಟಿನಲ್ಲಿ ಈ ಲೇಖನವು ಸಂಶೋಧಕರಿಗೆ ಪೂರಕವಾಗಿದೆ.

೭. ಲಕ್ಕಪ್ಪ ಗೌಡ ಹೆಚ್. ಜೆ, (ಪ್ರಸಂ), ನಾಯಕ್ ಎನ್. ಆರ್., ಬೋರಲಿಂಗಯ್ಯ ಹಿ. ಚಿ., (ಸಂ), 'ಕಾರ್ನಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸಂಪುಟ–೨' ನಾಯಕ್ ಎನ್. ಆರ್. (ಲೇ) 'ಹಕ್ಕಿಪಿಕ್ಕಿಯರು' ಬೆಂಗಳೂರು,

ಈ ಲೇಖನದಲ್ಲಿ ಹಕ್ಕಿಪಿಕ್ಕಿಯರ ಸಾಮಾಜಿಕ ಜೀವನ, ಧಾರ್ಮಿಕ ಜೀವನ, ಹಕ್ಕಿಪಿಕ್ಕಿ ಬುಡಕಟ್ಟಿನ ಪೌರಾಣಿಕ, ಐತಿಹಾಸಿಕ ಹಿನ್ನೆಲೆ ಹಾಗೂ ಅವರ ಜೀವನಾರ್ವತ ಆಚರಣೆಗಳ ಬಗ್ಗೆ ವಿವರಿಸಿದ್ದಾರೆ. ಇದರಲ್ಲಿ ಹಕ್ಕಿಪಿಕ್ಕಿಯರ ಐತಿಹ್ಯ ಕುರಿತು ಹಕ್ಕಿಪಿಕ್ಕಿಯರ ಮೂಲ ಪುರುಷ ಕಾಂಚ ಬಗ್ಗೆ ತಿಳಿಸಿದ್ದಾರೆ. ಹಾಗೂ ಹಕ್ಕಿಪಿಕ್ಕಿಯರ ಬಗ್ಗೆ ಇರುವ ಇತರೆ ಐತಿಹ್ಯಗಳ ಬಗ್ಗೆ ವಿವರಿಸಿದ್ದು ಹಕ್ಕಿಪಿಕ್ಕಿಯರ ಐತಿಹ್ಯವನ್ನು ತಿಳಿಯುವುದಕ್ಕೆ ಸಂಶೋಧಕರಿಗೆ ಈ ಲೇಖನವು ಅನುಕೂಲವಾಗಿದೆ. ಹಾಗೇಯೇ ಹಕ್ಕಿಪಿಕ್ಕಿಯರು ಕ್ರಿಮಿನಲ್ ಟ್ರೈಬ್ ಕಾಯ್ದೆ ೧೮೭೧ ಜಾರಿಗೆ ಬಂದ ನಂತರ ಪೋಲಿಸರ ಕಾರ್ಯಚರಣೆಗೆ ಎದರಿ ಇವರುಗಳು ದೇಶದಲ್ಲಿ ಬೇರೆ ಬೇರೆ ಸ್ಥಳಗಳಿಗೆ ಪಸರಿಸಿದರು ಎಂದು ತಿಳಿಸಿದ್ದಾರೆ. ಈ ಎಲ್ಲಾ ಅಂಶಗಳು ಸಂಶೋಧಕರ ಅಧ್ಯಯನಕ್ಕೆ ಅನುಕೂಲವಾಗಿದೆ.

೮. ಶ್ರೀನಿವಾಸ್ ಎಲ್, (ಸಂ), 'ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು' ಗಣೇಶ್ ಎಚ್. ಎಂ., (ಲೇ), 'ಪಕ್ಷಿರಾಜಪುರದ ಹಕ್ಕಿಪಿಕ್ಕಿ ಜನಾಂಗದ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳು'

ಈ ಲೇಖನದಲ್ಲಿ ಲೇಖಕರು ಹಕ್ಕಪಿಕ್ಕಿಯರಿಗೆ ೧೯೫೪ ರಲ್ಲಿ ಭಾರತ ಸರ್ಕಾರ ಗಿರಿಜನ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಪಕ್ಷಿರಾಜಾಪುರ ಎಂಬ ಗ್ರಾಮದಲ್ಲಿ ಪುನರ್ವಸತಿ ಸ್ಥಳವನ್ನು ನೀಡಲಾಗಿರುವ ಕುರಿತು ತಿಳಿಸಿದ್ದಾರೆ. ಅವರ ಆರ್ಥಿಕ ಜೀವನ ಮತ್ತು ಬದಲಾವಣೆಗಳಲ್ಲಿ ಹಕ್ಕಿಪಿಕ್ಕಿಯರು ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡಿ ಅದರಲ್ಲಿ ಸಿಗುವ ಕೊಬ್ಬಿನಾಂಶದಿಂದ ಔಷಧಿಯನ್ನು ತಯಾರಿಸುತ್ತಿದ್ದ ಬಗ್ಗೆ ವಿವರಿಸಿದ್ದು. ಇವರಿಗೆ ಇರುವಂತಹ ಕೈಕಸಬಿನ ಕೌಶಲ್ಯದ ಬಗ್ಗೆ ತಿಳಿಸಿದ್ದಾರೆ. ಈ ಎಲ್ಲಾ ಅಂಶಗಳು ಸಂಶೋಧಕರ ಅಧ್ಯಯನಕ್ಕೆ ನೆರವಾಗಿದೆ.

೯. ಶ್ರೀನಿವಾಸ್ ಎಲ್, (ಸಂ), 'ಪರಿವರ್ತನೆಯ ಹಾದಿಯಲ್ಲಿ ಬುಡಕಟ್ಟು ಸಮಾಜಗಳು' ತಾರಿಹಳ್ಳಿ ಹನುಮಂತಪ್ಪ, (ಲೇ), ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳು'

ಈ ಲೇಖನದಲ್ಲಿ ಲೇಖಕರು ಬಳ್ಳಾರಿ ಜಿಲ್ಲೆಯ ಬುಡಕಟ್ಟುಗಳನ್ನು ಅರಣ್ಯವಾಸಿ, ನಾಡವಾಸಿ ಬುಡಕಟ್ಟುಗಳು, ಅಲೆಮಾರಿ ಬುಡಕಟ್ಟುಗಳು, ಅರೆ ಅಲೆಮಾರಿ ಬುಡಕಟ್ಟುಗಳು ಎಂಬಂತೆ ನಾಲ್ಕು ಭಾಗಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಅರಣ್ಯವಾಸಿ ಬುಡಕಟ್ಟುಗಳಲ್ಲಿ ಚಂಚರು, ಅಡವಿಚಂಚರನ್ನು ಗುರುತಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಕಾಡುಕುರುಬ, ಬೇಡ, ನಾಯಕ, ತಳವಾರ, ಪರಿವಾರ, ಮುದ್ದೆಗಂಬಾರ, ಕಮ್ಮಾರ, ಮಲಯ, ಮಲ್ಲೆತಾಯ, ಸೋಲಿಗರು, ಪಾರ್ಧಿ, ಕೊರಗ, ಗೊಂಡ, ತೊಡ, ಹಸಲರು, ಯರವ, ಭಿಲ್ಲರು ಇತ್ಯಾದಿ ಸಮುದಾಯಗಳು ಬುಡಕಟ್ಟು ಸಮುದಾಯಗಳು ಹಾಗಿವೆ ಎಂದು ಉಲ್ಲೇಖಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿರುವ ಬುಡಕಟ್ಟು ಸಮುದಾಯಗಳನ್ನು ತಿಳಿಯುವಲ್ಲಿ ಈ ಲೇಖನವು ಸಂಶೋಧಕನಿಗೆ ಪೂರಕವಾಗಿವೆ.

೧೦. ಮಲ್ಲಿಕಾರ್ಜುನ ಬಿ ಮಾನ್ಪಡೆ, 'ತಂತಿ ಬೇಲಿಯೊಳಗಿನ ಜಗತ್ತು' ಗೀತಾಂಜಲಿ ಪುಸ್ತಕ ಪ್ರಕಾಶನ, ಬೆಂಗಳೂರು, ೨೦೧೪.

ಈ ಕೃತಿಯಲ್ಲಿ ಲೇಖಕರು ಪಾರ್ಧಿಯವರು ಸಹ ಅಪರಾಧಿ ಬುಡಕಟ್ಟು ಸಮುದಾಯಗಳಲ್ಲಿ ಒಂದು ಎಂದು ಹೇಳಿದ್ದು ಪಾರ್ಧಿಯವರ ಕರ್ನಾಟಕದ ಸೆಟ್ಲ್‌ಮೆಂಟ್‌ಗಳ ಬಗ್ಗೆ ವಿವರಣೆ ನೀಡಿದ್ದಾರೆ. ಕರ್ನಾಟಕದಲ್ಲಿ ಬಾಗಲಕೋಟೆ, ಬಿಜಾಪುರ, ಗದಗ, ಹುಬಳ್ಳಿ ಸೆಟ್ಲ್‌ಮೆಂಟ್‌ಗಳಲ್ಲಿ ನೆಲೆಸಿದ್ದರೆಂದು ತಿಳಿಸಿದ್ದು ಬಳ್ಳಾರಿ ಇತರೆ ಸೆಟ್ಲ್‌ಮೆಂಟ್‌ಗಳಲ್ಲಿ ಇವರು ಇದಿದ್ದಾಗಿ ತಿಳಿಸಿದ್ದಾರೆ. ಈ ಪುಸ್ತಕ ಅಪರಾಧಿ ಬುಡಕಟ್ಟುಗಳ ಬಗ್ಗೆ ತಿಳಿದುಕೊಳ್ಳಲು ಸಂಶೋಧಕನಿಗೆ ಪೂರಕವಾಗಿದೆ.

೧೧. ಕುಮುದಾ ಬಿ ಸುಶಿಲಪ್ಪ, 'ಹಕ್ಕಿಪಿಕ್ಕಿ' (ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

ಈ ಪುಸ್ತಕದಲ್ಲಿ ಲೇಖಕರು ಹಕ್ಕಿಪಿಕ್ಕಿಯರ ಜೀವನ ಕ್ರಮಗಳನ್ನು ವಿವರಿಸಿದ್ದು ಇದರಲ್ಲಿ ಬಂಧುತ್ವ ಮತ್ತು ವಿವಾಹ ಪದ್ಧತಿಯ ಬಗ್ಗೆ ತಿಳಿಸಿದ್ದಾರೆ. ತೆರ ಕೊಡುವ ಪದ್ಧತಿಯ ಕುರಿತು ವಿವರಿಸಿದ್ದು ಈ

ಪದ್ಧತಿಯು ಈ ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯಗಳಲ್ಲಿ ವಿಶೇಷವಾದ ಪದ್ಧತಿ ಎಂದು ತಿಳಿಸಿದ್ದು. ಹಕ್ಕಿಪಿಕ್ಕಿಯರು ಹೆಣ್ಣಿಗೆ ಸರಿಸಮಾನವಾದ ಸ್ಥಾನಮಾನವನ್ನು ಕೊಟ್ಟಿದ್ದಾರೆಂದು ಲೇಖಕರು ತಿಳಿಸಿದ್ದಾರೆ. ಹಕ್ಕಿಪಿಕ್ಕಿಯರ ವಿವಾಹ ಪದ್ಧತಿಯನ್ನು ತಿಳಿಯುವ ನಿಟ್ಟಿನಲ್ಲಿ ಈ ಪುಸ್ತಕವು ಸಂಶೋಧಕರಿಗೆ ಪೂರಕವಾಗಿದೆ.

೧೨. ಡಾ. ಚಿಕ್ಕಣ ಯಣ್ಣೆಕಟ್ಟೆ, 'ಬುಡಕಟ್ಟು ಜನಾಂಗ ಮತ್ತು ಸಂಸ್ಕೃತಿ' ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ತುಮಕೂರು, ೨೦೧೩

ಈ ಪುಸ್ತಕದಲ್ಲಿ ಲೇಖಕರು ತುಮಕೂರು ಜಿಲ್ಲೆಯಲ್ಲಿ ವಾಸಿಸುತ್ತಿರುವ ಹಕ್ಕಿಪಿಕ್ಕಿಯರ ಕುರಿತು ಮಾಹಿತಿಯನ್ನು ನೀಡಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ವಿವಿದ ಕಡೆಗಳಲ್ಲಿ ಇವರುಗಳು ವಾಸಮಾಡುತ್ತಿದ್ದಾರೆಂದು ತಿಳಿಸಿದ್ದು, ಹಕ್ಕಿಪಿಕ್ಕಿಯರು ಮಾಡುತ್ತಿರುವ ಕಾಯಕದ ಬಗ್ಗೆ ಪ್ರಸ್ತಾಪಿಸುತ್ತಾ ಇವರುಗಳು ಯಾವುದೇ ನಿರ್ಧಿಷ್ಟವಾದ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳಿದ್ದು, ಕೆಲವರು ಹೈನುಗಾರಿಕೆ, ವ್ಯವಸಾಯ, ಗಾರೆ ಮುಂತಾದ ಕೆಲಸಗಳನ್ನು ಮಾಡುತ್ತಿರುವುದಾಗಿ ತಿಳಿಸಿದ್ದಾರೆ. ಹಾಗೇಯೇ ಕೆಲವು ಕಾಡಿನ ಉತ್ಪನ್ನಗಳನ್ನು ಮಾರುತ್ತಾರೆಂದು ಹೇಳಿದ್ದು ಹಕ್ಕಿಪಿಕ್ಕಿಯರು ಮಾಡುವ ವೃತ್ತಿಯನ್ನು ತಿಳಿಯಲು ಈ ಪುಸ್ತಕವು ಸಂಶೋಧಕರ ಅಧ್ಯಯನಕ್ಕೆ ಸಹಾಯಕಾರಿಯಾಗಿದೆ.

೧೩. ಗುರುಲಿಂಗಯ್ಯ ಎಂ, 'ಬುಡಕಟ್ಟುಗಳು ಮತ್ತು ಅಭಿವೃದ್ಧಿ' ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾಲಯ, ೨೦೦೪.

ಈ ಪುಸ್ತಕದಲ್ಲಿ ಲೇಖಕರು ಭಾರತದ ಬುಡಕಟ್ಟುಗಳು ಅವರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಜೀವನ, ಅವರ ಸಮಸ್ಯೆಗಳು ಬುಡಕಟ್ಟುಗಳು ಮತ್ತು ಅಭಿವೃದ್ಧಿಯ ಬಗ್ಗೆ ತಿಳಿಸಿದ್ದಾರೆ. ಇದರಲ್ಲಿ ಸಂವಿಧಾನದ ಸವಲತ್ತುಗಳು ಮತ್ತು ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಬುಡಕಟ್ಟಗಳ ಸಂವಿಧಾನಬದ್ದವಾದ ಹಕ್ಕು ಬಗ್ಗೆ ತಿಳಿಸಿದ್ದು ಇದರಲ್ಲಿ ಸಂವಿಧಾನದ ಕೆಲವು ಕಾಲಂಗಳು ಬುಡಕಟ್ಟುಗಳಿಗೆ ಸರ್ಕಾರದಿಂದ ಮಿಸಲು ಸೌಲಭ್ಯ ಪಡೆಯಲು ಅವಕಾಶ ಮಾಡಿಕೊಟ್ಟಿದೆ ಎಂದು ತಿಳಿಸುತ್ತಾ ಕೆಲವು ಸಂವಿಧಾನದ ಅನುಚ್ಛೆದಗಳನ್ನು ವಿವರಿಸಿದ್ದಾರೆ. ಈ ಪುಸ್ತಕವು ಬುಡಕಟ್ಟುಗಳಿಗಿರುವ ಸಂವಿಧಾನದ ಸೌಲಭ್ಯಗಳನ್ನು ತಿಳಿಯಲು ಸಂಶೋಧಕರಿಗೆ ನೆರವಾಗಿದೆ.

೧೪. ಲಕ್ಕಿ ಪೃಥ್ವಿರಾಜ್, 'ಪಾರ್ಧಿ ಬುಡಕಟ್ಟು: ಒಂದು ಮಾನವಶಾಸ್ತ್ರೀಯ ಅಧ್ಯಯನ' ಪಿಎಚ್. ಡಿ. ಮಹಾಪ್ರಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

ಈ ಪಿಎಚ್.ಡಿ ಮಹಾಪ್ರಬಂಧದಲ್ಲಿ ಪಾರ್ಧಿಯವರು ಕುಲಕಸಬುಗಳ ಬಗ್ಗೆ ವಿವರಿಸಿದ್ದು ಪಾರ್ಧಿಯವರು ಕೇವಲ ಯಾವುದೋ ಒಂದು ಕಸಬನ್ನು ಮಾಡಿಕೊಂಡಿರದೆ ನಾನಾ ಕಸಬುಗಳನ್ನು ಮಾಡುವವರಾಗಿದ್ದಾರೆಂದು ತಿಳಿಸುತ್ತಾ ಇಂದು ಇವರುಗಳು ತಮ್ಮ ಜೀವನವನ್ನು ನಡೆಸಲು ಭೂಮಾಲಿಕರ ಅಡಿಯಲ್ಲಿ ಕೃಷಿಕಾರ್ಮಿಕರಾಗಿ ಹೊಲ, ಗದ್ದೆ, ತೋಟಗಳಲ್ಲಿ ದುಡಿದು ತಮ್ಮ ಜೀವನ ಸಾಗಿಸುತ್ತಿದ್ದಾರೆಂದು ತಿಳಿಸಿದ್ದಾರೆ. ಹಕ್ಕಿಪಿಕ್ಕಿಯರ ಕಸಬುಗಳನ್ನು ತಿಳಿಯುವ ನಿಟ್ಟಿನಲ್ಲಿ ಈ ಮಹಾಪ್ರಬಂಧವು ಸಂಶೋಧಕರಿಗೆ ಪೂರಕವಾಗಿದೆ.

೧೫. ಸುದರ್ಶನ್ ಎಂ, 'ಬದಲಾಗುತ್ತಿರುವ ಸಮಾಜದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಆರ್ಥಿಕ ಸ್ಥಿತಿಗತಿ' ಎಂ. ಫಿಲ್. ನಿಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಈ ನಿಬಂಧದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಚಾರಿತ್ರಿಕ ಬೆಳವಣಿಗೆ, ಪಾರಂಪರಿಕ ಉತ್ಪಾದನ ವಿಧಾನ, ಹಕ್ಕಿಪಿಕ್ಕಿಯರ ಸ್ವಾತಂತ್ರ್ಯ ನಂತರದ ಸ್ಥಿತ್ಯಂತರಗಳ ಬಗ್ಗೆ ತಿಳಿಸಿದ್ದು ಹಕ್ಕಿಪಿಕ್ಕಿ ಸಮುದಾಯದವರು ಸಣ್ಣ ಭೂ ಹಿಡುವಳಿಯನ್ನು ಹೊಂದಿದವರು ಎಂದು ತಿಳಿಸಿದ್ದು. ಕೃಷಿ ಭೂಮಿಗಳನ್ನು ಹೊಂದಿರುವವರು ತುಂಬಾ ಕಡಿಮೆ ಇದ್ದಾರೆಂದು ತಿಳಿಸಿದ್ದಾರೆ. ಆಧುನಿಕ ಸಂದರ್ಭದಲ್ಲಿ ಇವರ ಕುಲಕಸಬು ಮತ್ತು ಗುಡಿಕೈಗಾರಿಕೆಗಳು ನಾಶವಾಗಿದ್ದು ಈ ಸಮುದಾಯದವರು ತಮ್ಮ ಜೀವನವನ್ನು ಸಾಗಿಸಲು ಇಂದು ವಿವಿಧ ರೀತಿಯ ಕೂಲಿ ವೃತ್ತಿಗಳನ್ನು ಮಾಡುತ್ತಿರುವುದು ಕಂಡುಬರುವುದಾಗಿ ತಿಳಿಸಿದ್ದಾರೆ. ಇವರ ಆರ್ಥಿಕ ಸ್ಥಿತ್ಯಂತರಗಳನ್ನು ತಿಳಿಯುವಲ್ಲಿ ಈ ನಿಬಂಧವು ಸಂಶೋಧಕರಿಗೆ ಅನುಕೂಲವಾಗಿದೆ.

೧೬. ವಿಜಯಲಕ್ಷ್ಮಿ ಎಂ, 'ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ' ಎಂ ಫಿಲ್, ನಿಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಈ ನಿಬಂಧದಲ್ಲಿ ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ ಕುರಿತು ಚರ್ಚಿಸಿದ್ದು ಹಕ್ಕಿಪಿಕ್ಕಿ ಸಮುದಾಯ ಮತ್ತು ಸಾಮಾಜಿಕ, ಆರ್ಥಿಕ ಬದುಕಿನ ಸ್ಥಿತ್ಯಂತರಗಳ ಬಗ್ಗೆ ವಿವರಿಸಿದ್ದು ಹಕ್ಕಿಪಿಕ್ಕಿಯರು ಪಾರಂಪರಿಕ ವೃತ್ತಿಯಲ್ಲಿಯೇ ಮುಂದುವರೆದಿರುವುದರಿಂದ ಸಾಮಾಜಿಕ ಸ್ಥಾನಮಾನಗಳನ್ನು ಉನ್ನತೀಕರಿಸಿಕೊಳ್ಳಲು ವಿಫಲವಾಗಿದ್ದಾರೆ. ಎಂದು ತಿಳಿಸಿದ್ದು ಆರ್ಥಿಕ ಸ್ವಾವಲಂಭನೆ, ಹಣಕಾಸು, ವ್ಯವಹಾರದಲ್ಲಿನ ಜ್ಞಾನ ಇವರಿಗೆ ಕಡಿಮೆ ಬಡತನ ಇರುವ ಕಾರಣ ಉನ್ನತ ವಿದ್ಯಾಭ್ಯಾಸ ಕೋಡಿಸುವುದು ಕಷ್ಟವಾಗಿ ಓದುವ ಮನಸ್ಸಿದ್ದರು ಹಣಕಾಸಿನ ತೊಂದರೆಯಿಂದ ಅರ್ಧದಲ್ಲಿಯೇ ಶಾಲೆಯನ್ನು ಬಿಟ್ಟಿದ್ದಾರೆಂದು ತಿಳಿಸಿದ್ದಾರೆ. ಕೆಳಜಾತಿಯವರೇ ಎಂದೆನಿಸಿರುವ ಇವರ ಸಾಮಾಜಿಕ ವ್ಯವಸ್ಥೆಯಲ್ಲಿ ಇವರ ಸ್ಥಾನಮಾನ ಕೆಳಮಟ್ಟದಾಗಿದೆ ಎಂದು ಹೇಳಿದ್ದಾರೆ. ಇವರ ಸಾಮಾಜಿಕ ಬದಲಾವಣೆಯ ಕುರಿತು ತಿಳಿಯುವಲ್ಲಿ ಈ ನಿಬಂಧವು ಸಂಶೋಧಕರಿಗೆ ನೆರವಾಗಿದೆ.

೧೭. ನಾಗೇಶ ಎಂ, 'ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ' ಎಂ. ಫಿಲ್, ನಿಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩.

ಈ ನಿಬಂಧದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆಯ ಕುರಿತು ಚರ್ಚಿಸಿದ್ದು ಹಕ್ಕಿಪಿಕ್ಕಿಯರು ವಾಸಿಸುವ ಪ್ರದೇಶದಲ್ಲಿ ಬದಲಾವಣೆಯಾಗುತ್ತಿದ್ದು ಸುತ್ತಲಿನ ಸಮುದಾಯಗಳ ಪ್ರಭಾವದಿಂದಾಗಿ ತಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದು ತಿಳಿಸಿದ್ದಾರೆ. ಇಂದಿಗೂ ಇವರನ್ನು ಅಸ್ಪೃಶ್ಯರಂತೆ ಕಾಣುತಿರುವುದಾಗಿ ತಿಳಿಸಿದ್ದು ಸ್ವಂತ ಆಸ್ತಿಗಳನ್ನು ಹೊಂದಿರದ ಇವರು ಕೃಷಿಕೂಲಿಗಳಾಗಿ ಬದುಕುತ್ತಿದ್ದಾರೆಂದು ತಿಳಿಸಿದ್ದಾರೆ. ಇವರ ಸಾಮಾಜಿಕ ಜೀವನದ ಬದಲಾವಣೆಗಳನ್ನು ತಿಳಿಯುವಲ್ಲಿ ಈ ನಿಬಂಧವು ಸಂಶೋಧಕರ ಅಧ್ಯಯನಕ್ಕೆ ಪೂರಕವಾಗಿದೆ.

೧.೬. ಸಂಶೋಧನ ವಿಧಾನಗಳು

ಪ್ರಸ್ತುತ ಅಧ್ಯಯನವು ಕ್ಷೇತ್ರಕಾರ್ಯಾಧಾರಿತವಾಗಿದ್ದು ಕಂಪ್ಲಿಯ ಹಕ್ಕಿಪಿಕ್ಕಿ ಕಾಲೋನಿಯಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿನ ಹಕ್ಕಿಪಿಕ್ಕಿ ಸಮುದಾಯದವರಿಂದ ಹಾಗೂ ಸಮುದಾಯದ ಬಗ್ಗೆ ಹೆಚ್ಚು ತಿಳುವಳಿಕೆಯನ್ನು

ಹೊಂದಿರುವ ಹಿರಿಯ ಮುಖಂಡರಿಂದ ಮಾಹಿತಿ ಪಡೆಯಲಾಗಿದೆ. ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕೃತಿಗಳು, ಲೇಖನಗಳು ಹಾಗೂ ವಿಷಯಗಳನ್ನು ಅರಿತುಕೊಂಡು ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಪ್ರಬಂಧವನ್ನು ಕಟ್ಟಿಕೊಡಲಾಗಿದೆ.

೧.೬.೧. ಐತಿಹಾಸಿಕ ವಿಧಾನ

ಹಕ್ಕಿಪಿಕ್ಕಿ ಸಮುದಾಯದ ಐತಿಹಾಸಿಕ ಅಂಶಗಳು, ಕುಲಕಸುಬುಗಳು ಅರಣ್ಯದಲ್ಲಿ ಆಹಾರ ಉತ್ಪನ್ನಗಳನ್ನು ಸಂಗ್ರಹಿಸುವುದು, ಬೇಟೆ, ಪಶುಪಾಲನೆ, ಕೃಷಿ, ಕೆಲಸದಾಳಾಗಿ ದುಡಿಯುವುದು ಇವರ ಪ್ರವೃತ್ತಿಯಾಗಿದೆ. ತಮ್ಮ ಸಾಮಾಜಿಕ ಜೀವನದ ಸಂಸ್ಕೃತಿ ಮತ್ತು ಆಚರಣೆಯಲ್ಲಿ ಬಹು ಪ್ರಾಮುಖ್ಯತೆಯನ್ನು ಹೊಂದಿವೆ. ಆದ್ದರಿಂದ ವಿವಿಧ ರೀತಿಯಲ್ಲಿ ಮಾಹಿತಿ ಪಡೆದುಕೊಂಡು ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿಯೊಂದಿಗೆ ಪ್ರಬಂಧವನ್ನು ರಚನೆ ಮಾಡಲಾಗಿದೆ.

೧.೬.೨. ಅವಲೋಕನ ವಿಧಾನ

ಸಂಶೋಧನ ಕ್ಷೇತ್ರಕಾರ್ಯದಲ್ಲಿ ಅವಲೋಕನ ವಿಧಾನವು ಮುಖ್ಯವಾದದ್ದು. ಆಚರಣೆಗಳು, ಜೀವನದ ವಿಧಿವಿಧಾನಗಳಾದ ಕೆಲವು ಪ್ರಮುಖ ಅಂಶಗಳನ್ನು ಅವಲೋಕನ ವಿಧಾನ ಮೂಲಕ ಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಮುದಾಯದ ಅಂತರಾಳದಲ್ಲಿ ಅಡಗಿರುವ ಮಾಹಿತಿ ಮತ್ತು ಇವರ ಬದುಕಿನ ಸಮಸ್ಯೆ ಸವಾಲುಗಳಿಗೆ ಸಂಬಂಧಿಸಿದಂತೆ ಅವಲೋಕನದ ಮೂಲಕ ಗ್ರಹಿಸಿ ಸಂಶೋಧನೆಗೆ ಅಳವಡಿಸಲಾಗಿದೆ.

೧.೬.೩. ಪ್ರಶ್ನಾವಳಿ ವಿಧಾನ

ಅಧ್ಯಯನಕ್ಕೆ ಸಂಬಂಧಿಸಿದಂತೆ ಸಮುದಾಯದವರಿಂದ ಮಾಹಿತಿ ಪಡೆಯಲು ಪ್ರಶ್ನಾವಳಿಯು ಪ್ರಮುಖ ಪಾತ್ರವಹಿಸುತ್ತದೆ. ಅಧ್ಯಯನದ ಮುಖ್ಯ ಉದ್ದೇಶಗಳಿಗೆ ಅನುಗುಣವಾಗಿ ವಿವಿಧ ಅಯಾಮಗಳಲ್ಲಿ ಹಲವಾರು ಪ್ರಶ್ನೆಗಳನ್ನು ಹೊಂದಿರುವ ಸೂಕ್ತ ಪ್ರಶ್ನಾವಳಿಯನ್ನು ತಯಾರಿಸಿಕೊಂಡು ಮಾಹಿತಿಯನ್ನು ಪಡೆಯಲಾಗಿದೆ.

೧.೬.೪. ಸಂಖ್ಯಾಶಾಸ್ತ್ರೀಯ ವಿಧಾನ

ಅಂಕಿ ವಿಧಾನದ ಮೂಲಕ ಸರ್ಕಾರ ಮತ್ತು ಸರ್ಕಾರೇತರ ಸಂಘಸಂಸ್ಥೆಗಳು ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದ ಬಗ್ಗೆ ಈಗಾಗಲೇ ಸಂಗ್ರಹಿಸಿರುವ ಮಾಹಿತಿಗಳನ್ನು ವಿವಿಧ ಮೂಲಗಳಿಂದ ಪಡೆದು ವಿವರದ ನಿಖರತೆಯನ್ನು ಪರಿಶೀಲಿಸಲಾಗುವುದು.

೧.೬.೫. ಸಂದರ್ಶನ ವಿಧಾನ

ಸಂದರ್ಶನ ವಿಧಾನವು ಸಮಾಜ ವಿಜ್ಞಾನ ಕ್ಷೇತ್ರದಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಹೆಚ್ಚು ಪರಿಣಾಮಕಾರಿ ಹಾಗೂ ಯಶಸ್ವಿ ವಿಧಾನವಾಗಿದೆ. ಸಮುದಾಯದವರ ಸಾಮಾಜಿಕ ಜೀವನ, ಆರ್ಥಿಕ ಹಿನ್ನೆಲೆ, ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಕುರಿತಾಗಿ ವ್ಯಕ್ತಿಗಳಿಂದ ಸಂಪೂರ್ಣವಾಗಿ ಮಾಹಿತಿಯನ್ನು ಪಡೆಯಲು ಈ ವಿಧಾನವನ್ನು ಅನುಸರಿಸಲಾಗಿದೆ.

೧.೬.೬. ಸಹಭಾಗಿತ್ವ ವಿಧಾನ

ಹಕ್ಕಿಪಿಕ್ಕಿಯರು ಆರ್ಥಿಕ ಚಟುವಟಿಕೆಗಳಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದನ್ನು ಖುದ್ದಾಗಿ ವೀಕ್ಷಣೆ ಮಾಡಲಾಗುವುದು ಈ ವಿಧಾನದ ಮೂಲಕ ಸಮುದಾಯದವರ ಸೂಕ್ಷ್ಮತೆಯನ್ನು ಅರಿಯುವುದರ ಮೂಲಕ ಹಲವಾರು ಮಾಹಿತಿಯನ್ನು ಸಂಗ್ರಹಿಸಿ ಪ್ರಬಂಧವನ್ನು ರಚಿಸಲಾಗಿದೆ.

೧.೬.೭. ಸಂಶೋಧನ ತಾಂತ್ರಿಕ ಉಪಕರಣಗಳು

ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಗೆ ಅಗತ್ಯವಾಗಿರುವ ಆಧುನಿಕ ಉಪಕರಣಗಳಾದ ಗಣಕಯಂತ್ರ, ಕ್ಯಾಮರ, ಐಪೋಡ್, ಲ್ಯಾಪ್ ಟಾಪ್, ವಾಯ್ಸ್ ರೆಕಾರ್ಡರ್, ಮುಂತಾದ ಆಧುನಿಕ ತಾಂತ್ರಿಕ ಉಪಕರಣಗಳನ್ನು ಬಳಸಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

೧.೭. ಅಧ್ಯಯನದ ಸ್ವರೂಪ

ಪ್ರಸ್ತುತ ಹಕ್ಕಿಪಿಕ್ಕಿ ಬುಡಕಟ್ಟಿನ ಆರ್ಥಿಕ ಜೀವನ ಎಂಬ ಪ್ರಬಂಧವು ಆರು ಅಧ್ಯಾಯಗಳನ್ನು ಒಳಗೊಂಡಿದ್ದು ಅದರ ಸ್ವರೂಪವು ಈ ರೀತಿಯಾಗಿದೆ.

ಅಧ್ಯಾಯ ಒಂದರಲ್ಲಿ ಪ್ರಸ್ತಾವನೆಯಿಂದ ಆರಂಭವಾಗಿ ಸಮುದಾಯದ ಚಾರಿತ್ರಿಕ ಹಾಗೂ ಸಾಮಾಜಿಕ ಹಿನ್ನೆಲೆಯೊಂದಿಗೆ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಮಹತ್ವ, ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆಗಳು, ಸ್ವರೂಪ ಈ ಅಧ್ಯಯನಕ್ಕೆ ಯಾವ ಯಾವ ವಿಧಾನಗಳನ್ನು ಬಳಸಲಾಗಿದೆ ಎಂಬುದಾಗಿ ಚರ್ಚಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಆಧ್ಯಯನದ ಕ್ಷೇತ್ರವಾದ ಕಂಪ್ಲಿ ಪಟ್ಟದ ವಿವರಣೆ ನೀಡಲಾಗಿದೆ, ಚಾರಿತ್ರಿಕ, ಸಾಮಾಜಿಕ, ಭೌಗೋಳಿಕ ಪರಿಚಯ, ಕಂಪ್ಲಿಯಲ್ಲಿ ವಾಸಿಸುತ್ತಿರುವ ಸಮುದಾಯಗಳ ಪರಿಚಯ ಹಾಗೂ ಜನಸಂಖ್ಯೆಯನ್ನು ತಿಳಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದ ಪರಿಚಯ ಮಾಡಲಾಗುವುದು. ಹಕ್ಕಿಪಿಕ್ಕಿಯರ ಮೂಲ, ಸಾಮಾಜಿಕ, ಸಾಂಸ್ಕೃತಿಕ, ಜೀವನಾವರ್ತನ, ವಾರ್ಷಿಕಾವರ್ತನ ಆಚರಣೆಗಳನ್ನು ಹಾಗೂ ಕಲಾತಂಡಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಹಕ್ಕಿಪಿಕ್ಕಿಯರ ಆರ್ಥಿಕ ಜೀವನವನ್ನು ಹೇಳಲಾಗಿದೆ. ಹಕ್ಕಿಪಿಕ್ಕಿಯರ ಪಾರಂಪರಿಕ ಮತ್ತು ಅವಲಂಭಿತ ವೃತ್ತಿ, ಆರ್ಥಿಕ ಸಮಸ್ಯೆಗಳು, ವಲಸೆ ವೃತ್ತಿಗಳು, ಆರ್ಥಿಕ ಬದಲಾವಣೆ ಹಾಗೂ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ದತ್ತಾಂಶಗಳ ವಿವರಣೆ ಮತ್ತು ವಿಶ್ಲೇಷಣೆಯನ್ನು ಮಾಡಲಾಗಿದೆ.

ಸಮಾರೋಪ

ಹಕ್ಕಿಪಿಕ್ಕಿ ಬುಡಕಟ್ಟಿನ ಆರ್ಥಿಕ ಜೀವನ ಎಂಬ ವಿಷಯದಲ್ಲಿ ಕಂಡುಕೊಂಡ ಅಧ್ಯಯನದ ಫಲಿತಗಳು, ಸಲಹೆಗಳು ಹಾಗೂ ಸಮಾರೋಪವನ್ನು ಹೇಳಲಾಗಿದೆ.

ಅನುಬಂಧಗಳಲ್ಲಿ ಈ ಅಧ್ಯಯನಕ್ಕೆ ಬಳಸಿದ ಗ್ರಂಥಗಳ ವಿವರ, ಕ್ಷೇತ್ರಕಾರ್ಯದಲ್ಲಿ ಮಾಹಿತಿ ನೀಡಿರುವ ಸಂಪನ್ಮೂಲ ವ್ಯಕ್ತಿಗಳ ವಿವರ, ಛಾಯಾ ಚಿತ್ರಗಳು ಹಾಗೂ ಕ್ಷೇತ್ರಕಾರ್ಯದಲ್ಲಿ ಮಾಹಿತಿ ಸಂಗ್ರಹಿಸಲು ಬಳಸಿದ ಪ್ರಶ್ನಾವಳಿ ನೀಡಲಾಗಿದೆ.

ಅಧ್ಯಾಯ: ಎರಡು
ಭೌಗೋಳಿಕ ಪರಿಚಯ

ಅಧ್ಯಾಯ: ಎರಡು
ಭೌಗೋಳಿಕ ಪರಿಚಯ

೨.೧. ಪ್ರಸ್ತಾವನೆ

ಬಳ್ಳಾರಿ ಜಿಲ್ಲೆಯಲ್ಲಿರುವ ಕಂಪ್ಲಿ ಪ್ರಮುಖ ಐತಿಹಾಸಿಕವಾದ ಸ್ಥಳವಾಗಿದೆ. ಹಲವಾರು ರಾಜವಂಶಗಳು ಹಾಗೂ ಅರಸರ ಆಳ್ವಿಕೆಗೊಳಗಾಗಿದ್ದ ಈ ಪ್ರದೇಶವನ್ನು ನಂದರು, ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ಮತ್ತು ವಿಜಯನಗರ ಸಾಮ್ರಾಟರು, ಪಾಳೇಗಾರರು ಹೀಗೆ ಅನೇಕ ರಾಜಮನೆತನಗಳು ಆಳ್ವಿಕೆ ನಡೆಸಿವೆಯಂಬುದುನ್ನು ಚಾರಿತ್ರಿಕ ಅಧ್ಯಯನಗಳಿಂದ ತಿಳಿದುಬರುವುದು.

"ಸುಮಾರು ೧೩-೧೪ನೇ ಶತಮಾನದ ಶಾಸನಗಳು ಕಂಪಿಲರಾಯನನ್ನು ಕುಮ್ಮಟದ ದೊರೆಯೆಂದು ಉಲ್ಲೇಖಿಸುತ್ತವೆ. ಈತನು ಕಂಪಲಿ ಪಟ್ಟಣದ ಸೋಮೇಶ್ವರ ದೇವರ ವರಪ್ರಸಾದದಿಂದ ಹುಟ್ಟಲಾಗಿ ಕಂಪಿಲರಾಯನೆಂದು ಕರೆಯಲಾಗುತ್ತಿದ್ದು, ಈತನ ಮತ್ತೊಂದು ಹೆಸರು ಖಂಡೇರಾಯ ಎಂಬುದಾಗಿದೆ. ಆದರೆ ಕ್ರಿ ಶ ೧೦೧೪ ರ ಶಾಸನವು ಕಂಪಿಲೆಯನ್ನು ಉಲ್ಲೇಖಿಸುತ್ತದೆ. ಕ್ರಿ ಶ ೧೦೧೮ ರ ಬಾಗಳಿ ಶಾಸನ ನೊಳಂಬ ಪಲ್ಲವರ ರಾಜಧಾನಿ ಕಂಪುಲಿಯನ್ನು ಪ್ರಸ್ತಾಪಿಸುತ್ತದೆ. ನಂತರದ ಕಾಲದಲ್ಲಿ ಕುಮ್ಮಟದ ದೊರೆಗಳ ಪ್ರಮುಖ ಪಟ್ಟಣವಾಯಿತು. ೧೫೪೧ ರ ಶಾಸನ ಕಂಪಿಲೆ ಎಂದು ಕ್ರಿ ಶ ೧೫೫೨ ರ ವಿಜಯನಗರ ಶಾಸನದಲ್ಲಿ ಕಂಪಿಲ್ಯ ಎಂದು ಕ್ರಿ ಶ ೧೬೯೧ ರ ಶಾಸನವೊಂದರಲ್ಲಿ ಕಂಪಲೆ ಎಂದು ಉಲ್ಲೇಖಗೊಂಡಿದೆ. ಕಂಪುಲಿಯು ಕಂಪಿಲಿ ಕಂಪ್ಲಿಯಾಗಿ ರೂಪಾಂತರಗೊಂಡಿದೆ. ಹೀಗೆ ಕಂಪಿಲಿಯಿಂದ ಕಂಪಿಲದೇವನೆಂಬ ಹೆಸರು ಬಂದಿತೆ ವಿನಃ ಕಂಪಿಲರಾಯ ದೇವನಿಂದ ಕಂಪಿಲಿ ಎಂಬ ಹೆಸರು ಬರಲಿಲ್ಲವೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ.[೧] ಈ ರೀತಿಯಾಗಿ ಕಂಪ್ಲಿಯ ಕುರಿತು ಅನೇಕ ಶಾಸನಗಳಲ್ಲಿ ಪ್ರಸ್ತಾಪವಾಗಿರುವುದು ತಿಳಿದುಬರುತ್ತದೆ.

೨.೨. ಭೌಗೋಳಿಕ ಪರಿಚಯ

ಕಂಪ್ಲಿಯು ಹೊಸಪೇಟೆಯಿಂದ ೩೫ ಕಿಲೋ ಮೀಟರ್, ವಿಶ್ವವಿಖ್ಯಾತ ಹಂಪಿಯಿಂದ ೨೫ ಕಿಲೋ ಮೀಟರ್ ದೂರದಲ್ಲಿದೆ. ಜಿಲ್ಲಾ ಕೇಂದ್ರವಾದ ಬಳ್ಳಾರಿಯಿಂದ ೫೪ ಕಿಲೋ ಮೀಟರ್ ದೂರದಲ್ಲಿದೆ.

ಕಂಪ್ಲಿಯ ಉತ್ತರದಲ್ಲಿ ತುಂಗಾಭದ್ರಾ ನದಿ ಹರಿಯುತ್ತಿದ್ದು ಊರಿನ ಪೂರ್ವಕ್ಕೆ ಸೋಮಪ್ಪನ ಕೆರೆ ಇದೆ. ೫೮೪೬ ಹೆಕ್ಟರ್ ಗ್ರಾಮ ವಿಸ್ತೀರ್ಣವಿದ್ದರೆ ಠಾಣಾವು ೧೦೮೯೯ ಹೆಕ್ಟರ್ ಇದೆ. ಅಲ್ಲದೇ ೨೩ ಜನವಸತಿ ಗ್ರಾಮಗಳು ಇದ್ದು ೨೩ ಗ್ರಾಮಗಳಿಗೂ ಕಂಪ್ಲಿಯು ಕೇಂದ್ರಬಿಂದುವಾಗಿದೆ. ಈ ಪಟ್ಟಣವು ೨೪ ವಾರ್ಡ್‌ಗಳಿದ್ದು ಪುರಸಭೆಯನ್ನು ಹೊಂದಿದೆ. ಅಲ್ಲದೆ ೧೭-೧೮ನೇ ಸಾಲಿನಲ್ಲಿ ಇದನ್ನ ತಾಲ್ಲೂಕು ಕೇಂದ್ರವಾಗಿ ಘೋಷಣೆ ಮಾಡಲಾಗಿದೆ.

ಕಂಪ್ಲಿಯ ಬಲಭಾಗದಲ್ಲಿ ತುಂಗಾಭದ್ರಾ ನದಿಯು ಹರಿಯುತ್ತಿದ್ದು ಸುತ್ತಮುತ್ತಲ ಹೊಲಗದ್ದೆ ತೋಟಗಳಿಗೆ ನೀರುಣಿಸುತ್ತಿದೆ. ಕಂಪ್ಲಿಯ ಭೌಗೋಳಿಕ ಪರಿಸರವು ಫಲವತ್ತಾದ ಕಪ್ಪು ಮಣ್ಣಿನಿಂದ ಕೂಡಿದ್ದು ಬಾಳೆ, ಕಬ್ಬು ಮತ್ತು ಭತ್ತವನ್ನು ಹೆಚ್ಚಾಗಿ ಬೆಳೆಯತ್ತಾರೆ.

೨.೨.೧. ಕಂಪ್ಲಿ

"ಕ್ರಿ ಶ ೧೫ನೇ ಶತಮಾನದ ವಿಜಯನಗರದ ಕಾಲದಲ್ಲಿ ನಿರ್ಮಾಣವಾದ ಪಂಪಾಪತಿ ದೇವಾಲಯವು ಗ್ರಾಮದ ಪಶ್ಚಿಮಕ್ಕಿದೆ. ಎತ್ತರದ ದಿಬ್ಬದ ಮೇಲೆ ನಿರ್ಮಾಣವಾದ ಈ ದೇವಾಲಯವು ದ್ವಿಕೂಟಾಚಲವಾಗಿದೆ. ದಕ್ಷಿಣ ಪಶ್ಚಿಮ ಭಾಗಗಳಲ್ಲಿ ಗರ್ಭಗೃಹಗಳಿದ್ದು, ಅವುಗಳಿಗೆ ಹೊಂದಿಕೊಂಡು ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಉದ್ಭವಲಿಂಗವಿದೆ. ಪಶ್ಚಿಮ ಭಾಗದಲ್ಲಿರುವ ಗರ್ಭಗೃಹದಲ್ಲಿ ಪದ್ಮ ಹಿಡಿದು ಸಮಭಂಗಿಯಲ್ಲಿ ನಿಂತ ಪಂಪಾದೇವಿಯ ಚಿಕ್ಕ ಮೂರ್ತಿಯಿದೆ. ಈ ದೇವಾಲಯದ ಆವರಣದಲ್ಲಿ ಕ್ರಿ ಶ ೧೫೫೨ರ ಸದಾಶಿವರಾಯನ ಶಾಸನವಿದೆ. ಇದೇ ಗ್ರಾಮದಲ್ಲಿ ದಕ್ಷಿಣ ಭಾಗಕ್ಕೆ ಕ್ರಿ ಶ ೧೪ನೇ ಶತಮಾನದಲ್ಲಿ ನಿರ್ಮಿಸಿದ ಸೋಮೇಶ್ವರ ದೇವಾಲಯವಿದೆ. ಕೈಯಲ್ಲಿ ಕಾಪಾಲ, ಢಮರುಗ, ತ್ರಿಶೂಲ, ಖಡ್ಗಗಳನ್ನಿಡಿದ ಭೈರವೇಶ್ವರ ಮೂರ್ತಿ ಇದೆ. ದೇವಾಲಯದ ಅಂತರಾಳದ ಪ್ರವೇಶ ದ್ವಾರಕ್ಕೆ ತಾಮ್ರದ ತಗಡನ್ನು ಜೋಡಿಸಲಾಗಿದೆ. ಅದರ ಮೇಲ್ಭಾಗದಲ್ಲಿ ಕ್ರಿ ಶ ೧೮೭೯ರ ಶಾಸನದಲ್ಲಿ ಮುದ್ದಾಮರದ ಮುನೇಗೌಡನ ಮಗ ಗುರ್‍ರಾಪ್ಪನ ಹೆಂಡತಿ ಹಂಪಮ್ಮನ ಸೇವಾರ್ಥ ಹೇವಿಳಂಬ ಎಂದು ಉಲ್ಲೇಖಿಸಲಾಗಿದೆ. ಈ ದೇವಾಲಯದ ಎಡಭಾಗದಲ್ಲಿ ಪಾರ್ವತಿ ಗುಡಿಯೂ ಇದೆ. ಕಂಪ್ಲಿಯ ಗ್ರಾಮದ ಒಳಗೆ ಕ್ರಿ ಶ ೧೭ನೇ ಶತಮಾನದಲ್ಲಿ ನಿರ್ಮಿಸಿದ ನಗರೇಶ್ವರ ದೇವಾಲಯವಿದೆ."[೨] ಇಂತಹ ಐತಿಹಾಸಿಕ ಹಿನ್ನೆಲೆ ಹೊಂದಿರುವ ಕಂಪ್ಲಿಯನ್ನು ಇತ್ತೀಚಿನ ದಿನಗಳಲ್ಲಿ ತಾಲೂಕಾಗಿ ಘೋಷಿಸಲಾಗಿದೆ.

೨.೨.೨. ಕಂಪ್ಲಿ (ಕೋಟೆ)

"ಕೋಟೆ ಮಧ್ಯದಲ್ಲಿ ರಾಮಚಂದ್ರ ದೇವರ ಗುಡಿ, ಶ್ರೀರಂಗರಾಯರ ಆಳ್ವಿಕೆ ಶಕ ೧೫೭೫ ಸರ್ವಜಿತು ಸಂ॥ದಲ್ಲಿ ನಿರ್ಮಾಣ... ಕೋಟೆಯೊಳಗೆ ಮೂರು ಅಗಸಿ, ಸುತ್ತಲ ಮುಖ್ಯಪ್ರಾಣದೇವರ ಗುಡಿ, ಗ್ರಾಮನಿರ್ಮಾಣ ಕಾಲಕ್ಕೆ ಯಿದಕೆ ಮುಳುಗು ಯಿನಾಮು ಯಿತ್ತು. ಕುಂಪಣಿ ಅಮಲಿಗೆ ತಸ್ತೀಮಾಡಿಯಿದ್ದಿತು.

ವೀರಭದ್ರದೇವರ ಗುಡಿ ಒಕ್ಕಲುತನದವರೆ ಪ್ರತಿಷ್ಟೆ ಮಾಡ್ಸಿದು. ...ಶಂಕರದೇವರ ಗುಡಿ ಕೋಟೆವಳಗೆ ಬೆಲಿಗರು ಕಟ್ಟಿಸಿದ್ದು. ಶಿವೈದೇವರಗುಡಿ ಹಂಡೆನವರು(ಪೂರ್ವಕ್ಕೆ)ಕಟ್ಟಿಸಿದ್ದು, ಸೋಮೇಶ್ವರ ಗುಡಿ ಪೂರ್ವಕ್ಕೆ ಆದಿಕಾಲದ್ದು. ಪ್ಯಾಠಿಗೆ ಆಗ್ನೆ ದಿಕ್ಕಿನಲ್ಲು ಯಿದ್ದೀತೆ. ಪೇಠೆ ಬಜಾರದಲ್ಲಿ ಬಸವಣ್ಣ ದೇವರ ಗುಡಿ, ನೀಲಕಂಠದೇವರಗುಡಿ ಬಿಳಿಮಗ್ಗದವರು ಕಟ್ಟಿದ್ದು, ಪಾಂಡುರಂಗ ಗುಡಿ ಚಿನಿವಾರು ಕಟ್ಟಿದ್ದು, ವಾರಕಾರರು

ಹನುಮಂತದೇವರ ಗುಡಿ ಬಜಾರದಲ್ಲಿ ಕಟ್ಟಿದ್ದು, ಪದ್ಮಾಯವರು ಕಟ್ಟಿಸಿದ್ದು ಅಗಸೆವಳಗೆ ಹನುಮಂತದೇವರ ಗುಡಿ, ದೇವಾಂಗದವರು ಕಟ್ಟಿಸಿದ ಗುಡಿಗಳು ರಾಮಲಿಂಗದೇವರ ಗುಡಿ,"[೩] ಹೀಗೆ ಅನೇಕ ಪ್ರಾಚೀನ ದೇವಾಲಯಗಳು ಕೋಟೆಗಳನ್ನು ಹೊಂದಿರುವ ಕಂಪ್ಲಿಯ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿರುವುದು ಕಂಡುಬರುತ್ತದೆ.

೨.೩. ಕಂಪಿಯಲ್ಲಿ ವಾಸಿಸುತ್ತಿರುವ ಸಮುದಾಯಗಳ ಪರಿಚಯ

ಕಂಪ್ಲಿ ಪಟ್ಟಣವು ೨೩.೬೬ ಚದುರ ಕಿ.ಮೀ ವ್ಯಾಪ್ತಿ ಹೊಂದಿದೆ. ೮,೪೧೦ ಮನೆಗಳನ್ನು ಹೊಂದಿದೆ. ೩೯,೩೦೭ ಜನಸಂಖ್ಯೆಯನ್ನು ಹೊಂದಿದ್ದು ಇದರಲ್ಲಿ ಪುರುಷರ ಸಂಖ್ಯೆ ೧೯,೪೭೬, ಮಹಿಳೆಯ ಸಂಖ್ಯೆ ೧೯,೮೩೧ ಇದೆ. ಇದರಲ್ಲಿ ೦–೬ ವರ್ಷದ ಒಳಗಿನ ಜನಸಂಖ್ಯೆಯು ೫,೧೪೩ ಇದೆ ಇದರಲ್ಲಿ ಗಂಡು ಮಕ್ಕಳ ಸಂಖ್ಯೆಯು ೨,೬೫೯ ಹಾಗೂ ಹೆಣ್ಣು ಮಕ್ಕಳ ಸಂಖ್ಯೆಯು ೨,೪೮೪ ಇದೆ. ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು ೮,೧೦೫ ಇದ್ದು ಇದರಲ್ಲಿ ಪುರುಷರು ೪,೦೨೩ ಹಾಗೂ ಮಹಿಳೆಯರ ಸಂಖ್ಯೆಯು ೪,೦೮೨ ಇದೆ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆಯು ೩,೨೯೪ ಇದ್ದು ಇದರಲ್ಲಿ ೧,೬೨೮ ಪುರುಷರು ಹಾಗೂ ೧,೬೬೬ ಮಹಿಳೆಯರು ಇದ್ದಾರೆ. ಕಂಪ್ಲಿ ಪಟ್ಟಣದ ಒಟ್ಟು ಅಕ್ಷರಸ್ಥರ ಸಂಖ್ಯೆಯು ೨೪,೭೫೦ ಇದ್ದು ಇದರಲ್ಲಿ ಪುರುಷ ಅಕ್ಷರಸ್ಥರ ಸಂಖ್ಯೆಯು ೧೩,೬೭೬ ಇದೆ ಹಾಗೂ ಮಹಿಳಾ ಅಕ್ಷರಸ್ಥರ ಸಂಖ್ಯೆಯು ೧೧,೦೭೪ ಇದೆ.

೨.೩.೧. ಕಾರ್ಮಿಕರು

ಕಂಪ್ಲಿ ಪಟ್ಟಣದಲ್ಲಿ ಒಟ್ಟು ಕಾರ್ಮಿಕರ ಸಂಖ್ಯೆಯು ೧೫,೬೭೪ ಇದ್ದು, ಇದರಲ್ಲಿ ಪುರುಷ ಕಾರ್ಮಿಕರ ಸಂಖ್ಯೆಯು ೧೧,೧೧೨ ಇದೆ. ಮಹಿಳಾ ಕಾರ್ಮಿಕರ ಸಂಖ್ಯೆಯು ೪,೫೬೨ ಇದೆ ಮುಖ್ಯ ಕಾರ್ಮಿಕರ ಒಟ್ಟು ಸಂಖ್ಯೆಯು ೧೪,೮೪೮ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೧೦, ೬೫೨ ಹಾಗೂ ಮಹಿಳೆಯರ ಸಂಖ್ಯೆಯು ೪,೧೯೬ ಇದೆ ಹಾಗೂ ಒಟ್ಟು ಬೇಸಾಯಗಾರರ ಸಂಖ್ಯೆಯು ೧,೧೮೧ ಇದ್ದು, ಇದರಲ್ಲಿ ಪುರುಷ ಬೇಸಾಯಗಾರರ ಸಂಖ್ಯೆಯು ೧,೦೩೬ ಹಾಗೂ ಮಹಿಳಾ ಬೇಸಾಯಗಾರರ ಸಂಖ್ಯೆಯು ೧೪೫ ಇದೆ. ಒಟ್ಟು ಕೃಷಿ ಕಾರ್ಮಿಕರ ಸಂಖ್ಯೆಯು ೪,೫೪೬ ಇದ್ದು ಇದರಲ್ಲಿ ಪುರುಷ ಕೃಷಿಕಾರ್ಮಿಕರ ಸಂಖ್ಯೆಯು ೨,೯೭ ಹಾಗೂ ಮಹಿಳಾ ಕೃಷಿಕಾರ್ಮಿಕರ ಸಂಖ್ಯೆಯು ೨,೨೪೯ ಇದೆ, ಗುಡಿ ಕೈಗಾರಿಕೆಯ ಕಾರ್ಮಿಕರ ಒಟ್ಟು ಸಂಖ್ಯೆಯು ೧೭೫ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೧೨೩ ಹಾಗೂ ಮಹಿಳೆಯರ ಸಂಖ್ಯೆಯು ೫೨ ಇದೆ. ಇತರೆ ಕೆಲಸಗಳಲ್ಲಿ ತೊಡಗಿರುವವರ ಕಾರ್ಮಿಕರ ಒಟ್ಟು ಸಂಖ್ಯೆಯು ೮,೯೪೬ ಇದ್ದು ಇದರಲ್ಲಿ ಪುರುಷರು ೭,೧೯೬ ಹಾಗೂ ಮಹಿಳೆಯರು ೧,೭೫೦ ಇದ್ದಾರೆ.

೨.೩.೨. ಕನಿಷ್ಟ ಕಾರ್ಮಿಕರು

ಕಂಪ್ಲಿ ಪಟ್ಟಣದಲ್ಲಿ ಕನಿಷ್ಟ ಕಾರ್ಮಿಕರ ಒಟ್ಟು ಸಂಖ್ಯೆಯು ೮೨೬ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೪೬೦ ಹಾಗೂ ಮಹಿಳೆಯರ ಸಂಖ್ಯೆಯು ೩೬೬ ಇದ್ದಾರೆ. ಕನಿಷ್ಟ ವ್ಯವಸಾಯಗಾರರ ಒಟ್ಟು ಸಂಖ್ಯೆಯು ೧೬ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೮ ಹಾಗೂ ಮಹಿಳೆಯ ಸಂಖ್ಯೆಯು ೮ ಇದೆ. ಕನಿಷ್ಟ ಕೃಷಿ ಕಾರ್ಮಿಕರ ಒಟ್ಟು ಸಂಖ್ಯೆಯು ೨೨೦ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೫೯ ಹಾಗೂ

ಮಹಿಳೆಯರ ಸಂಖ್ಯೆಯು ೧೬೧ ಇದೆ. ಗುಡಿಕೈಗಾರಿಕಾ ಕಾರ್ಮಿಕರ ಒಟ್ಟು ಸಂಖ್ಯೆಯು ೨೯ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೧೯ ಹಾಗೂ ಮಹಿಳೆಯ ಸಂಖ್ಯೆಯು ೧೦ ಇದೆ. ಇತರೆ ಕಾರ್ಮಿಕರು ಒಟ್ಟು ೫೬೧ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೩೭೪ ಹಾಗೂ ಮಹಿಳೆಯರ ಸಂಖ್ಯೆಯು ೧೮೭ ಇದೆ. ಕಾರ್ಮಿಕರಲ್ಲದವರ(ಕೆಲಸಗಾರರಲ್ಲದವರ) ಒಟ್ಟು ಸಂಖ್ಯೆಯು ೨೩,೬೩೩ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೮,೩೬೪ ಹಾಗೂ ಮಹಿಳೆಯರ ಸಂಖ್ಯೆಯು ೧೫,೨೬೯ ಇದೆ.

೨.೩.೩. ಪರಿಶಿಷ್ಟ ಜಾತಿಯ ಜನಸಂಖ್ಯೆ

ಕಂಪ್ಲಿ ಪಟ್ಟಣದಲ್ಲಿ ಪರಿಶಿಷ್ಟ ಜಾತಿಯ ಒಟ್ಟು ಮನೆಗಳ ಸಂಖ್ಯೆಯು ೧,೬೪೦ ಇದರಲ್ಲಿ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆಯು(ಮನೆ ಇರುವ ಹಾಗೂ ಮನೆ ಇಲ್ಲದವರ) ೮,೧೦೫ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೪,೦೨೩ ಹಾಗೂ ಮಹಿಳೆಯರ ಸಂಖ್ಯೆಯು ೪,೦೮೨ ಇದೆ. ಪರಿಶಿಷ್ಟ ಜಾತಿಯಲ್ಲಿ ೦–೬ ವರ್ಷದೊಳಗಿನ ಮಕ್ಕಳ ಸಂಖ್ಯೆಯು ಒಟ್ಟು ೧,೨೮೩ ಇದ್ದು ಇದರಲ್ಲಿ ಗಂಡು ಮಕ್ಕಳ ಸಂಖ್ಯೆಯು ೬೬೬ ಮತ್ತು ಹೆಣ್ಣು ಮಕ್ಕಳ ಸಂಖ್ಯೆಯು ೬೧೭ ಇದೆ. ಪರಿಶಿಷ್ಟ

೨.೩.೪. ಪರಿಶಿಷ್ಟ ಜಾತಿಯ ಸಾಕ್ಷರಸ್ಥರ ಪ್ರಮಾಣ

ಕಂಪ್ಲಿ ಪಟ್ಟಣದಲ್ಲಿ ಪರಿಶಿಷ್ಟ ಜಾತಿಯ ಒಟ್ಟು ಸಾಕ್ಷರಸ್ಥರ ಸಂಖ್ಯೆಯು ೪,೨೧೮ ಇದ್ದು ಇದರಲ್ಲಿ ಪುರುಷರ ಸಾಕ್ಷರಸ್ಥರ ಸಂಖ್ಯೆಯು ೨,೪೪೭ ಇದ್ದು ಹಾಗೂ ಮಹಿಳೆಯರ ಸಾಕ್ಷರಸ್ಥರ ಸಂಖ್ಯೆಯು ೧,೭೭೧ ಇದೆ. ಸಾಕ್ಷರಸ್ಥರು ಅಲ್ಲದ (ಅನಕ್ಷರಸ್ಥರು) ಒಟ್ಟು ಸಂಖ್ಯೆಯು ೩,೮೮೭ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೧,೫೭೬ ಇದೆ. ಹಾಗೂ ಮಹಿಳೆಯರ ಸಂಖ್ಯೆಯು ೨,೩೧೧ ಇದೆ.

೨.೩.೫. ಪರಿಶಿಷ್ಟ ಜಾತಿಯ ಕಾರ್ಮಿಕರು

ಪರಿಶಿಷ್ಟ ಜಾತಿಯಲ್ಲಿ ಒಟ್ಟು ಕೆಲಸಗಾರರ ಸಂಖ್ಯೆಯು ೩,೬೦೨ ಇದ್ದು ಇದರಲ್ಲಿ ಪುರುಷರ ಸಂಖ್ಯೆಯು ೨,೨೦೯ ಹಾಗೂ ಮಹಿಳೆಯರ ಸಂಖ್ಯೆಯು ೧,೩೯೩ ಇದೆ. ಪರಿಶಿಷ್ಟ ಜಾತಿಯಲ್ಲಿ ಮುಖ್ಯ ಕೆಲಸಗಾರರ ಒಟ್ಟು ಸಂಖ್ಯೆಯು ೩,೩೩೯ ಇದ್ದು. ಇದರಲ್ಲಿ ಪುರಷರ ಸಂಖ್ಯೆಯು ೨,೦೮೧ ಹಾಗೂ ಮಹಿಳೆಯರ ಸಂಖ್ಯೆಯು ೧,೨೫೮ ಇದೆ. ಒಟ್ಟು ವ್ಯಸಾಯಗಾರರ ಸಂಖ್ಯೆಯು ೬೦ ಇದ್ದು, ಪುರುಷರ ಸಂಖ್ಯೆಯು ೫೦ ಹಾಗೂ ಮಹಿಳೆಯರ ಸಂಖ್ಯೆಯು ೧೦ ಇದೆ. ಕೃಷಿ ಕಾರ್ಮಿಕರಾಗಿ ದುಡಿಯುವವರು ಪರಿಶಿಷ್ಟ ಜಾತಿಯಲ್ಲಿ ಒಟ್ಟು ೧,೧೮೬ ಸಂಖ್ಯೆ ಇದ್ದು, ಇದರಲ್ಲಿ ಪುರುಷರು ೪೪೮ ಹಾಗೂ ಮಹಿಳೆಯರು ೭೩೮ ಇದ್ದಾರೆ. ಗುಡಿಕೈಗಾರಿಕ ಕಾರ್ಮಿಕರ ಒಟ್ಟು ಸಂಖ್ಯೆಯು ೩೦ ಇದ್ದು, ಇದರಲ್ಲಿ ಪುರುಷರ ಸಂಖ್ಯೆಯು ೧೫ ಹಾಗೂ ಮಹಿಳೆಯರ ಸಂಖ್ಯೆಯು ೧೫ ಇದೆ. ಇತರೆ ಕೆಲಸವನ್ನು ಮಾಡುವ ಕಾರ್ಮಿಕರು ಪರಿಶಿಷ್ಟ ಜಾತಿಯಲ್ಲಿ ಒಟ್ಟು ೨,೦೬೩ ಸಂಖ್ಯೆ ಇದ್ದು, ಇದರಲ್ಲಿ ಪರುಷರ ಸಂಖ್ಯೆಯು ೧,೫೬೮ ಹಾಗೂ ಮಹಿಳೆಯರ ಸಂಖ್ಯೆಯು ೪೯೫ ಇದೆ.

೨.೩.೬. ಪರಿಶಿಷ್ಟ ಜಾತಿಯಲ್ಲಿ ಕನಿಷ್ಟ ಕಾರ್ಮಿಕರು

ಪರಿಶಿಷ್ಟ ಜಾತಿಯಲ್ಲಿ ಕನಿಷ್ಟ ಕೆಲಸಗಾರರ ಸಂಖ್ಯೆಯು ಒಟ್ಟು ೨೬೩ ಇದ್ದು, ಇದರಲ್ಲಿ ಪುರುಷರು ೧೨೮ ಹಾಗೂ ಮಹಿಳೆಯರ ಸಂಖ್ಯೆಯು ೧೩೫ ಇದೆ. ಪರಿಶಿಷ್ಟ ಜಾತಿಯಲ್ಲಿ ಕನಿಷ್ಟ ಕೆಲಸಗಾರರಲ್ಲಿ

ವ್ಯವಸಾಯಗಾರರು ಯಾರು ಇಲ್ಲವೆಂದು ತಿಳಿದುಬರುತ್ತದೆ. ಕೃಷಿ ಕಾರ್ಮಿಕರ ಒಟ್ಟು ಸಂಖ್ಯೆಯು ೯೫ ಇದ್ದು ಇದರಲ್ಲಿ ಪುರುಷರು ೧೭ ಹಾಗೂ ಮಹಿಳೆಯರು ೭೮ ಇದ್ದಾರೆ. ಗುಡಿಕೈಗಾರಿಕೆಯಲ್ಲಿ ಕನಿಷ್ಟ ಕೆಲಸಗಾರರ ಸಂಖ್ಯೆಯು ಒಟ್ಟು ೩ ಸಂಖ್ಯೆ ಇದ್ದು, ಇದರಲ್ಲಿ ಪುರುಷರು ಯಾರು ಇಲ್ಲವೆಂದು ತಿಳಿದುಬರುತ್ತದೆ. ಮಹಿಳೆಯರ ಸಂಖ್ಯೆಯು ೩ ಇದೆ. ಕನಿಷ್ಟ ಕೆಲಸಗಾರರಲ್ಲಿ ಇತರೆ ಕೆಲಸಗಳನ್ನು ಮಾಡುವ ಪರಿಶಿಷ್ಟ ಜಾತಿಯವರ ಸಂಖ್ಯೆಯು ಒಟ್ಟು ೧೬೫ ಇದ್ದು ಇದರಲ್ಲಿ ಪುರುಷರು ೧೧೧ ಹಾಗೂ ಮಹಿಳೆಯರ ಸಂಖ್ಯೆಯು ೫೪ ಇದೆ. ಕೆಲಸಗಾರರಲ್ಲದ ಸಂಖ್ಯೆಯು ಇವರಲ್ಲಿ ಒಟ್ಟು ೪,೫೦೩ ಇದ್ದು ಇದರಲ್ಲಿ ಪುರಷರ ಸಂಖ್ಯೆಯು ೧,೮೧೪ ಇದ್ದು ಮಹಿಳೆಯರ ಸಂಖ್ಯೆಯು ೨,೬೮೯ ಇದೆ.

೨.೩.೭. ಪರಿಶಿಷ್ಟ ಪಂಗಡದ ಜನಸಂಖ್ಯೆ

ಕಂಪ್ಲಿ ಪಟ್ಟಣದಲ್ಲಿ ಪರಿಶಿಷ್ಟ ಪಂಗಡದವರ ಒಟ್ಟು ಮನೆಗಳ ಸಂಖ್ಯೆ ೬೮೨ ಇದ್ದು ಇದರಲ್ಲಿ ಒಟ್ಟು ಜನಸಂಖ್ಯೆಯು ೩,೨೯೪ ಇದ್ದು ಇದರಲ್ಲಿ ಪುರಷರ ಸಂಖ್ಯೆಯು ೧,೬೨೮ ಹಾಗೂ ಮಹಿಳೆಯರ ಸಂಖ್ಯೆಯು ೧,೬೬೬ ಇದೆ. ೦–೬ ವರ್ಷದೊಳಗಿನ ಮಕ್ಕಳ ಸಂಖ್ಯೆಯು ಒಟ್ಟು ೫೦೨ ಇದ್ದು ಇದರಲ್ಲಿ ಗಂಡು ಮಕ್ಕಳ ಸಂಖ್ಯೆಯು ೨೬೬ ಹಾಗೂ ಹೆಣ್ಣು ಮಕ್ಕಳ ಸಂಖ್ಯೆಯು ೨೩೬ ಇದೆ.

೨.೩.೮. ಪರಿಶಿಷ್ಟ ಪಂಗಡದವರ ಸಾಕ್ಷರಸ್ಥರ ಪ್ರಮಾಣ

ಕಂಪ್ಲಿ ಪಟ್ಟಣದಲ್ಲಿ ಪರಿಶಿಷ್ಟ ಪಂಗಡದವರ ಒಟ್ಟು ಸಾಕ್ಷರಸ್ಥರ ಸಂಖ್ಯೆಯು ೧,೫೬೬ ಇದ್ದು ಇದರಲ್ಲಿ ಪರುಷರ ಸಾಕ್ಷರಸ್ಥರ ಸಂಖ್ಯೆಯು ೯೧೦ ಹಾಗೂ ಮಹಿಳೆಯರ ಸಾಕ್ಷರಸ್ಥರ ಸಂಖ್ಯೆಯು ೬೫೬ ಇದೆ. ಅನಕ್ಷರಸ್ಥರ ಒಟ್ಟು ಸಂಖ್ಯೆಯು ೧,೭೨೮ ಇದ್ದು, ಇದರಲ್ಲಿ ಪುರಷರ ಸಂಖ್ಯೆಯು ೭೧೮ ಹಾಗೂ ಮಹಿಳೆಯರ ಸಂಖ್ಯೆಯು ೧,೦೧೦ ಇದೆ.

೨.೩.೯. ಪರಿಶಿಷ್ಟ ಪಂಗಡದ ಕಾರ್ಮಿಕರು

ಕಂಪ್ಲಿ ಪಟ್ಟಣದಲ್ಲಿ ವಾಸಿಸುವ ಪರಿಶಿಷ್ಟ ಪಂಗಡದವರ ಒಟ್ಟು ಕಾರ್ಮಿಕರು ೧,೫೦೩ ಇದ್ದು ಇದರಲ್ಲಿ ಪುರಷ ಕಾರ್ಮಿಕರ ಸಂಖ್ಯೆಯು ೯೩೬ ಇದ್ದು ಮಹಿಳಾ ಕಾರ್ಮಿಕರ ಸಂಖ್ಯೆಯು ೫೬೭ ಇದೆ. ಪರಿಶಿಷ್ಟ ಪಂಗಡದಲ್ಲಿ ಮುಖ್ಯ ಕೆಲಸಗಾರರ ಸಂಖ್ಯೆಯು ಒಟ್ಟು ೧,೪೨೯ ಇದ್ದು ಇದರಲ್ಲಿ ಪುರಷ ಕೆಲಸಗಾರರ ಸಂಖ್ಯೆಯು ೮೮೬ ಹಾಗೂ ಮಹಿಳಾ ಕೆಲಸಗಾರರು ೫೪೩ ಇದ್ದಾರೆ. ಒಟ್ಟು ವ್ಯವಸಾಯಗಾರರ ಸಂಖ್ಯೆಯು ೬೯ ಇದ್ದು ಇದರಲ್ಲಿ ಪುರಷರ ಸಂಖ್ಯೆಯು ೫೮ ಹಾಗೂ ಮಹಿಳೆಯರ ಸಂಖ್ಯೆಯು ೧೧ ಇದೆ. ಕೃಷಿ ಕಾರ್ಮಿಕರ ಸಂಖ್ಯೆಯು ಒಟ್ಟು ೬೭೦ ಇದ್ದು, ಇದರಲ್ಲಿ ಪುರುಷ ಕೃಷಿ ಕಾರ್ಮಿಕರ ಸಂಖ್ಯೆಯು ೨೮೩ ಹಾಗೂ ಮಹಿಳಾ ಕೃಷಿ ಕಾರ್ಮಿಕರ ಸಂಖ್ಯೆಯು ೩೮೭ ಇದೆ. ಗುಡಿಕೈಗಾರಿಕಾ ಕಾರ್ಮಿಕರು ಒಟ್ಟು ಸಂಖ್ಯೆಯು ೧೧ ಇದ್ದು, ಇದರಲ್ಲಿ ಪರುಷರ ಸಂಖ್ಯೆಯು ೯ ಹಾಗೂ ಮಹಿಳೆಯರ ಸಂಖ್ಯೆಯು ೨ ಇದೆ. ಇತರೆ ಕೆಲಸಗಳನ್ನು ನಿರ್ವಹಿಸುವಂತಹ ಕಾರ್ಮಿಕರು ಪರಿಶಿಷ್ಟ ಪಂಗಡದಲ್ಲಿ ೬೭೯ ಇದ್ದು, ಇದರಲ್ಲಿ ಪುರಷರ ಸಂಖ್ಯೆಯು ೫೩೬ ಹಾಗೂ ಮಹಿಳೆಯರ ಸಂಖ್ಯೆಯು ೧೪೩ ಇದೆ.

೨.೩.೧೦. ಪರಿಶಿಷ್ಟ ಪಂಗಡದಲ್ಲಿ ಕನಿಷ್ಟ ಕಾರ್ಮಿಕರು

ಕಂಪ್ಲಿ ಪಟ್ಟಣದಲ್ಲಿ ಪರಿಶಿಷ್ಟ ಪಂಗಡದವರ ಕನಿಷ್ಟ ಕೆಲಸಗಾರರ ಸಂಖ್ಯೆಯು ಒಟ್ಟು ೭೪ ಇದ್ದು, ಇದರಲ್ಲಿ ಪುರಷರ ಸಂಖ್ಯೆಯು ೫೦ ಹಾಗೂ ಮಹಿಳೆಯರ ಸಂಖ್ಯೆ ೨೪ ಇದೆ. ಕನಿಷ್ಟ ಕೆಲಸಗಾರರು

ವ್ಯವಸಾಯಗಾರರಲ್ಲಿ ಯಾರು ಇಲ್ಲವೆಂದು ತಿಳಿದುಬರುತ್ತದೆ. ಕನಿಷ್ಠ ಕೆಲಸಗಾರರು ಕೃಷಿ ಕಾರ್ಮಿಕರಲ್ಲಿ ಒಟ್ಟು ಸಂಖ್ಯೆಯು ೧೪ ಇದ್ದು, ಇದರಲ್ಲಿ ಪುರುಷ ಕೃಷಿ ಕಾರ್ಮಿಕರು ೫ ಹಾಗೂ ಮಹಿಳಾ ಕೃಷಿ ಕಾರ್ಮಿಕರ ಸಂಖ್ಯೆಯು ೯ ಇದೆ. ಗುಡಿಕೈಗಾರಿಕ ಕೆಲಸಗಾರರ ಸಂಖ್ಯೆಯು ಒಟ್ಟು ೫ ಇದ್ದು, ಇದರಲ್ಲಿ ಪುರಷರ ಸಂಖ್ಯೆ ೩ ಹಾಗೂ ಮಹಿಳೆಯರ ಸಂಖ್ಯೆಯು ೨ ಇದೆ. ಇತರ ಕೆಲಸಗಾರರ ಸಂಖ್ಯೆಯು ಒಟ್ಟು ೫೫ ಇದ್ದು ಇದರಲ್ಲಿ ಪುರಷರ ಸಂಖ್ಯೆಯು ೪೨ ಹಾಗೂ ಮಹಿಳೆಯರ ಸಂಖ್ಯೆಯು ೧೩ ಇದೆ. ಕೆಲಸಗಾರರಲ್ಲದವರ ಸಂಖ್ಯೆಯು ಒಟ್ಟು ೧,೭೯೧ ಇದ್ದು, ಇದರಲ್ಲಿ ಪುರಷರ ಸಂಖ್ಯೆಯು ೬೯೨ ಇದ್ದು ಮಹಿಳೆಯರ ಸಂಖ್ಯೆಯು ೧,೦೯೯ ಇದೆ. (www.District at a glance, ballari)

೨.೪. ಆಡಳಿತ

ಕಂಪ್ಲಿ ಪಟ್ಟಣವನ್ನು ಪುರಸಭೆ ನಿರ್ವಹಿಸುತ್ತದೆ. ಪಟ್ಟಣವು ತಾಲೂಕು ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಪೋಲೀಸ್ ಸ್ಟೇಷನ್, ಉಪ ನೋಂದಣಾಧಿಕಾರಿ ಕಛೇರಿ, ಬ್ಯಾಂಕ್‌ಗಳು, ಅಂಚೆ ಕಛೇರಿ, ದೂರವಾಣಿ ವಿನಿಮಯ ಕೇಂದ್ರ, ವಿದ್ಯುತ್ ಮಂಡಳಿ ಕಛೇರಿ ಮುಂತಾದ ಹಲವು ಸರ್ಕಾರಿ ಕಛೇರಿಗಳನ್ನು ಹೊಂದಿದೆ.

೨.೫. ಆರ್ಥಿಕತೆ

ಕಂಪ್ಲಿಯು ತನ್ನ ಸುತ್ತಮುತ್ತಲಿನ ಹಳ್ಳಿಗಳಿಗೆ ಆರ್ಥಿಕ ವಹಿವಾಟುಗಳ ಕೇಂದ್ರವಾಗಿದೆ. ಪ್ರತಿ ಮಂಗಳವಾರ ಪಟ್ಟಣದ ಮಾರುಕಟ್ಟೆಯಲ್ಲಿ ವಿವಿಧ ಸರಕುಗಳ ಮಾರಾಟ ಮತ್ತು ಖರೀದಿ ನಡೆಯುತ್ತದೆ. ಕಂಪ್ಲಿ ಪಟ್ಟಣವು ೨೦ ಅಕ್ಕಿ ಗಿರಣಿಗಳನ್ನು ಹೊಂದಿದೆ. ಕೃಷಿಯು ಇಲ್ಲಿಯ ಆರ್ಥಿಕತೆಯ ಬೆನ್ನೆಲುಬಾಗಿದೆ. ಕಂಪ್ಲಿಯ ಕೃಷಿ ಭೂಮಿಗೆ ತುಂಗಾಭದ್ರಾ ನದಿಯು ನೀರಾವರಿಯ ಮೂಲವಾಗಿದೆ. ಕಬ್ಬು, ಬಾಳೆ ಮತ್ತು ಭತ್ತ ಈ ಪ್ರದೇಶದ ಪ್ರಮುಖ ಬೆಳೆಗಳಾಗಿವೆ.

೨.೬. ಶೈಕ್ಷಣಿಕ ಸಂಸ್ಥೆಗಳು

ಕಂಪ್ಲಿ ಪಟ್ಟಣವು ಹಲವಾರು ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿದೆ. ಸರ್ಕಾರಿ ಮತ್ತು ಖಾಸಗಿ ಪ್ರಾಥಮಿಕ ಪ್ರೌಢಶಾಲೆಗಳು ಪ್ರಮುಖವಾಗಿ ಬಾಲಕಿಯರ ಹಾಗೂ ಬಾಲಕರ ಪದವಿಪೂರ್ವ ಕಾಲೇಜು, ಶಾಲೆಗಳು, ಪ್ರಥಮ ದರ್ಜೆ ಕಾಲೇಜು ಹಾಗೂ ತಾಂತ್ರಿಕ ಕಾಲೇಜುಗಳನ್ನು ಹೊಂದಿದೆ.

೨.೭. ಹಕ್ಕಿಪಿಕ್ಕಿಯರು ವಾಸಿಸುವ ಪ್ರದೇಶ

ಕಂಪ್ಲಿಯಲ್ಲಿ ಪ್ರಸ್ತುತ ನೆಲೆಸಿರುವ ಹಕ್ಕಿಪಿಕ್ಕಿ ಕುಟುಂಬಗಳು ಬೇರೆ ಬೇರೆ ಪ್ರದೇಶದಿಂದ ಬಂದಿವೆ. ಬಳ್ಳಾರಿ ಸೆಟಲ್‌ಮೆಂಟ್, ಹುಬ್ಬಳ್ಳಿ, ಗದಗ ಸೆಟಲ್‌ಮೆಂಟ್, ಖಾನಾಪುರ ಮುಂತಾದ ಕಡೆಯಿಂದ ವಲಸೆ ಬಂದ ಹಕ್ಕಿ ಪಿಕ್ಕಿಯ ೧೪೬ ಕುಟುಂಬಗಳು ಕಂಪ್ಲಿಯ ೧೨ನೇ ವಾರ್ಡಿನ ಹಕ್ಕಿಪಿಕ್ಕಿ ಕಾಲೋನಿಯಲ್ಲಿ ನೆಲೆಸಿವೆ. ಇವರ ಪೂರ್ವದಲ್ಲಿ ಕಂಪ್ಲಿಯ ಹೊರವಲಯದಲ್ಲಿ ಗುಡಾರಗಳನ್ನು ನಿರ್ಮಿಸಿಕೊಂಡು ಜೀವನ ನಡೆಸುತ್ತಿದ್ದರು. ಹಕ್ಕಿಪಿಕ್ಕಿಯರು ಕಂಪ್ಲಿಯಲ್ಲಿ ನೆಲೆನಿಲ್ಲಲು ಇಲ್ಲಿಯ ಪರಿಸರವೇ ಕಾರಣವಾಗಿದೆ. ಸುತ್ತಲೂ ನೀರಾವರಿ ಪ್ರದೇಶವಿದ್ದು ಕೂಲಿಕೆಲಸಗಳು ಸುಲಭವಾಗಿ ಸಿಗುತ್ತವೆಂಬ ಕಾರಣಕ್ಕಾಗಿಯೇ ಕಂಪ್ಲಿಯಲ್ಲಿ

ನೆಲೆಸಿರುವ ಸಾಧ್ಯತೆಗಳಿವೆ. ಹೊರವಲಯದಲ್ಲಿ ನೆಲೆಸಿದ್ದ ಹಕ್ಕಿಪಿಕ್ಕಿಯವರಿಗೆ ೧೯೬೦ರಲ್ಲಿ ಅಂದಿನ ಸ್ಥಳೀಯ ಸರ್ಕಾರವು ಹಕ್ಕಿಪಿಕ್ಕಿ ಕುಟುಂಬಗಳು ನೆಲೆಸಲೆಂದೆ ಊರ ಹೊರವಲಯದಲ್ಲಿ ೧.೫ ಎಕರೆ ಭೂಮಿಯನ್ನು ಮಂಜೂರು ಮಾಡಿತ್ತು. ಆದರೆ ನಂತರ ಬಂದ ಆಡಳಿತಾಧಿಕಾರಿಗಳಾಗಲಿ ಅಥವಾ ಇತರೆ ಅಧಿಕಾರಿಗಳು ಹಕ್ಕಿಪಿಕ್ಕಿ ಕುಟುಂಬಗಳಿಗೆ ನಿವೇಶನವನ್ನು ನೀಡಲಿಲ್ಲ. ತಮಗೆ ಕೊಟ್ಟ ಸ್ಥಳದಲ್ಲಿಯೇ ಗುಡಾರಗಳನ್ನು ಕಟ್ಟಿಕೊಂಡು ನೆಲೆನಿಂತ ಹಕ್ಕಿಪಿಕ್ಕಿಯರು ಇಂದಿಗೂ ಗುಡಿಸಲು ಹಾಗೂ ತಾತ್ಕಾಲಿಕ ಮನೆಗಳನ್ನು ನಿರ್ಮಿಸಿಕೊಂಡು ಇಲ್ಲಿಯೇ ನೆಲೆಸಿರುವರು.

ಹಕ್ಕಿಪಿಕ್ಕಿಯರಿಗೆ ಕಂಪ್ಲಿಯಲ್ಲಿ ವಾಸಿಸಲು ಸರ್ಕಾರ ಸ್ಥಳ ನೀಡಿದ್ದು, ಇದರ ಸರ್ವೆ ನಂ:೧೩೪೯ಎ/೨ ಆಗಿದೆ. ಒಟ್ಟು ೧ ಎಕರೆ ೫೦ ಸೆಂಟ್ಸ್ ವಿಸ್ತೀರ್ಣವುಳ್ಳ ಸ್ಥಳವನ್ನು ನೀಡಿದ್ದು ಈ ಸ್ಥಳವನ್ನು ಶಿಕಾರಿ ಕಾಲೋನಿ ಎಂದು ಗುರುತಿಸಿದ್ದಾರೆ. ಸೆಪ್ಟಂಬರ್ ೦೮, ೧೯೮೮ ರಲ್ಲಿ ಅಂದಿನ ಜಿಲ್ಲಾಧಿಕಾರಿಯಾದ ಪ್ರದೀಪ್ ಪುರಿ ಅವರು ಈ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಿದ್ದಾರೆ. ಇಂದು ಅನೇಕ ಹಕ್ಕಿಪಿಕ್ಕಿ ಕುಟುಂಬಗಳು ಇಲ್ಲಿ ವಾಸಿಸುತ್ತಿದ್ದಾರೆ.

ಅಡಿ ಟಿಪ್ಪಣಿ

೧. ನಾಗೇಶ ಎಂ, ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩, ಪು-೦೬.

೨. ಸುರೇಶ್ ಕೆ ಎಂ, ಕರ್ನಾಟಕ ದೇವಾಲಯ ಕೋಶ, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಕಲಬುರ್ಗಿ ಎಂ ಎಂ, (ಸಂ), ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪, ಪುಟ-೫೦೦-೫೦೧.

೪. www.District at a glance, ballari

ಅಧ್ಯಾಯ: ಮೂರು
ಹಕ್ಕಿಪಿಕ್ಕಿಯರ ಮೂಲ ಮತ್ತು ಸಾಮಾಜಿಕ ಹಿನ್ನೆಲೆ

೩.೧. ಪ್ರಸ್ತಾವನೆ

೩.೨. ಹಕ್ಕಿಪಿಕ್ಕಿಯರ ಮೂಲ

೩.೩. ಹಕ್ಕಿಪಿಕ್ಕಿಯರ ಬೆಡಗುಗಳು ಮತ್ತು ಮನೆದೇವರು

೩.೪. ಹಕ್ಕಿಪಿಕ್ಕಿ ಬುಡಕಟ್ಟಿನ ಹಿನ್ನೆಲೆ

೩.೪.೧. ಐತಿಹ್ಯ – ೧

೩.೪.೨. ಐತಿಹ್ಯ – ೨

೩.೫. ಜೀವನಾವರ್ತ ಆಚರಣೆಗಳು

೩.೫.೧. ಜನನ ಸಂಬಂಧಿ ಆಚರಣೆಗಳು

೩.೫.೨. ನಾಮಕರಣ

೩.೫.೩. ಮದುವೆ

೩.೫.೪. ದೇವರ ಊಟದ ಪೂಜೆ

೩.೫.೫. ಬಳೆ ತೊಡಿಸುವ ಶಾಸ್ತ್ರ

೩.೫.೬. ಬಾಸಿಂಗ ಕಟ್ಟುವ ಶಾಸ್ತ್ರ

೩.೫.೭. ದಿಬ್ಬಣ ಹೊರಡುವುದು

೩.೫.೮. ಅರಿಶಿಣ ನೀರು ಹಾಕುವ ಶಾಸ್ತ್ರ

೩.೫.೯. ತಾಳಿ ಶಾಸ್ತ್ರ

೩.೫.೧೦. ತೆರ ಕೊಡುವ ಪದ್ಧತಿ

ಅಧ್ಯಾಯ: ಮೂರು

ಹಕ್ಕಿಪಿಕ್ಕಿಯರ ಮೂಲ ಮತ್ತು ಸಾಮಾಜಿಕ ಹಿನ್ನೆಲೆ

೩.೧. ಪ್ರಸ್ತಾವನೆ

ಯಾವುದೇ ಒಂದು ಬುಡಕಟ್ಟು ಸಮುದಾಯ ತಮ್ಮ ಹುಟ್ಟು ಬೆಳವಣಿಗೆ ಬಗ್ಗೆ ಹಾಗೂ ತಮ್ಮ ಸಮುದಾಯದ ಹಿನ್ನೋಟದ ಬಗ್ಗೆ ಸ್ಪಷ್ಟವಾಗಿ ಇಂತಹದ್ದೇ ಕಥೆ ಎಂದು ಹೇಳಲು ತುಂಬಾ ಕಷ್ಟ. ಹೀಗೆ ಯಾವುದೇ ಒಂದು ಸಮುದಾಯವು ಮೂಲವಾಗಿ ಎಲ್ಲಿಂದ ಹೇಗೆ ಬಂದು ನೆಲೆಸಿರಬಹುದೆಂದು ಗೊತ್ತಾಗಲು ಕೆಲವು ಪುರಾಣ ಕಥೆಗಳು ಹಾಗೂ ಐತಿಹ್ಯಗಳಿಂದ ತಿಳಿಯಬಹುದಾಗಿದೆ. ಈ ರೀತಿಯಾಗಿ ಒಂದು ಸಮುದಾಯದ ಹುಟ್ಟು ಮತ್ತು ಬೆಳವಣಿಗೆಯನ್ನು ಚರಿತ್ರೆಯಿಂದ ಕಂಡುಹಿಡಿಯಬಹುದಾಗಿದೆ.

ಚರಿತ್ರೆ ಎಂಬುದು ಅನೇಕ ರೀತಿಯ ತಿಳುವಳಿಕೆಯನ್ನು ನೀಡುತ್ತದೆ. ಅದೇರೀತಿಯಾಗಿ ಮುಖ್ಯವಾಗಿ ಒಂದು ಸಮುದಾಯದ ಹುಟ್ಟು ಬೆಳವಣಿಗೆ ವಿನಾಶವನ್ನು ಸಹ ಕಟ್ಟಿಕೊಡುತ್ತದೆ. ಚರಿತ್ರೆ ಎಂಬುದು ಐತಿಹಾಸಿಕ ಕಥೆಗಳು, ಪುರಾಣಗಳು, ಐತಿಹ್ಯಗಳು, ಗೀತೆಗಳು, ಲಾವಣಿಗಳು ಇವೆಲ್ಲವುಗಳಲ್ಲದೆ ಒಬ್ಬ ವ್ಯಕ್ತಿ ಹಾಗೂ ಸಮುದಾಯದ ಚರಿತ್ರೆಯನ್ನು ತಿಳಿಸಿಕೊಡುವಲ್ಲಿ ಸಹಕಾರಿಯಾಗಿದೆ.

"ಚರಿತ್ರೆ ಎಂಬುದು ಒಂದು ನಿರ್ದಿಷ್ಟ ಪರಿಸರದಲ್ಲಿ ಹಿಂದೆ ಸಂಭವಿಸಿದ ಘಟನೆಗಳು ಅಥವಾ ಬದುಕಿ ಬಾಳಿದ ಜನಾಂಗಗಳ ಅಥವಾ ಸಮುದಾಯಗಳ ಅಧ್ಯಯನ. ಎಲ್ಲಾ ಕಾಲಘಟ್ಟಗಳಲ್ಲಿಯೂ ಮನುಷ್ಯನ ಸ್ಥಿತಿಗಳ ಬಗೆಗಿನ ಕಾರಣ, ಉದ್ದೇಶ ಹಾಗೂ ಪರಸ್ಪರ ಸಂಬಂಧಗಳನ್ನು ನಿಖರವಾಗಿ ಅರಿತುಕೊಳ್ಳುವ ಪ್ರಯತ್ನ".[೧] ಸಮುದಾಯಗಳ ಹಿನ್ನೆಲೆಯನ್ನು ತಿಳಿಯಲು ಚರಿತ್ರೆ ಅಧ್ಯಯನ ಅವಶ್ಯಕವಾದದ್ದು. ಎಲ್ಲಾ ಸಮುದಾಯಗಳ ಹಿಂದೆ ನಡೆದಿರುವ ಇತಿಹಾಸಕ್ಕೂ ಹಾಗೂ ಪ್ರಸ್ತುತ ಜೀವನಕ್ಕೂ ಚರಿತ್ರೆಯ ಅಧ್ಯಯನವು ಬಹುಮುಖ್ಯ ಪತ್ರ ವಹಿಸುತ್ತದೆ.

ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯವಾಗಲಿ ಅಥವಾ ಯಾವುದೇ ಒಂದು ಬುಡಕಟ್ಟು ಸಮುದಾಯವು ಮೂಲತಃವಾಗಿ ಹೇಗೆ ಬೆಳೆದುಬಂದಿದೆ ಎನ್ನುವುದಕ್ಕೆ ಲಿಖಿತ ದಾಖಲೆ ಇಲ್ಲ ಆದರೆ ಅವರಲ್ಲಿ ಸಾಕಷ್ಟು

ಮೌಖಿಕ ಸಾಹಿತ್ಯ ಲಭ್ಯವಿದೆ. ವಾಘ್ರೀ ಭಾಷೆಯನ್ನು ಹಕ್ಕಿಪಿಕ್ಕಿ ಸಮುದಾಯದವರು ಮಾತೃ ಭಾಷೆಯನ್ನಾಗಿ ಬಳಸುತ್ತಾರೆ. ಅವರು ಬಳಸುವ ಪದಗಳಿಂದ ಮತ್ತು ಅದನ್ನು ಉಚ್ಛರಿಸುವ ರೀತಿಯಿಂದ ಆ ಸಮುದಾಯದ ಪೂರ್ವಿಕರು ಮಾತನಾಡುವ ಭಾಷೆಯಿಂದ ಅವರು ಈ ಹಿಂದೆ ಎಲ್ಲಿ ನೆಲೆಸಿದ್ದರು. ಪ್ರಸ್ತುತ ಇಲ್ಲಿ ಹೇಗೆ ಮತ್ತು ಏಕೆ ಬಂದು ಜೀವನ ನಡೆಸುತ್ತಿದ್ದಾರೆಂದು ತಿಳಿಯಬಹುದಾಗಿದೆ.

ಅಧ್ಯಯನಕಾರರಾದ ಮೆಕ್ಕವಲಿ, ವೆರಿಯರ್ ಎಲ್ವಿನ್, ಎಡ್ಗರ್ ಥರ್ಸ್ಟನ್, ವಿಲಿಯಂ ಜೋನ್ಸ್, ಮಾಕ್ಸ್ ಮುಲ್ಲರ್, ರಾಡ್‌ಕ್ಲಿಫ್ ಬ್ರೌನ್, ಅನಂತ ಕೃಷ್ಣ ಅಯ್ಯರ್ ಇವರುಗಳು ಅನೇಕ ಸಮುದಾಯಗಳನ್ನು ತಮ್ಮದೇ ಆದ ರೀತಿಯಲ್ಲಿ ಅಧ್ಯಯನ ಮಾಡಿರುತ್ತಾರೆ. ಅಧ್ಯಯನ ಮಾಡುವ ಸಂದರ್ಭದಲ್ಲಿ ಸಮುದಾಯಗಳು ವಾಸಿಸುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಅವರ ಸಾಮಾಜಿಕ ಜೀವನವನ್ನು ಅಧ್ಯಯನ ಮಾಡಿ ಅವರುಗಳನ್ನು ಇಂತಹದ್ದೇ ಸಮುದಾಯಕ್ಕೆ ಸೇರಿದವರೆಂದು ಗುರುತಿಸುತ್ತಾರೆ. ಬಹಳ ಮುಖ್ಯವಾಗಿ ಅವರು ಬಳಸುವ ಭಾಷೆ, ವೇಷ ಭೂಷಣ, ಆಚಾರ ವಿಚಾರ, ಜೀವನ ಶೈಲಿ, ಅವರ ಸಂಸ್ಕೃತಿಯಿಂದ ಗುರುತಿಸುತ್ತಾರೆ. ಹೀಗೆ ಸಮುದಾಯಗಳನ್ನು ಗುರುತಿಸುವ ಸಂದರ್ಭದಲ್ಲಿ ಅವರುಗಳ ತನ್ನದೇ ಆದಂತಹ ಕೆಲವು ಚಾರಿತ್ರಿಕ ಅಂಶಗಳು, ಪುರಾಣಗಳು, ಕಥೆಗಳು ಸೃಷ್ಟಿಯಾಗಿರುವವು. ಹಾಗೆಯೇ ಇವುಗಳು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಮುಂದುವರೆಯುತ್ತವೆ.

ಹಕ್ಕಿಪಿಕ್ಕಿ ಸಮುದಾಯದವರು ದೇವರ ಮೇಲೆ ಅಪಾರ ನಂಬಿಕೆ ಇರುವವರು ಈ ಸಮುದಾಯಕ್ಕೆ ತಮ್ಮದೇ ಆದ ಕುಲದೇವತೆಯೊಬ್ಬಳು ಇರುವುದನ್ನು ಗಮನಿಸುತ್ತೇವೆ. "ಸಮುದಾಯದ ಹಿರಿಯರಿಗೆ ಆಕೆ ದಾರಿ ಮಾರ್ಗದಲ್ಲಿ ಸಿಕ್ಕಿದ್ದಲ್ಲದೇ ಅವಳು ಅವರನ್ನು ನೆಲೆಸಲು ಅನುವು ಮಾಡಿಕೊಟ್ಟಿರುವಳು ಎಂದು ಹೇಳುವರು. ಕಾಲಾನಂತರ ಮುಂದೆ ಅವರು ಈ ಸ್ಥಳವನ್ನು ಬಿಟ್ಟು ಬೇರೆ ಸ್ಥಳಗಳಲ್ಲಿ ಬದುಕನ್ನು ರೂಢಿಸಿಕೊಳ್ಳುವಾಗ ಅವಳ ನೆನಪನ್ನು ಆರಾಧನೆಗಳ ರೂಪದಲ್ಲಿ ಆಚರಿಸುವ ಮೂಲಕ ಉಳಿಸಿಕೊಳ್ಳುತ್ತಾರೆ".[೨] ಹೀಗೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಜೀವನವನ್ನು ನಡೆಸುತ್ತಾ ಹಕ್ಕಿಪಿಕ್ಕಿಯರು ಗುಜರಾತ್, ರಾಜಸ್ಥಾನ ಮತ್ತು ಮಹಾರಾಷ್ಟ್ರದಿಂದ ಅಲೆಯುತ್ತಾ ಕರ್ನಾಟಕಕ್ಕೆ ಬಂದು ನೆಲೆಸಿರುವರು. ಭಾರತದಲ್ಲಿ ಬ್ರಿಟೀಷರ ಆಡಳಿತ ಇದ್ದ ಸಮಯದಲ್ಲಿ ಈ ಸಮುದಾಯವನ್ನು ಗುಡ್ಡಗಾಡು ಬೇಟೆಗಾರರೆಂದು ಗುರುತಿಸಿ ೧೮೭೩ರಲ್ಲಿ ಅಪರಾಧಿ ಬುಡಕಟ್ಟೆಂದು ಪರಿಗಣಿಸಿತು. "ಆ ಕಾಯ್ದೆಯ ಅಡಿಯಲ್ಲಿ ಮೀಸಲಾತಿ ಸೌಲಭ್ಯಗಳನ್ನು ಕಲ್ಪಿಸಲು ೧೯೬೦ರಲ್ಲಿ ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ದಾಖಲಾದ ಹಕ್ಕಿಪಿಕ್ಕಿಯರು ಪ್ರಾದೇಶಿಕ ಮಿತಿಯನ್ನು ೧೯೭೬ರಲ್ಲಿ ಸಡಿಲಿಸಿಕೊಂಡು ಕರ್ನಾಟಕದಾದ್ಯಂತ ಚದುರಿಕೊಂಡರು. ಹಕ್ಕಿಪಿಕ್ಕಿ–ಪಾರ್ಧಿ, ಹರಣಿಶಿಕಾರಿ, ಫಾನ್ಸೆಪಾರ್ಧಿ, ರಾಜ್‌ಪಾರ್ಧಿ, ವಾಗ್ರಿ, ಚಿಗರಿಕರ್, ಖೇಡ್, ಚೆಂಚರಗಾರ್, ನೀರಶಿಕಾರಿ(ನೀಲ್‌ಶಿಕಾರಿ), ವೇಲ್‌ಶಿಕಾರಿ, ಪಾಶೆಚಾರಿ ಎಂದು ಹಲವು ಹೆಸರುಗಳಿಂದ ಇವರನ್ನು ದೇಶದಾದ್ಯಂತ ಗುರುತಿಸುವರು.[೩]

೩.೨. ಹಕ್ಕಿಪಿಕ್ಕಿಯರ ಮೂಲ

ಹಕ್ಕಿಪಿಕ್ಕಿ ಎನ್ನುವ ಹೆಸರು ಅವರು ಅರಣ್ಯ ಪ್ರದೇಶದಲ್ಲಿ ತಮ್ಮ ಹೊಟ್ಟೆಪಾಡಿಗಾಗಿ ಪಕ್ಷಿಗಳನ್ನು ಬೇಟೆಯಾಡಿ ಅದನ್ನು ಆಹಾರವನ್ನಾಗಿ ಸೇವಿಸಿ ತಮ್ಮ ಜೀವನವನ್ನು ನಡೆಸುವ ಹಿನ್ನೆಲೆಯಲ್ಲಿ ಬಂದಿದ್ದಾಗಿದೆ.

ಇವರು "ಮೂಲತಃ ಗುಜರಾತ್ ಹಾಗೂ ರಾಜಸ್ಥಾನದಿಂದ ಬಂದವರು, ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದ ಮೂಲಕ ಕರ್ನಟಕಕ್ಕೆ ವಲಸೆ ಬಂದವರು. ಸುಮಾರು ೧೯೧೧ರ ವೇಳೆಗೆ ಗುಜರಾತ್‌ದಿಂದ ಮಹಾರಾಷ್ಟ್ರಕ್ಕೆ ಬಂದು ಮಹಾರಾಷ್ಟ್ರದ ಬಾಂಬೆ, ಸೊಲ್ಲಾಪುರ, ಕೊಲ್ಲಾಪುರದಲ್ಲಿ ಹಾಗೂ ಕರ್ನಾಟಕದ ಹುನಗುಂದ, ಮುದ್ದೇಬಿಹಾಳ, ಬಾಗಲಕೋಟೆ, ಗದಗ, ಹುಬ್ಬಳ್ಳಿ – ಧಾರವಾಡದಲ್ಲಿ ನೆಲೆಸಿ ೧೯೫೮ರಲ್ಲಿ ಹುಣಸೂರು ತಾಲೂಕಿನ ಪಕ್ಷಿರಾಜಪುರದಲ್ಲಿ ಹಲವರನ್ನು ನೆಲೆ ನಿಲ್ಲಿಸಲಾಯಿತು".[೪] ಮೂಲದಿಂದ ಇಲ್ಲಿಯವರೆಗೂ ಹಕ್ಕಿಪಿಕ್ಕಿ ಸಮುದಾಯದವರು ಹಲವು ಸಮಸ್ಯೆ ಮತ್ತು ಸವಾಲುಗಳನ್ನು ಅನುಭವಿಸುತ್ತಾ ಬಂದಿರುವರು. ಶ್ರೇಣೀಕರಣದ ಒಂದು ವ್ಯವಸ್ಥೆಯಿಂದಾಗಿ ಬದುಕನ್ನು ಕಟ್ಟಿಕೊಳ್ಳಲು ದುಡಿಯುವ ಸಮುದಾಯಗಳು ಇವರಿಂದ ಕೆಲಸ ಮಾಡಿಸಿಕೊಳ್ಳುವ ಮೇಲ್ವರ್ಗಗಳು ಹಾಗೂ ಬಂಡವಾಳಶಾಹಿಗಳ ಮಧ್ಯೆ ಅಸಮಾನತೆಯಿಂದ ನಲುಗುತ್ತಾ ಜೀವನವನ್ನು ಸಾಗಿಸುತ್ತಿದ್ದಾರೆ. ಇವೆಲ್ಲವುಗಳನ್ನು ನಾವು ನಮ್ಮ ಸಮಾಜದ ಚರಿತ್ರೆಯುದ್ದಕ್ಕೂ ಕಾಣುತ್ತೇವೆ.

ಹಲವು ಸಮುದಾಯಗಳು ಭಾರತದಾದ್ಯಂತ ನೆಲೆಸಿರುವುದನ್ನು ಕಾಣುತ್ತೇವೆ. ಬಹಳ ಮುಖ್ಯವಾಗಿ ಸಮಾಜದಲ್ಲಿ ಇಂದು ಎದ್ದು ಕಾಣುವ ಸಮಸ್ಯೆ ಸಮಾನತೆಯಿಲ್ಲದ ಸಮಾಜ ಹಿಂದಿನ ಕಾಲದಲ್ಲಿಯೇ ಅಸಮಾನತೆ ಎಂಬುದು ಹುಟ್ಟಿಕೊಂಡಿತ್ತು. ಸಮಾಜದಲ್ಲಿ ಸಂಘರ್ಷವೆಂಬುದು ಆರಂಭವಾಗಿದ್ದು ಧರ್ಮ, ಜಾತಿ, ಬಡವ – ಶ್ರೀಮಂತ, ಮೇಲ್ವರ್ಗ – ಕೆಳವರ್ಗ, ದುಡಿಯುವ – ದುಡಿಸಿಕೊಳ್ಳುವ, ಶೋಷಿತರು – ಶೋಷಕರು ಎಂಬ ಆಧಾರದ ಮೇಲೆ ವರ್ಗಗಳ ಮೇಲಿನ ಶೋಷಣೆಯನ್ನು ಇಂದಿಗೂ ಕಾಣುತ್ತೇವೆ.

ದೇಶದಾದ್ಯಂತ ನೆಲೆಸಿರುವ ಇಂತಹ ಅನೇಕ ಬುಡಕಟ್ಟು ಸಮುದಾಯಗಳು ಇಂದಿಗೂ ಎದುರಿಸುತ್ತಿರುವ ಮುಖ್ಯ ಸಮಸ್ಯೆ ಎಂದರೆ? ಅಸಮಾನತೆ, ತಾರತಮ್ಯ, ಶೋಷಣೆ ಸಮಾಜದಲ್ಲಿನ ಜಾತಿ ವ್ಯವಸ್ಥೆ ವರ್ಗ ವ್ಯವಸ್ಥೆಗಳಿಂದಾಗಿ ಅನೇಕ ತಳ ಸಮುದಾಯಗಳು ಅನಿವಾರ್ಯವಾಗಿ ಮೇಲ್ವರ್ಗದವರ ಸೇವೆಯನ್ನು ಮಾಡುತ್ತಿರುವ ಜಾತಿಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹೀನಾಯ ಶೋಷಣೆಗೆ ಒಳಗಾಗಿದ್ದಾರೆ.

ಭಾರತದಲ್ಲಿ ಆಡಳಿತ ನಡೆಸುತ್ತಿದ್ದ ಬ್ರಿಟೀಷ್ ಸರ್ಕಾರ ಹಕ್ಕಿಪಿಕ್ಕಿ ಸಮುದಾಯವನ್ನು ೧೮೭೧ರಲ್ಲಿ ಅಪರಾಧಿ ಬುಡಕಟ್ಟು ಕಾಯ್ದೆ ಪ್ರಕಾರ ಇವರನ್ನು ಅಪರಾಧಿ ಬುಡಕಟ್ಟು ಸಮುದಾಯವೆಂದು ಗುರುತಿಸಿದರು. ಹಕ್ಕಿಪಿಕ್ಕಿಯರನ್ನು ಅಪರಾಧಿ ಬುಡಕಟ್ಟು ಸಮುದಾಯವೆಂದು ಗುರುತಿಸಲು ಕೆಲವು ಕಾರಣಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಹಕ್ಕಿಪಿಕ್ಕಿಯರು ಸೇರಿದಂತೆ ಅನೇಕ ಅರಣ್ಯವಾಸಿ ಬುಡಕಟ್ಟುಗಳು ಅರಣ್ಯದಲ್ಲಿ ತಮ್ಮ ನೆಮ್ಮದಿ ಜೀವನವನ್ನು ನಡೆಸುತ್ತಿದ್ದರು. ಖಾತೆ, ಕಂದಾಯದ ಗೊಂದಲ ಗೋಜಲುಗಳಿಲ್ಲದೇ ಸಹಜವಾಗಿಯೇ ಅರಣ್ಯದಲ್ಲಿ ಆಹಾರ ಸಂಗ್ರಹಣೆ, ಬೇಟೆ, ಪಶುಪಾಲನೆ, ಕೃಷಿ ಮತ್ತು ಕಾಡಿನಲ್ಲಿ ಸಿಗುವ ಉತ್ಪನ್ನಗಳನ್ನು ಸಂಗ್ರಹಿಸಿಕೊಂಡು ಅರಣ್ಯ ಪ್ರದೇಶದಲ್ಲಿ ಬುಡಕಟ್ಟು ಸಮುದಾಯಗಳು ನೆಮ್ಮದಿ ಜೀವನ ನಡೆಸುತ್ತಿದ್ದವು.

ಆಧುನಿಕ ವ್ಯವಸ್ಥೆಯು ಬೆಳೆದಂತೆ ಬುಡಕಟ್ಟು ಸಮುದಾಯಗಳು ಕಷ್ಟಕ್ಕೆ ಸಿಲುಕಿದವು. ತಮ್ಮ ಬದುಕಿಗಾಗಿ ಒಂದು ಕಡೆ ಜೀವನ ಕಟ್ಟಿಕೊಳ್ಳಲಾಗದೇ ತಮ್ಮ ಹೊಟ್ಟೆಪಾಡಿಗಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗಿ ಜೀವನ ಸಾಗಿಸಬೇಕಾದ ಪರಿಸ್ಥಿತಿ ಬಂದಿತು.

"ಬ್ರಿಟೀಷ್ ವಸಾಹತುಶಾಹಿಗಳ ಆಳ್ವಿಕೆಯಿಂದ ಇಡೀ ಭೂಮಿಯನ್ನು ಬಹುಸಂಖ್ಯಾತರ ಮತ್ತು ಮೇಲ್ವರ್ಗದ ಜನರ ಆಸ್ತಿಯನ್ನಾಗಿ ಪರಿವರ್ತಿಸಿ ಅಭಯಾರಣ್ಯಗಳ ಒಂದು ನೆಪದಲ್ಲಿ ಸಮಾಜ ಪುನರ್ ನಿರ್ಮಾಣ ಕಾರ್ಯದ ಅಡಿಯಲ್ಲಿ ಅರಣ್ಯದಲ್ಲಿದ್ದ ಸಮುದಾಯಗಳನ್ನು ಅರಣ್ಯದಿಂದ ಹೊರಹಾಕಲಾಯಿತು. ರಸ್ತೆ ನಿರ್ಮಾಣ, ಆಣೆಕಟ್ಟು ಹೊಸ ಪ್ಲಾಂಟೇಶನ್‌ಗಳ ನೆಪದಲ್ಲಿ ಹಲವು ಯೋಜನೆಗಳನ್ನು ಜಾರಿಗೆ ತಂದರು".[೫] ಅಭಿವೃದ್ಧಿಯ ಹೆಸರಿನಲ್ಲಿ ಬ್ರಿಟೀಷರು ಜಾರಿಗೆ ತಂದ ಅನೇಕ ಯೋಜನೆಗಳು ಅರಣ್ಯವಾಸಿ ಬುಡಕಟ್ಟುಗಳ ಜೀವನ್ನಕ್ಕೆ ಮುಳುವಾಯಿತು. "ವೆರಿಯರ್ ಎಲ್ವಿನ್‌ರವರು ಬುಡಕಟ್ಟು ಜನರನ್ನು ಅಪಾರವಾಗಿ ಪ್ರೀತಿಸುತ್ತಿದ್ದರು. ಅವರು ಬುಡಕಟ್ಟು ವ್ಯಕ್ತಿಯೊಂದಿಗೆ ಸಂಭಾಷಿಸುತ್ತಿದ್ದಾಗ ನಿಮ್ಮ ಬಡತನಕ್ಕೆ ಏನು ಕಾರಣವೆಂದು ಕೇಳಿದರು. ಆಗ ಆ ವ್ಯಕ್ತಿಯು ಈ ರೀತಿಯಾಗಿ ಹೇಳುತ್ತಾನೆ, ನಾವು ತುಂಬಾ ಸುಖಿಗಳಾಗಿದ್ದೆವು ಅಷ್ಟರಲ್ಲಿ ನಮ್ಮ ನಾಡಿನ ಮಧ್ಯೆ ರೈಲು ಕಂಬಿ ಹಾಕಿ ರೈಲೊಂದು ಬಂತು ಆ ರೈಲು ಬಂದಾಗ ನಮ್ಮ ಎಲ್ಲಾ ದೇವತೆಗಳು ಅದನ್ನು ಹತ್ತಿ ಕಾಡು ಬಿಟ್ಟು ನಗರ ಸೇರಿಬಿಟ್ಟರು. ಅಲ್ಲಿನ ಜನ ನಮ್ಮ ದೇವತೆಗಳ ನೆರವಿನಿಂದ ಶ್ರೀಮಂತರಾಗುತ್ತಿದ್ದಾರೆ. ಆದರೆ ನಾವು ಬಡವರಾಗುತ್ತಿದ್ದೇವೆ".[೬] ಅಂದರೆ ನಮ್ಮ ಅರಣ್ಯ ಸಂಪತ್ತನ್ನು ಅಭಿವೃದ್ಧಿಯ ಹೆಸರಿನಲ್ಲಿ ಬಳಸಿಕೊಂಡು ನಗರದವರು ಶ್ರೀಮಂತರಾಗುತ್ತಿದ್ದಾರೆ. ಕಾಡನ್ನೇ ಆಶ್ರಯಿಸಿ ಬದುಕುತ್ತಿದ್ದ ನಾವು ಇವತ್ತಿಗೂ ಹೀನಾಯ ಸ್ಥಿತಿಯಲ್ಲಿದ್ದೇವೆ ಎನ್ನುತ್ತಾರೆ. ಅದು ನಿಜವೂ ಹೌದು.

ಬ್ರಿಟೀಷರು ಬುಡಕಟ್ಟು ಸಮುದಾಯಗಳನ್ನು ಅರಣ್ಯದಿಂದ ಒಕ್ಕಲೆಬ್ಬಿಸಿದರು. ಕೆಲವು ಬುಡಕಟ್ಟು ಸಮುದಾಯಗಳು ಇಷ್ಟವಿಲ್ಲದಿದ್ದರೂ ಬ್ರಿಟೀಷರ ದೌರ್ಜನ್ಯಕ್ಕೆ ನಲುಗಿ ಕಾಡು ಬಿಟ್ಟರು. ಆದರೆ ಪ್ರಕೃತಿಯನ್ನೇ ದೈವ ಎಂದು ನಂಬಿರುವ ಕೆಲವು ಬುಡಕಟ್ಟು ಸಮುದಾಯಗಳು ಅರಣ್ಯವನ್ನು ಬಿಡದೇ ಅರಣ್ಯ ನಮ್ಮದು ಎಂದು ಬ್ರಿಟೀಷರ ಜೊತೆ ಹೋರಾಟಕ್ಕೆ ಇಳಿದರು.

ಹೀಗೆ ಸಂಘರ್ಷಕ್ಕೆ ಇಳಿದ ಸಮುದಾಯಗಳನ್ನು ಹತ್ತಿಕ್ಕಲು ಬ್ರಿಟೀಷರು ಬುಡಕಟ್ಟುಗಳಿಗಾಗಿ ಯೋಜನೆಗಳನ್ನು ತರುತ್ತೇವೆ, ನಿಮಗೆ ಹಲವು ರೀತಿಯಾಗಿ ಸೌಲಭ್ಯಗಳನ್ನು ನೀಡುತ್ತೇವೆ ಎಂದು ನಂಬಿಸಿ ಅವರನ್ನು ಕಾಡಿನಿಂದ ಹೊರಹಾಕಿದರು. ಬ್ರಿಟೀಷ್ ಸರ್ಕಾರವು ಅವರಿಗೆ ಯಾವುದೇ ರೀತಿಯ ಸಹಾಯ ಮಾಡದೇ ಅವರನ್ನು ತಮ್ಮ ಮನೆ, ಹೊಲ, ಗದ್ದೆ, ಜಮೀನು, ಎಸ್ಟೇಟ್, ಕಾರ್ಖಾನೆಗಳಲ್ಲಿ ಕೂಲಿಕಾರ್ಮಿಕರಾಗಿ ಹಾಗೂ ಜೀತದಾಳುಗಳಾಗಿ ಪ್ರಭುತ್ವದ ಅಡಿಯಲ್ಲಿ ಕೆಲಸ ಮಾಡುವಂತೆ ಮಾಡಿದರು. ಹೀಗೆ ಕಂಪನಿ ಸರ್ಕಾರದವರು ಹಾಗೂ ಮೇಲ್ವರ್ಗದ ಸಮಾಜದವರು ಬುಡಕಟ್ಟು ಸಮುದಾಯದವರನ್ನು ಹೀನಾಯವಾಗಿ ಶೋಷಣೆ ಮಾಡಿದರು.

"೧೮೭೧ರಲ್ಲಿ ಅಪರಾಧಿ ಬುಡಕಟ್ಟು ಕಾಯ್ದೆ ಉತ್ತರ ಭಾರತದಲ್ಲಿ ಕಂಪನಿ ಸರ್ಕಾರವು ೧೭೯೩ರಲ್ಲಿ ಕೆಲವು ಸಮುದಾಯಗಳನ್ನು ಪಟ್ಟಿ ಮಾಡಿ ಅವು ಅಪಾಯಕಾರಿಗಳೆಂದು ಗುರುತಿಸಿ ಇದರಲ್ಲಿ ಶೇಕಡ ೯೫ ರಷ್ಟು ಸಮುದಾಯಗಳು ಅಲೆಮಾರಿಗಳು, ಅವರಲ್ಲಿ ಹಕ್ಕಿಪಿಕ್ಕಿ ಸಮುದಾಯದವರು ಒಬ್ಬರು".[೭] ಹಕ್ಕಿಪಿಕ್ಕಿಯರು ಮೊದಲಿನಿಂದಲೂ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸುತ್ತ, ಪ್ರಾಣಿಪಕ್ಷಿಗಳನ್ನು ಬೇಟೆಯಾಡುತ್ತ, ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ನಂತರ ಬ್ರಿಟೀಷರು ಅರಣ್ಯ ಸಂರಕ್ಷಣಾ ಕಾಯ್ದೆ ಅಡಿ ವನ್ಯ ಮೃಗಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಬೇಟೆ ನಿಷೇಧಿಸಿ ಕಾನೂನನ್ನು ಜಾರಿಗೆ ತಂದರು. ಹೀಗೆ ಅಲೆಮಾರಿಗಳಾಗಿದ್ದ ಇವರು ಬೇಟೆಯನ್ನು ಬಿಟ್ಟ ನಂತರ ತಮ್ಮ ಜೀವನವನ್ನು ನಡೆಸುವುದಕ್ಕೋಸ್ಕರ ಅರಣ್ಯ ಉತ್ಪನ್ನಗಳನ್ನು ತಂದು

ಮಾರಾಟ ಮಾಡಿ ಜೀವನ ನಡೆಸುತ್ತಿದ್ದರು. ಹೀಗೆ ಅರಣ್ಯಕ್ಕೆ ಕದ್ದು ಹೋಗಿ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುವುದರಿಂದ ಕಂಪನಿ ಸರ್ಕಾರ ಇವರಿಗೆ ಅಪರಾಧಿಗಳೆಂದು ಹಿಡಿದು ಶಿಕ್ಷೆಗೆ ಒಳಪಡಿಸುತ್ತಿದ್ದರು.

ಹೀಗೆ ಹಕ್ಕಿಪಿಕ್ಕಿಯರು ತಮ್ಮ ಜೀವನದಲ್ಲಿ ಶೋಷಣೆ, ದೌರ್ಜನ್ಯಕ್ಕೆ ಒಳಗಾಗಿ ಅನೇಕ ಅಡೆತಡೆಗಳನ್ನು ಎದುರಿಸಿ ತಮ್ಮ ಸಂಸ್ಕೃತಿ ಜ್ಞಾನ ಪರಂಪರೆಯನ್ನು ಉಳಿಸಿಕೊಳ್ಳುತ್ತ ಆಧುನಿಕತೆಗೆ ಹೊಂದಿಕೊಳ್ಳುತ್ತ ಅತ್ತ ಆಧುನಿಕತೆಯೂ ಅಲ್ಲದೆ ಇತ್ತ ಪಾರಂಪರಿಕತೆಯೂ ಅಲ್ಲದ ಕಸರತ್ತಿನ ಜೀವನ ನಡೆಸುತ್ತಿದ್ದಾರೆ.

ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರದಿಂದ ವಲಸೆ ಬಂದ ಇವರು ಕರ್ನಾಟಕಕ್ಕೆ ಬಂದು ಹಲವು ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಹಾಗೆಯೇ ಬಳ್ಳಾರಿ ಜಿಲ್ಲೆಯ ಕಂಪ್ಲಿ ಪಟ್ಟಣದಲ್ಲಿ ಇಂದು ಅವರು ಜೀವನ ನಡೆಸುತ್ತಿದ್ದಾರೆ. ಆಧುನಿಕ ಸಮಾಜಕ್ಕೆ ಹೊಂದಿಕೊಂಡು ಇಂದಿಗೂ ಸಹ ತಮ್ಮ ಸಂಸ್ಕೃತಿ ಮತ್ತು ಜ್ಞಾನ ಪರಂಪರೆಯನ್ನು ಹೊತ್ತು ಸಮಾಜದಲ್ಲಿ ಉನ್ನತವಾಗಿ ಬೆಳೆಯಬೇಕೆಂಬ ಆಸೆಯನ್ನು ಇಟ್ಟುಕೊಂಡು ವಿವಿಧ ವೃತ್ತಿಯನ್ನು ಮಾಡುತ್ತಾ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ.

೩.೩. ಹಕ್ಕಿಪಿಕ್ಕಿಯರ ಬೆಡಗುಗಳು ಮತ್ತು ಮನೆದೇವರು

೧. ಸರ್ಕ್‌ಸಾವಂಡಿಯೋ–ಚವ್ಹಾಣ್/ಸಾರ್ಕ್ ಸಾವಂಡ –ಗಂಗಮ್ಮ

೨. ಕೋಡಿಯಾರ್ – ಕಾಳಿ/ಕೋಡಿಯಾರ್ ದೇವಿ– ಗಹಲಾದೇವಿ.

೩. ಪಿಂಪ್ಳಾಜ – ರಾಠೋಡ್/ಪಿಂಪ್ಳಾದೇವಿ–ದ್ಯಾಮವ್ವ

೪. ಕೋರುಬ್ಯಾ / ಮಲ್ಪ್‌ದೇವಜರ್ ದೇವಿ – ಶೆಟಿಗೆಮ್ಮ

೫. ವಿಕೋತಿಯಾ–ಪವಾರ್/ವಿಹೋದೇವಿ – ಕಾಳಮ್ಮ

೬. ಹರ್ಕತಿಯಾ / ಹರ್ಕತಾದೇವಿ

ಹಕ್ಕಿಪಿಕ್ಕಿಯರಲ್ಲಿ ಎರಡು ಪ್ರಮುಖ ಪಂಗಡಗಳನ್ನು ಕಾಣಬಹುದಾಗಿದೆ. ಅವುಗಳೆಂದರೆ ಜಾತ್ ಮತ್ತು ಭುಕ್ಯಾ.

೧. ಜಾತ್ ಪಂಗಡದಲ್ಲಿ ನಾಲ್ಕು ಗೋತ್ರಗಳು ಇರುವವು.

೧.೧. ಮೂಡ್ ೧.೨. ರಾಣೋ ೧.೩. ಪವಾರ್ ೧.೪. ವಡಾತ್ಸಾ

೨. ಜಾತ್ ಪಂಗಡದಲ್ಲಿ ೧೧ ಬಳಿಗಳನ್ನು ಕಾಣಬಹುದು.

೨.೧. ಒಬುಲಾ ೨.೨. ಬಂಗಡಿ ೨.೩. ಕುಶಲ್ ೨.೪. ಬಾಳೋ ೨.೫. ಅಂದೋ ೨ . ೬ . ಬೈಯ್ಯೋ ೨.೭. ಖಾತೋ ೨.೮. ಲಿಂಬೋ ೨.೯. ನಾಗವಳ್ಗಿ ೨.೧೦. ದಾಮೋ ೨.೧೧. ಶಾಮ್.

೩. ಭುಕ್ಯಾ ಪಂಗಡದಲ್ಲಿ ೧೦ ಬಳಿಗಳನ್ನು ಗುರುತಿಸಬಹುದು.

೩.೧. ಭೀರು ೩.೨. ಸಿವ್ಗೆ ೩. ದೇವಿದಾ ೩.೪. ಶೇಯಿಂದು೩.೫. ಸತ್ತು ೩.೬. ರಾಮಚಂದ್ರ
೩.೭. ಸಕ್ರೊಬ ೩.೮. ಕೃಷ್ಣಾಜಿ ೩.೯. ಮೇಕಾಜ ೩.೧೦. ಶಂಭೋ

೩.೪. ಹಕ್ಕಿಪಿಕ್ಕಿ ಬುಡಕಟ್ಟಿನ ಹಿನ್ನೆಲೆ

"ಬುಡಕಟ್ಟು ಸಮುದಾಯಗಳ ಸೃಷ್ಟಿ ಪುರಾಣಗಳು ಅಥವಾ ಚರಿತ್ರೆಯನ್ನು ಗಮನಿಸಿದಾಗ ಎಲ್ಲಾ ಸೃಷ್ಟಿ ಪುರಾಣ ಹಾಗೂ ಅದರ ಹಿನ್ನೆಲೆಯಲ್ಲಿ ಆ ಸಮದಾಯಗಳ ಹುಟ್ಟಿಗೆ ಪ್ರಮುಖನಾಗಿದ್ದ ವ್ಯಕ್ತಿ ಅಥವಾ ಮೂಲ ಪುರುಷ ಎನ್ನಿಸುವನು ಯಾವುದೋ ಒಂದು ಶಾಪದಿಂದ ಹುಟ್ಟುವನು. ಆದ್ದರಿಂದ ಚರಿತ್ರೆಯು ಒಂದು ಶಾಪದಿಂದ ಚರಿತ್ರೆಯು ಹುಟ್ಟಿತು. ಆದ್ದರಿಂದಲೇ ನಮ್ಮ ಸಮುದಾಯಗಳು ಹೀಗೆ ಕೀಳು ಹಾಗೂ ಕೆಳದರ್ಜೆಯಲ್ಲೆ ಇರುವುವು ಎಂದು ಹೇಳುವರು".[೮] ಒಂದು ಸಮುದಾಯದ ಚಾರಿತ್ರಿಕ ಹಿನ್ನೆಲೆ ಆ ಸಮುದಾಯಕ್ಕೆ ಸಮಾಜದಲ್ಲಿ ಒಂದು ಉನ್ನತ ಸ್ಥಾನ ಸಿಗಲು ಕಾರಣವಾಗುತ್ತದೆ ಎಂದು ಹೇಳುವುದೇ ಇದರ ತಾತ್ಪರ್ಯ.

ಹಕ್ಕಿಪಿಕ್ಕಿ ಸಮುದಾಯದ ಹಿನ್ನೆಲೆ, ಹುಟ್ಟು, ಬೆಳವಣಿಗೆಗೆ ಸಂಬಂಧಿಸಿದಂತೆ ಹಲವು ರೀತಿಯ ಐತಿಹ್ಯಗಳನ್ನು, ಪುರಾಣಗಳನ್ನು, ಕಥೆಗಳನ್ನು ಸಮುದಾಯವು ಕಟ್ಟಿಕೊಂಡಿರುವುದನ್ನು ಕಾಣುತ್ತೇವೆ. ಇವರ ಚಾರಿತ್ರಿಕತೆಗೆ ಸಂಬಂಧಿಸಿದಂತೆ ಐತಿಹ್ಯಗಳನ್ನು ಮತ್ತು ಕಥೆಗಳನ್ನು ಹಕ್ಕಿಪಿಕ್ಕಿಯರ ಉಪಸಂಸ್ಕೃತಿ ಮಾಲೆ ಹಾಗೂ ಕರ್ನಾಟಕ ಬುಡಕಟ್ಟು ಸಂಪುಟಗಳಲ್ಲಿ ಕಾಣುತ್ತೇವೆ. ಈ ಅಧ್ಯಯನದಲ್ಲಿ ಹಕ್ಕಿಪಿಕ್ಕಿಯರ ಮೂಲ ಹಾಗೂ ಹಿನ್ನೆಲೆಗೆ ಸಂಬಂಧಿಸಿದಂತೆ, ಸೃಷ್ಟಿಗೆ ಹಲವಾರು ಮೌಖಿಕ ವಿವರಗಳು ದೊರಕುತ್ತವೆ.

೩.೪.೧. ಐತಿಹ್ಯ – ೧

ಕಂಚಾ ಎಂಬ ವ್ಯಕ್ತಿಯು ಹಕ್ಕಿಪಿಕ್ಕಿಯರ ಮೂಲ ಪುರುಷ. ಈ ಕಂಚಾನಿಗೆ ಮೂವರು ಮಕ್ಕಳು ಅವರುಗಳೆಂದರೆ ಮಾರ್ವಾಡಿ, ಬಂಜಾರ ಮತ್ತು ಹಕ್ಕಿಪಿಕ್ಕಿ(ವಾಘ್ರಿ) ಕಂಚಾನು ತನ್ನ ಆಸ್ತಿಯನ್ನು ಭಾಗ ಮಾಡಿ ಹಂಚುವಾಗ ಮೂರು ಮಕ್ಕಳಿಗೂ ಭಾಗ ಮಾಡದೇ ಕೇವಲ ಎರಡು ಭಾಗ ಮಾಡಿ ಮಾರ್ವಾಡಿ ಮತ್ತು ಬಂಜಾರನಿಗೆ ಹಂಚುತ್ತಾನೆ. ಹಕ್ಕಿಪಿಕ್ಕಿಯನಿಗೆ ಏನನ್ನೂ ಕೊಡದೇ ಬರಿ ಕೈಯಲ್ಲಿ ಹೊರಗೆ ಹಾಕುತ್ತಾನೆ. ಹೀಗೆ ಹೊರಗೆ ಬಂದ ಹಕ್ಕಿಪಿಕ್ಕಿ ಯು ತನ್ನ ಜೀವನವನ್ನು ನಡೆಸಲು ಕಾಡಿನಲ್ಲಿ ಪ್ರಾಣಿಪಕ್ಷಿಯನ್ನು ಬೇಟೆಯಾಡಿ ಹೊಟ್ಟೆ ತುಂಬಿಸಿಕೊಂಡು ಕಾಡಿನಲ್ಲಿಯೇ ನೆಲೆಸುತ್ತಾನೆ. ಹೀಗೆ ಕಾಡಿನಲ್ಲೇ ನೆಲೆಸಿರುವ ವ್ಯಕ್ತಿಯ ಸಂತತಿಯೆ ಮುಂದೆ ಹಕ್ಕಿಪಿಕ್ಕಿ ಸಮುದಾಯದವರು ಎಂದು ಒಂದು ಐತಿಹ್ಯದಿಂದ ತಿಳಿದು ಬರುವುದು.

೩.೪.೨. ಐತಿಹ್ಯ – ೨

ಭಾರತದಲ್ಲಿ ಅನೇಕ ರಾಜ ಮಹಾರಾಜರುಗಳು ತಮ್ಮ ಆಡಳಿತವನ್ನು ನಡೆಸಿದ್ದಾರೆ. ಅಂತಹವರಲ್ಲಿ ರಜಪೂತ ವಂಶದ ರಾಣಾ ಪ್ರತಾಪ್ ಸಿಂಗ್ ಕೂಡ ಒಬ್ಬನು. ದೆಹಲಿ ಮತ್ತು ರಾಜಸ್ಥಾನದ ಕೆಲವು ಪ್ರದೇಶಗಳು ಇವರ ವಶದಲ್ಲಿದ್ದವು. ಆ ಸಮಯದಲ್ಲಿ ಮೊಘಲ್ ಸಾಮ್ರಾಜ್ಯದ ರಾಜನಾಗಿದ್ದ ಅಕ್ಬರನು

ರಾಣಾ ಪ್ರತಾಪ್ ಸಿಂಗನ ಉದಯಪುರದ ಮೇಲೆ ದಾಳಿ ಮಾಡಿದನು. ಪರಿಸ್ಥಿತಿಯ ಪರಿಣಾಮವನ್ನು ಅರಿತ ರಾಣಾ ಪ್ರತಾಪ್ ಸಿಂಗನು ಹಳದಿಘಟ್ ಪರ್ವತಕ್ಕೆ ತನ್ನ ಯೋಧರ ಜೊತೆ ಬಂದು ನೆಲೆಸುತ್ತಾನೆ. ಅಲ್ಲಿಯೂ ಸಹ ಅಕ್ಬರನ ಸೇನೆ ಆಕ್ರಮಣ ನಡೆಸುತ್ತದೆ. ಹೀಗೆ ಅಕ್ಬರನ ಮತ್ತು ರಾಣಾ ಪ್ರತಾಪ್ ಸಿಂಗನ ನಡುವೆ ಯುದ್ಧಗಳು ನಡೆಯತ್ತಿರುತ್ತವೆ. ಕೊನೆಗೆ ರಾಣಾ ಪ್ರತಾಪ್ ಸಿಂಗನು ಸೋತು ಹೋಗುತ್ತಾನೆ. ಮೊಘಲರ ಹಿಂಸೆಗೆ ಹೆದರಿ ರಾಣಾ ಪ್ರತಾಪ್ ಸಿಂಗನ ಕೆಲವು ಯೋಧರು ಕಾಡನ್ನು ಸೇರಿ ಅಲ್ಲಿಯೇ ಸಂಚಾರಿಗಳಾಗಿ ಬದುಕನ್ನು ಸಾಗಿಸುತ್ತಾರೆ. ಮುಂದೆ ಇವರೇ ಹಕ್ಕಿಪಿಕ್ಕಿ ಸಮುದಾಯದವರು ಎಂದು ಕರೆಯಿಸಿಕೊಂಡರು. ಹೀಗೆ ಅನೇಕ ಐತಿಹಾಸಿಕ ಹಿನ್ನೆಲೆಯಿಂದ ಹಕ್ಕಿಪಿಕ್ಕಿ ಸಮುದಾಯದ ಹಿನ್ನೆಲೆಯನ್ನು ಗುರುತಿಸಲಾಗಿದೆ.

೩.೫. ಜೀವನಾವರ್ತ ಆಚರಣೆಗಳು

ಭಾರತದಂತಹ ಬಹುಸಂಸ್ಕೃತಿಯುಳ್ಳ ದೇಶದಲ್ಲಿ ಹಲವಾರು ಆಚರಣೆಗಳನ್ನು ಕಾಣುತ್ತೇವೆ. ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ನಡೆಯುವ ಎಲ್ಲಾ ಆಚರಣೆಗಳು ಸಮಾಜದಲ್ಲಿ ಮನುಷ್ಯ ನಡೆದುಬಂದ ಹಾದಿಯ ಪ್ರತಿಬಿಂಬದಂತೆ ಕಾಣುತ್ತದೆ. ಹಾಗೆಯೇ ಬುಡಕಟ್ಟು ಸಮುದಾಯಗಳಲ್ಲಿನ ಪ್ರತಿಯೊಂದು ಆಚರಣೆಗಳು ತುಂಬ ವಿಶಿಷ್ಟವಾದದ್ದು ಹಾಗೂ ಈ ಎಲ್ಲಾ ಆಚರಣೆಗಳ ಹಿಂದೆ ಆಸಕ್ತಿಕರವಾದ ಘಟನೆಗಳು ಹಾಗೂ ಕಥೆಗಳು ಇರುವುದನ್ನು ಕಾಣುತ್ತೇವೆ. ಅದರಲ್ಲೂ ಹಕ್ಕಿಪಿಕ್ಕಿಯರಂತಹ ಬುಡಕಟ್ಟು ಸಮುದಾಯಗಳಲ್ಲಿನ ಆಚರಣೆಗಳು ಹಲವು ವೈಶಿಷ್ಟ್ಯಗಳಿಂದ ಕೂಡಿದೆ. ಪ್ರತಿಯೊಂದು ಸಮುದಾಯವು ತನ್ನ ಜೀವನಾವರ್ತನ ಆಚರಣೆಗಳನ್ನು ವಿಶಿಷ್ಟವಾಗಿ ಆಚರಿಸಿಕೊಳ್ಳುತ್ತದೆ. ಇದಕ್ಕಾಗಿ ಅವರು ಕೆಲವೊಂದು ಕಟ್ಟುಪಾಡು ನಿಯಮಗಳನ್ನು ತಮ್ಮಲ್ಲಿಯೇ ಹಾಕಿಕೋಂಡಿರುತ್ತಾರೆ.

೩.೫.೧. ಜನನ ಸಂಬಂಧಿ ಆಚರಣೆಗಳು

ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯಗಳಲ್ಲಿ ಜನನಕ್ಕೆ ಸಂಬಂಧಿಸಿದಂತೆ ಅನೇಕ ಕಟ್ಟುಪಾಡು ನಿಯಮಗಳು ಇದ್ದಾವೆ. ಇಂತಹ ನಿಯಮಗಳ ಅನುಸಾರವೆ ಹೆರಿಗೆಯನ್ನು ಮಾಡಿಸುತ್ತಿದ್ದರು. ಹೆರಿಗೆಯ ಕುರಿತು ಇವರಿಗೆ ತಿಳಿದ ಪಾರಂಪರಿಕ ಜ್ಞಾನ ಅಪಾರವಾದದ್ದು. ಹೀಗೆ ಇವರಲ್ಲಿ ಗರ್ಭಿಣಿಗೆ ಹೆರಿಗೆ ನೋವು ಕಾಣಿಸಿಕೊಂಡ ನಂತರ ಮನೆಯಿಂದ ಹೊರಗಡೆ ಕರೆದುಕೊಂಡು ಬಂದು ಅವರಿಗಾಗಿಯೇ ಒಂದು ಪ್ರತ್ಯೇಕ ಗುಡಾರವನ್ನು ನಿರ್ಮಿಸುತ್ತಾರೆ. ಅಲ್ಲಿಯೇ ಅವರಿಗೆ ಹೆರಿಗೆಯನ್ನು ಮಾಡಿಸುತ್ತಾರೆ. ಸಮುದಾಯದ ಹಿರಿಯ ಮಹಿಳೆಯರು ಹೆರಿಗೆಯನ್ನು ಮಾಡಿಸುತ್ತಾರೆ. ಮಗುವಿಗೆ ಜನ್ಮ ಕೊಟ್ಟ ನಂತರ ತಾಯಿ ಮತ್ತು ಮಗುವಿಗಾಗಿಯೇ ಒಂದು ಗುಡಿಸಲನ್ನು ನಿರ್ಮಿಸುತ್ತಾರೆ. ಈ ಗುಡಿಸಲನ್ನು ಕೆರೆ ಹಾಗೂ ಹಳ್ಳದಲ್ಲಿ ಬೆಳೆದಂತಹ ಆಪು ಕತ್ತರಿಸಿಕೊಂಡು ಬಂದು ಕಟ್ಟಿಗೆ ಬಳಸಿ ಒಂದು ಗುಡಿಸಲು ನಿರ್ಮಿಸುತ್ತಾರೆ. ಹೀಗೆ ನಿರ್ಮಿಸಿದ ಗುಡಿಸಲಿನಲ್ಲಿಯೇ ತಾಯಿ ಮತ್ತು ಮಗುವು ಐದು ದಿನಗಳ ಕಾಲ ಅಲ್ಲಿಯೇ ವಾಸ ಮಾಡಬೇಕು. ಐದು ದಿನ ಮುಗಿಯುವವರೆಗೂ ತಾಯಿ ಮತ್ತು ಮಗುವನ್ನು ಮನೆ ಒಳಗೆ ಬಿಟ್ಟುಕೊಳ್ಳುವುದಿಲ್ಲ. ಇವರ ಸಹಾಯಕ್ಕಾಗಿ ಹಿರಿಯ ಮಹಿಳೆಯರು ಇರುತ್ತಾರೆ. ಮಗು ಜನಿಸಿದ ದಿನವೇ ಮಗುವಿಗೆ ಹಾಗೂ ತಾಯಿಗೆ ಬಿಸಿನೀರಿನಿಂದ ಸ್ನಾನ ಮಾಡಿಸುತ್ತಾರೆ. ಗುಡಿಸಲಿನಲ್ಲಿಯೇ ಮಗುವಿಗಾಗಿ ಸೀರೆಯಿಂದ ತೊಟ್ಟಿಲನ್ನು

ಮಾಡುತ್ತಾರೆ. ಅವರಿಗಾಗಿಯೇ ಪ್ರತ್ಯೇಕವಾದ ಆಹಾರದ ಸಾಮಾನುಗಳನ್ನು ಗುಡಿಸಲಿನಲ್ಲಿ ಇರಿಸುತ್ತಾರೆ. ನಂತರ ತಾಯಿಗೆ ಗಂಜಿ ಹಾಗೂ ಬೆಲ್ಲ ತುಪ್ಪದಿಂದ ಮಾಡಿದ ರೊಟ್ಟಿಯನ್ನು ತಿನಿಸುತ್ತಾರೆ. ನಂತರ ನಾಲ್ಕು ದಿನಗಳವರೆಗೂ ತಾಯಿ ಹಾಗೂ ಮಗುವಿಗೆ ಸ್ನಾನ ಮಾಡಿಸಲಾಗುವುದಿಲ್ಲ. ಐದನೆಯ ದಿನಕ್ಕೆ ತಾಯಿ ಮತ್ತು ಮಗುವಿಗೆ ಸ್ನಾನ ಮಾಡಿಸುತ್ತಾರೆ. ಐದು ದಿನ ಆದ ನಂತರ ಮಣ್ಣಿನ ಮಡಕೆಯಲ್ಲಿ ನವಣೆ ಅಕ್ಕಿ ಅನ್ನವನ್ನು ಮಾಡಿ ದೇವರ ಹೆಸರಲ್ಲಿ ದೀಪ ಹಚ್ಚಿ ಕೋಣೆಯಲ್ಲಿ ಎಡೆ ಇಡುತ್ತಾರೆ. ನಂತರ ತಾಯಿ ಮಗುವನ್ನು ಎತ್ತಿಕೊಂಡು ಕೂರುತ್ತಾಳೆ. ದೇವರ ಹೆಸರಿನಿಂದ ನಮಸ್ಕರಿಸಿ ದೀಪ ಹಚ್ಚುತ್ತಾರೆ. ಆಗ ತಾಯಿ ಮತ್ತು ಮಗುವನ್ನು ತಮ್ಮ ಕುಲದಲ್ಲಿ ಸೇರಿಕೊಂಡ ಹಾಗೆ. ಅಂದು ತಾಯಿ ಮತ್ತು ಮಗುವನ್ನು ಮನೆ ಒಳಗೆ ಕರೆದುಕೊಳ್ಳುತ್ತಾರೆ. ಹೆರಿಗೆ ಆದ ನಂತರ ಭಾಣಂತಿಯು ಆರು ತಿಂಗಳ ಕಾಲ ಅಡುಗೆಯನ್ನು ಮಾಡುವಂತಿಲ್ಲ ಹಾಗೂ ಆಕೆ ಮಾಡಿದಂತಹ ಆಹಾರವನ್ನು ಮನೆಯಲ್ಲಿ ಯಾರೂ ಸೇವಿಸುವಂತಿಲ್ಲ. ಮಗು ಕೂರುವವರೆಗೂ ತಾಯಿಯು ದೇವರ ಪೂಜೆ ಹಾಗೂ ದೇವರ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ. ಆಕೆಗೆ ಪ್ರತ್ಯೇಕವಾದ ಊಟದ ಸಾಮಾನುಗಳನ್ನು ನೀಡಿರುತ್ತಾರೆ. ಆ ಸಾಮಾನುಗಳಲ್ಲಿಯೇ ಆಕೆ ಊಟ ಮಾಡತಕ್ಕದ್ದು. ಕುಡಿಯುವ ನೀರನ್ನು ಸಹಿತ ಆಕೆ ಮನೆಯಲ್ಲಿ ಇರುವವರನ್ನೇ ಕೇಳಿ ಅವರ ಸಹಾಯದಿಂದಲೇ ನೀರನ್ನು ತೆಗೆದುಕೊಂಡು ಕುಡಿಯಬೇಕು. ಮಗು ಕುಳಿತುಕೊಳ್ಳುವುದನ್ನು ಕಲಿತ ನಂತರ ತಾಯಿ ಎಲ್ಲಾ ಕೆಲಸ ಮಾಡಲು ಅರ್ಹಳಾಗುತ್ತಾಳೆ ಎಂಬ ಕಟ್ಟುನಿಟ್ಟಿನ ಕ್ರಮಗಳನ್ನು ಹಕ್ಕಿಪಿಕ್ಕಿಯರಲ್ಲಿ ಕಾಣುತ್ತೇವೆ.

೩.೫.೨. ನಾಮಕರಣ

ನಾಮಕರಣವು ಮಗುವನ್ನು ಹೆಸರಿಸುವ ಸಮಾರಂಭವಾಗಿದೆ. ಮಗುವಿನ ಜನನದ ನಂತರ ಪ್ರಪಂಚದಾದ್ಯಂತ ಎಲ್ಲಾ ಸಮುದಾಯಗಳಲ್ಲಿ ನಾಮಕರಣ ಸಮಾರಂಭವನ್ನು ನಡೆಸುತ್ತಾರೆ. ನಾಮಕರಣ ಇದರಲ್ಲಿ ಮಗುವಿನ ತಂದೆ ತಾಯಿ ತಮಗೆ ಇಷ್ಟವಾದ ಹೆಸರನ್ನು ತಮ್ಮ ಮಗುವಿಗೆ ಇಡುತ್ತಾರೆ. ನಾಮಕರಣದಿಂದಾಗಿ ಮಗುವಿಗೆ ಆರೋಗ್ಯಕರ ಜೀವನಕ್ಕೆ ಎಲ್ಲಾ ಆರ್ಶಿವಾದಗಳು ಸಿಗುತ್ತವೆ ಎಂಬ ನಂಬಿಕೆ ತಂದೆ ತಾಯಿಯವರದ್ದಾಗಿದೆ. ಅದರಂತೆಯೇ ಹಕ್ಕಿಪಿಕ್ಕಿಯರಲ್ಲಿ ನಾಮಕರಣ ಪದ್ಧತಿ ಇರುವುದನ್ನು ಕಾಣುತ್ತೇವೆ. ಹಕ್ಕಿಪಿಕ್ಕಿಯರು ತಮ್ಮ ಹಿರಿಯರು ಸೂಚಿಸಿದಂತಹ ಹೆಸರನ್ನು ಅವರ ಮಕ್ಕಳಿಗೆ ಇಡುತ್ತಾರೆ. ಹೆಸರು ಇಡುವಾಗ ತಮ್ಮ ಪೂರ್ವಜರನ್ನು ಸದಾ ನೆನಪಲ್ಲಿ ಇಡಬೇಕೆಂಬ ಭಾವನೆಯಿಂದ ತಮ್ಮ ಸಮುದಾಯದ, ತಮ್ಮ ವಂಶಸ್ಥರ ಹಿರಿಯರ ಹೆಸರನ್ನೇ ಇಡುತ್ತಾರೆ. ಮಗುವಿಗೆ ಹೆಸರು ಇಡುವ ಸಂದರ್ಭದಲ್ಲಿ ಅವರ ಮನೆಯ ದೇವರಿಗೆ ನಮಸ್ಕರಿಸಿ ಮಗುವಿನ ತಂದೆಯ ಕಡೆಯವರು ಮಗುವಿನ ಕಿವಿಯಲ್ಲಿ ಐದು ಬಾರಿ ಹೆಸರನ್ನು ಹೇಳುತ್ತಾರೆ. ಹೀಗೆ ಹಕ್ಕಿಪಿಕ್ಕಿಯರು ಸರಳವಾಗಿ ನಾಮಕರಣ ಮಾಡುತ್ತಾರೆ.

೩.೫.೩. ಮದುವೆ

"ಕುಟುಂಬ ಮತ್ತು ವಿವಾಹ ಯಾವುದೇ ಸಮಾಜದ ಮೂಲಭೂತ ಅವಶ್ಯ ಮತ್ತು ಅನಿವಾರ್ಯ ಸಂಸ್ಥೆಗಳು. ಅವು ಒಂದೇ ನಾಣ್ಯದ ಎರಡು ಮುಖಗಳಂತೆ ಪರಸ್ಪರ ಪೂರಕ ಸ್ತ್ರೀ ಪುರುಷರು ಆ ಎರಡು ಸಂಸ್ಥೆಗಳ ಆದಾರದ ಘಟಕಗಳು ಕಟುಂಬ ವ್ಯವಸ್ಥೆಗೆ ವಿವಾಹವೇ ಹೆಬ್ಬಾಗಿಲು ವಿವಾಹ ಸಂಸ್ಥೆಗೆ ಕುಟುಂಬ

ಪದ್ಧತಿಯೇ ಅಡಿಗಲ್ಲು."[೧೦] ಯಾವುದೇ ವ್ಯಕ್ತಿಯ ಸಾಮಾಜಿಕ ಶಿಕ್ಷಣ ಮೊದಲು ಕುಟುಂಬದಿಂದಲೇ ಪ್ರಾರಂಭವಾಗುವುದು. ಆದ್ದರಿಂದ ಕುಟುಂಬ ಹಾಗೂ ಮದುವೆ ಸಮಾಜದ ಮುಖ್ಯ ಸಂಸ್ಥೆಗಳಾಗಿವೆ.

"ಸ್ತ್ರೀ ಪುರುಷರಿಗೆ ಏರ್ಪಡುವ ಧಾರ್ಮಿಕ ಮತ್ತು ಸಾಮಾಜಿಕ ಸಂಬಂಧವೇ ವಿವಾಹ. ಈ ಸಂಬಂಧ ನಿರ್ಧಿಷ್ಟ ಧಾರ್ಮಿಕ ಮತ್ತು ಸಾಮಾಜಿಕ ಕಲಾಪಗಳ ವಿಧಿ ಆಚರಣೆಗಳ ಮೂಲಕ ಸಾಧ್ಯವಾಗುತ್ತದೆ. ಸ್ತ್ರೀ ಪುರುಷರ ವೈಯಕ್ತಿಕ ಹಾಗೂ ಸಾಮಾಜಿಕ ಹಿತಕ್ಕಾಗಿ ಜರಗುವ ಸಂಯೋಗವೇ ವಿವಾಹ. ಮಾನವ ಸಮಾಜದಲ್ಲಿ ಮಾತ್ರ ಕಂಡುಬರುವ ಈ ಪ್ರಭಲ ಸಂಸ್ಥೆ ವಿಶಿಷ್ಟವಾದದ್ದು."[೧೧] ಹಕ್ಕಿಪಿಕ್ಕಿಯರಲ್ಲಿ ಗಂಡಿನವರು ಹೆಣ್ಣಿನ ಮನೆಗೆ ಹೋಗಿ ಹೆಣ್ಣನ್ನು ನೋಡುತ್ತಾರೆ. ಹೆಣ್ಣು ಹಿರಿಯರಿಗೆ ಒಪ್ಪಿಗೆಯಾದರೆ ಮದುವೆಗೆ ಒಪ್ಪಿದಂತೆ ಆದರೆ ಇತ್ತೀಚಿನ ದಿನಗಳಲ್ಲಿ ಹುಡುಗ ಹುಡುಗಿಯನ್ನು ಒಪ್ಪಿಗೆ ಕೇಳುವ ಪದ್ಧತಿ ಇದೆ. ಹೀಗೆ ಪರಸ್ಪರ ಇಬ್ಬರೂ ಒಪ್ಪಿದರೆ ಹಿರಿಯರು ಕೂಡ ಒಪ್ಪಿದರೆ ಮದುವೆಗೆ ಒಪ್ಪಿದಂತೆ. ನಂತರ ಸಮುದಾಯದ ಗೌಡನ ಬಳಿ ಏಳು ರೂಪಾಯಿಯನ್ನು ಇಡಬೇಕು. ಆಗ ಗೌಡ ಎಲೆ ಅಡಿಕೆ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾನೆ. ಆಗ ಎಲೆ ಅಡಿಕೆಯನ್ನು ತಂದು ಪರಸ್ಪರ ಹುಡುಗ ಹುಡುಗಿ ಮನೆಯವರು ಹಂಚಿಕೊಳ್ಳುತ್ತಾರೆ.

ಇದಾದ ನಂತರ ಒಂದು ದಿನಾಂಕವನ್ನು ಗೊತ್ತು ಮಾಡಿ ಆ ದಿನಾಂಕದಂದು ಮದುವೆ ಮಾಡಲು ಸಿದ್ಧರಾಗುತ್ತಾರೆ. ಮದುವೆಗೆ ಹಿಂದಿನ ದಿನದ ಸಂಜೆ ಮದುಮಗನ ಮನೆಯ ಮುಂದೆ ಮಂಡವ (ಹಂದರ) ಹಾಕುತ್ತಾರೆ. ನಂತರ ಹುಡುಗನ ಮನೆದೇವರ ಹೆಸರಿನಲ್ಲಿ ಎಲೆ ಕೂರಿಸುತ್ತಾರೆ. ಈ ಸಂದರ್ಭದಲ್ಲಿ ಒಂದು ಹೊಸ ಬಟ್ಟೆಯಲ್ಲಿ ನಾಲ್ಕು ಎಲೆ ಹಾಕಿ ಅದರ ಮೇಲೆ ಅಕ್ಕಿ ಹಾಕಿ ಅದರ ಮೇಲೆ ಅರಿಶಿಣ ಕುಂಕುಮವನ್ನು ಹಾಕುತ್ತಾರೆ. ಈ ರೀತಿಯಾಗಿ ಎಲೆ ಕೂರಿಸುತ್ತಾರೆ.

೩.೫.೪. ದೇವರ ಊಟದ ಪೂಜೆ

ಹುಡುಗನ ಮನೆದೇವರ ಹೆಸರಿನಲ್ಲಿ ಏಳು ತುಪ್ಪದ ಚಪಾತಿ, ಏಳು ಎಣ್ಣೆ ಚಪಾತಿ ಮಾಡಿ ದೇವರ ಮುಂದೆ ಇಟ್ಟು ಮಣ್ಣಿನ ಮಡಕೆಯಲ್ಲಿ ಅನ್ನ ಮಾಡಿ ಒಂದು ಮಣ್ಣಿನ ತಟ್ಟೆಯಲ್ಲಿ ಅನ್ನ ಹಾಕಿ ಅದರ ಮೇಲೆ ಬೆಲ್ಲ ಎಣ್ಣೆ ಹಾಕಿ ದೇವರಿಗೆ ನೈವೇದ್ಯ ಮಾಡಿ ಪೂಜೆ ಸಲ್ಲಿಸುತ್ತಾರೆ. ಹೀಗೆ ಮಾಡಿದರೆ ಮನೆ ದೇವರ ಊಟದ ಪೂಜೆ ಮುಗಿದ ಹಾಗೆ.

೩.೫.೫. ಬಳೆ ತೊಡಿಸುವ ಶಾಸ್ತ್ರ

ಸಮುದಾಯದ ಐದು ಹಿರಿಯ ಮಹಿಳೆಯರನ್ನು ಹಾಗೂ ಐದು ಜನ ಮುತ್ತೈದೆಯರನ್ನು ಕರೆದುಕೊಂಡು ಬಂದು ಹಂದರದಲ್ಲಿ ಕೂರಿಸಿ ಹಸಿರು ಬಳೆಗಳನ್ನು ತೊಡಿಸುತ್ತಾರೆ. ಆಗ ಮದುಮಗಳನ್ನು ಕರೆದುಕೊಂಡು ಬಂದು ಮದುಮಗನ ಕೈಯಿಂದ ಒಂದು ಟವೆಲ್ ಅನ್ನು ಮದುಮಗಳ ತಲೆಯ ಮೇಲೆ ಹೊದಿಸುತ್ತಾರೆ. ನಂತರ ಹಂದರದಲ್ಲಿ ಕೂರಿಸಿ ಮದುಮಗಳಿಗೆ ಬಳೆಗಳನ್ನು ತೊಡಿಸುತ್ತಾರೆ.

೩.೫.೬. ಬಾಸಿಂಗ ಕಟ್ಟುವ ಶಾಸ್ತ್ರ

ಅರಳೀಮರದ ಎಲೆಗಳನ್ನು ತೆಗೆದುಕೊಂಡು ಬಂದು ಮದುಮಗಳು ಹಾಗೂ ಮದುಮಗನಿಗೆ ಏಳು ಎಲೆ ಹಾಕಿ ದಾರದಿಂದ ಹೊಲೆದು ಬಾಸಿಂಗ ಮಾಡಿ ತಲೆಗೆ ಕಟ್ಟುತ್ತಾರೆ.

೩.೫.೭. ದಿಬ್ಬಣ ಹೊರಡುವುದು

ತುಂಬು ಒಣಕೊಬ್ಬರಿಯನ್ನು ಹೋಳುಗಳಾಗಿ ಕತ್ತರಿಸಿ ಅದರ ಒಳಗೆ ಅಕ್ಕಿ, ಅರಿಶಿಣ, ಕುಂಕುಮ ಮತ್ತು ಐದು ರೂಪಾಯಿಗಳನ್ನು ಅದರಲ್ಲಿ ಹಾಕಿ ಉಳಿದ ಇನ್ನೊಂದು ಹೋಳನ್ನು ಅದಕ್ಕೆ ಜೋಡಿಸಿ ದಾರದಿಂದ ಸ್ವಲ್ಪವೂ ಕೊಬ್ಬರಿ ಭಾಗವು ಕಾಣದಂತೆ ಸುತ್ತುತ್ತಾರೆ. ಅದಕ್ಕೆ ಅರಿಶಿಣ ಕುಂಕುಮವನ್ನು ಹಚ್ಚಿದ ಈ ಗಿಟುಕವನ್ನು ಮದುಮಗನ ಕೈಯಲ್ಲಿ ಕೊಟ್ಟು ದೇವರ ಹೆಸರಿನಿಂದ ದೀಪವನ್ನು ಹಚ್ಚಿಕೊಂಡು ಮದುಮಗನನ್ನು ಮದುಮಗಳ ಮನೆಯ ಬಳಿ ಕರೆದುಕೊಂಡು ಹೋಗುತ್ತಾರೆ. ಹಚ್ಚಿಕೊಂಡು ಬಂದ ದೀಪವನ್ನು ಮದುಮಗಳ ಮನೆಯಲ್ಲಿ ಒಂದು ತಟ್ಟೆಯಲ್ಲಿ ಇಡುತ್ತಾರೆ.

೩.೫.೮. ಅರಿಶಿಣ ನೀರು ಹಾಕುವ ಶಾಸ್ತ್ರ

ಮದುವೆಯ ದಿನದಂದು ಬೆಳಗ್ಗೆ ಮದುಮಗ ಹಾಗೂ ಮದುಮಗಳಿಗೆ ಒನಕೆ ಮೇಲೆ ಕೂರಿಸಿ ಸಂಬಂಧಿಕರು ಅರಿಶಿಣ ನೀರನ್ನು ಹಾಕುತ್ತಾರೆ.

೩.೫.೯. ತಾಳಿ ಶಾಸ್ತ್ರ

ಮದುಮಗ ಹಾಗೂ ಮದುಮಗಳನ್ನು ಮಂಡಲ(ಹಂದರ)ದೊಳಗೆ ಕರೆದುಕೊಂಡು ಬಂದು ಮದುಮಗನ ದೋತ್ರಕ್ಕೆ ಮದುಮಗಳ ಸೀರೆ ಸೆರಗಿಗೆ ಒಟ್ಟು ೧ಳ ಗಂಟನ್ನು ಕಟ್ಟುತ್ತಾರೆ. ಅರಿಶಿಣದ ಕೊಂಬನ್ನು ಮದುಮಗ ಹಾಗೂ ಮದುಮಗಳ ಕೈಗೆ ೧ಳ ಗಂಟು ಹಾಕಿ ಕಟ್ಟುತ್ತಾರೆ. ನಂತರ ಮದುಮಗ ಮದುಮಗಳ ಕೊರಳಿಗೆ ತಾಳಿಯನ್ನು ಕಟ್ಟುತ್ತಾನೆ. ತಾಳಿಯು ಕರಿಮಣಿಗಳಿಂದ ಕೂಡಿರುತ್ತದೆ. ಬೆಲ್ಲ ಹಾಕಿ ಮಾಡಿದ ಶ್ಯಾವಿಗೆ ಪಾಯಸವನ್ನು ಪರಸ್ಪರ ಇಬ್ಬರೂ ತಿನ್ನಿಸುತ್ತಾರೆ. ತಿನ್ನಿಸಿದ ನಂತರ ಪರಸ್ಪರ ಒಬ್ಬರು ಮತ್ತೊಬ್ಬರ ಕೈಯನ್ನು ತೊಳೆಯುತ್ತಾರೆ. ದಿಬ್ಬಣದಿಂದ ಹಚ್ಚಿಕೊಂಡು ಬಂದ ದೀಪವನ್ನು ಮದುಮಗಳ ಮನೆಯಿಂದ ತೆಗೆದುಕೊಂಡು ಬಂದು ಮದುಮಗನ ಮನೆದೇವರ ಮುಂದೆ ಇಡುತ್ತಾರೆ. ಗೌಡನಿಗೆ ಐದು ರೂಪಾಯಿ ಕೊಟ್ಟ ನಂತರ ಗೌಡ ದೋತ್ರ ಮತ್ತು ಸೀರೆಯ ಸೆರಗಿಗೆ ಹಾಕಿದಂತಹ ಕಟ್ಟನ್ನು ಗೌಡನೇ ಬಿಚ್ಚುತ್ತಾನೆ. ಇದಾದ ನಂತರ ಮದುಮಗಳನ್ನು ಅವರ ತಂದೆ ತಾಯಿ ಪುನಃ ಅವರ ಮನೆಗೆ ಕರೆದುಕೊಂಡು ಹೋಗುತ್ತಾರೆ. ನಂತರ ಮದುಮಗನ ಹಣೆ ಮತ್ತು ಕಾಲಿಗೆ ಕುಂಕುಮ ಹಚ್ಚಿ ಮದುಮಗಳ ಮನೆಗೆ ಕರೆದುಕೊಂಡು ಹೋಗುತ್ತಾರೆ.

ಅಲ್ಲಿ ಪುನಃ ಅವರಿಗೆ ಶಾವಿಗೆ ಪಾಯಸವನ್ನು ತಿನ್ನಿಸಿ ಇಬ್ಬರೂ ಪರಸ್ಪರ ಒಬ್ಬರ ಹೆಸರನ್ನು ಮತ್ತೊಬ್ಬರು ಕೇಳುತ್ತಾರೆ. ಇದಾದ ಮೇಲೆ ಹೆಣ್ಣಿನ ಮನೆಯಿಂದ ಮದುಮಗ ಮದುಮಗಳನ್ನು ಹೆಗಲ ಮೇಲೆ ಹೊತ್ತುಕೊಂಡು ತನ್ನ ಮನೆಗೆ ಬರುತ್ತಾನೆ. ಮದುಮಗನ ಮನೆಗೆ ಪ್ರವೇಶ ಮಾಡುವ ಮುನ್ನ ಮತ್ತೊಮ್ಮೆ ಒಬ್ಬರ ಹೆಸರನ್ನು ಮತ್ತೊಬ್ಬರು ಪರಸ್ಪರ ಹೇಳಬೇಕು. ಹೇಳಿದ ನಂತರ ಮದುಮಗಳನ್ನು ಬಲಗಾಲು ಇಟ್ಟು ಒಳಗೆ ಬರಮಾಡಿಕೊಳ್ಳುತ್ತಾರೆ. ಇದಾದ ಮೇಲೆ ಗೌಡನನ್ನು ಕರೆಸಿ ಊಟ ಮಾಡಿಸುತ್ತಾರೆ. ಗೌಡ ಊಟ ಮಾಡಿದ ನಂತರ ತಮ್ಮ ಸಂಬಂಧಿಕರಿಗೆಲ್ಲಾ ಊಟ ಮಾಡಿಸುತ್ತಾರೆ. ಈ ಸಂದರ್ಭದಲ್ಲಿ ಗೌಡನನ್ನು ಮೊದಲು ಊಟ ಮಾಡಿಸದೇ ಸಂಬಂಧಿಕರಿಗೆ ಊಟ ಮಾಡಿಸಿದರೆ ಮದುಮಗನ ಮನೆಯವರು ದಂಡ ತೆರಬೇಕಾಗುತ್ತದೆ ಎಂಬ ನಿಯಮ ಇದೆ. ಮದುವೆಯ ನಂತರದ ದಿನ ಮದುಮಗಳಿಗೆ ಸ್ನಾನ

ಮಾಡಿಸಿ ಜಡೆಯನ್ನು ಕಟ್ಟಿ ತಮ್ಮ ಸಮುದಾಯದ ಎಲ್ಲಾ ಬೆಡಗಿನ ಪೆಟ್ಟಿಗೆ ದೇವರಿಗೆ ನಮಸ್ಕರಿಸುತ್ತಾರೆ. ಅವರು ಮನೆಗೆ ಬಂದ ನಂತರ ಜಡೆ ಬಿಚ್ಚಿಸಿ ಪುನಃ ಸ್ನಾನ ಮಾಡಿಸುತ್ತಾರೆ. ಮದುವೆ ದಿನ ಕಟ್ಟಿದಂತಹ ಅರಿಶಿಣ ಕೊಂಬನ್ನು ಹೆಂಡತಿ ಕೈಯಲ್ಲಿ ಇರುವುದನ್ನು ಗಂಡ ಬಿಚ್ಚಬೇಕು ಹಾಗೆ ಗಂಡನ ಕೈಯಲ್ಲಿರುವ ಅರಿಶಿಣ ಕೊಂಬನ್ನು ಹೆಂಡತಿ ಬಿಚ್ಚಿ ಮನೆದೇವರಿಗೆ ನಮಸ್ಕರಿಸುತ್ತಾರೆ. ಇಲ್ಲಿಗೆ ಹಕ್ಕಿಪಿಕ್ಕಿಯರ ಮದುವೆ ಕಾರ್ಯ ಮುಗಿದ ಹಾಗೆ. (ಸಂಪನ್ಮೂಲ ವ್ಯಕ್ತಿ ಹೆಚ್ ಪಿ ಪೂಜಾರಿ ಶಂಕ್ರಪ್ಪ)

೩.೫.೧೦. ತೆರ ಕೊಡುವ ಪದ್ಧತಿ

ಹಕ್ಕಿಪಿಕ್ಕಿಯರಲ್ಲಿ ವರ–ವಧುದಕ್ಷಿಣೆ ಕೊಡುವ ಪದ್ಧತಿಯಿಲ್ಲ ಒಂದು ಮನೆಯ ಹೆಣ್ಣನ್ನು ಇನ್ನೊಂದು ಮನೆಗೆ ಮದುವೆ ಮಾಡಿ ಕೊಟ್ಟರೆ ಆ ಮನೆಯಿಂದ ಒಂದು ಹೆಣ್ಣನ್ನು ಮೊದಲು ಹೆಣ್ಣನ್ನು ಮದುವೆ ಮಾಡಿ ಕೊಟ್ಟಂತಹ ಮನೆಗೆ ಹೆಣ್ಣನ್ನು ಮದುವೆ ಕೊಡಬೇಕೆಂಬ ಪದ್ಧತಿ ಇದೆ. ಒಂದು ವೇಳೆ ಆ ಮನೆಯಲ್ಲಿ ಹೆಣ್ಣು ಇಲ್ಲದಿದ್ದರೆ, ತಾವು ಮದುವೆ ಮಾಡಿಕೊಟ್ಟಂತಹ ಹೆಣ್ಣಿಗೆ, ಹೆಣ್ಣು ಮಗು ಜನಿಸಿದರೆ ಆ ಹೆಣ್ಣನ್ನು ತಮ್ಮ ಮನೆಗೆ ಮದುವೆ ಮಾಡಿಕೊಡಬೇಕೆಂಬ ಪದ್ಧತಿ ಇದೆ. ಒಂದು ವೇಳೆ ಅವರಿಗೆ ಹೆಣ್ಣು ಮಗು ಜನಿಸದಿದ್ದರೆ, ತೆರ ಕೊಡುವ ಪದ್ಧತಿ ಇದೆ. ಹೆಣ್ಣನ್ನು ಮದುವೆ ಮಾಡಿಕೊಟ್ಟಂತಹ ವಾರಸುದಾರರ ಮನೆಗೆ ತೆರವನ್ನು ಕೊಡುತ್ತಾರೆ. ತೆರ ಈ ಮೊದಲು ೧೨ ರೂಪಾಯಿಗಳಿದ್ದು ತದನಂತರ ಕಾಲಕಾಲಕ್ಕೆ ಬದಲಾಗುತ್ತ ಬಂದಿದೆ.

೩.೫.೧೧. ಸೀಮಂತ ಕಾರ್ಯ

ಗರ್ಭಿಣಿ ಮಹಿಳೆಗೆ ಏಳು ತಿಂಗಳು ತುಂಬಿದ ನಂತರ ತಂದೆ ತಾಯಿ ತಮ್ಮ ಮನೆಗೆ ಗರ್ಭಿಣಿಯನ್ನು ಕರೆದುಕೊಂಡು ಬಂದು ಅವಳ ಕೈಗೆ ಹಸಿರು ಬಳೆಗಳನ್ನು ತೊಡಿಸುತ್ತಾರೆ. ಕೊಬ್ಬರಿ ಬಟ್ಲ, ಬೆಲ್ಲ, ಅಕ್ಕಿ ಹಾಕಿ ಹುಡಿ ತುಂಬಿ ಪುನಃ ಗಂಡನ ಮನೆಗೆ ಗರ್ಭಿಣಿಯನ್ನು ಕಳಿಸುತ್ತಾರೆ. ಈ ಸಮಯದಲ್ಲಿ ಗರ್ಭಿಣಿಯ ಮನೆಯ ಸಂಬಂಧಿಕರು ಇರುತ್ತಾರೆ, ಹಾಗೂ ಗರ್ಭಿಣಿಗೆ ಹೊಸ ಬಟ್ಟೆಯನ್ನು ಉಡುಗೋರೆಯಾಗಿ ನೀಡುತ್ತಾರೆ. ಈ ರೀತಿ ಸರಳವಾಗಿ ಹಕ್ಕಿಪಿಕ್ಕಿಯರಲ್ಲಿ ಸೀಮಂತ ಕಾರ್ಯವು ನಡೆಯುತ್ತದೆ.

೩.೫.೧೨. ಸಾವು

ಹಿಂದಿನ ಕಾಲದಲ್ಲಿ ಹಕ್ಕಿಪಿಕ್ಕಿಯರಲ್ಲಿ ಸಾವು ಸಂಭವಿಸಿದರೆ ಸತ್ತ ವ್ಯಕ್ತಿಯ ಸಂಬಂಧಿಕರನ್ನು ಬಿಟ್ಟು ಉಳಿದ ಎಲ್ಲರು ತಮ್ಮ ಗುಡಾರವನ್ನು ಕಿತ್ತುಕೊಂಡು ಬೇರೆ ಕಡೆ ವಲಸೆ ಹೋಗುತ್ತಿದ್ದರು. ಏಕೆಂದರೆ? ಸತ್ತ ವ್ಯಕ್ತಿಯು ಭೂತನಾಗುತ್ತಾನೆಂದು ಹಕ್ಕಿಪಿಕ್ಕಿಯರು ನಂಬಿದ್ದರು. ಕೆಲ ಕಾಲದವರೆಗೆ ಪುನಃ ಆ ಸ್ಥಳಕ್ಕೆ ಬರುತ್ತಿರಲಿಲ್ಲ. ಶವವನ್ನು ಮೊದಲು ಇಬ್ಬರೇ ಹೊರುತ್ತಿದ್ದರಂತೆ ಕಾರಣವೇನೆಂದರೆ? ಸಾವಿಗೆ ಹೆದರಿ ಶವಸಂಸ್ಕಾರಕ್ಕೆ ಯಾರು ಬರುತ್ತಿರಲಿಲ್ಲ. ಇತ್ತೀಚೆಗೆ ಹಕ್ಕಿಪಿಕ್ಕಿಯರಲ್ಲಿ ಯಾರಾದರು ಸತ್ತರೆ ಸತ್ತ ವ್ಯಕ್ತಿಯನ್ನು ಅವರ ಮನೆಯ ಅಂಗಳದಲ್ಲಿ ಪೂರ್ವಕ್ಕೆ ಕಾಲುಮಾಡಿ ಮಲಗಿಸುತ್ತಾರೆ. ಕಟ್ಟಿಗೆಯಿಂದ ಚಟ್ಟವನ್ನು ಕಟ್ಟಿ ಸತ್ತ ವ್ಯಕ್ತಿಯ ಸಂಬಂಧಿಕರೆಲ್ಲ ಬಂದ ನಂತರ ಶವವನ್ನು ಚಟ್ಟದ ಮೇಲೆ ಇಟ್ಟು ಎತ್ತಿಕೊಂಡು ಹೋಗುತ್ತಾರೆ. ಹೋಗುವ ಸಂದರ್ಭದಲ್ಲಿ ಮೊದಲು ಪೂರ್ವ ದಿಕ್ಕಿಗೆ ಹೋಗಬೇಕು ಎಂಬ ನಿಯಮವಿದೆ. ನಂತರ

ಯಾವ ದಿಕ್ಕಿಗಾದರೂ ಹೋಗಬಹುದು. ಸತ್ತ ವ್ಯಕ್ತಿಯ ಮನೆಯವರೆ ಮೊದಲು ಚಟ್ಟಕ್ಕೆ ಹೆಗಲು ಕೊಡುತ್ತಾರೆ. ತದನಂತರ ಸಂಬಂಧಿಕರು ಅಥವಾ ಯಾರೆ ಆದರು ಹೆಗಲು ಕೊಡಬಹುದು.

ಶವವನ್ನು ಸ್ಮಶಾನಕ್ಕೆ ತಂದ ನಂತರ ಮನೆಯ ಹಿರಿಯ ಮಗ ಒಂದು ಗಡಿಗೆಯಲ್ಲಿ ನೀರು ತಂದು ಶವವನ್ನು ಸ್ವಚ್ಚಗೊಳಿಸಿದ ನಂತರವೇ ಸುಡುವ ಇಲ್ಲ ಹುಳುವ ಕಾರ್ಯ ಮಾಡುತ್ತಾರೆ. ಸತ್ತ ವ್ಯಕ್ತಿಯ ಹಿರಿಯ ಮಗ ಅಥವಾ ಕಿರಿಯ ಮಗ ಈ ಕಾರ್ಯವನ್ನು ಮಾಡುತ್ತಾರೆ. ಶವಸಂಸ್ಕಾರ ಕ್ರಿಯೆ ಮುಗಿದ ನಂತರ ಸತ್ತ ವ್ಯಕ್ತಿಯ ಬೆಡಗಿನ ಪೂಜಾರಿಯು ಶವದ ತಲೆಯ ಭಾಗದ ಕಡೆ ನಿಂತು ಆತ್ಮವನ್ನು ಬರಮಾಡಿಕೊಳ್ಳುತ್ತಾನೆ. ಆ ಸಮಯದಲ್ಲಿ ಸತ್ತವರು ಪೂಜಾರಿಯ ಮೈಮೇಲೆ ಬಂದು ತಾನು ಸತ್ತ ಬಗ್ಗೆ ಮತ್ತು ತನ್ನ ಮನೆಯ ಬಗ್ಗೆ ಕೆಲ ಮಾತುಗಳನ್ನಾಡಿ ಹೋಗುತ್ತಾನೆ ಎಂಬುದು ಹಕ್ಕಿಪಿಕ್ಕಿಯರ ನಂಬಿಕೆ.

ಶವಸಂಸ್ಕಾರ ಮುಗಿದ ನಂತರ ತಮ್ಮ ತಮ್ಮ ಮನೆಯ ಕಡೆ ಹೋಗುವರು ದಾರಿ ಮಧ್ಯದಲ್ಲಿ ಮುಳ್ಳಿನ ಗಿಡವನ್ನು ಸುತ್ತಿ ಹಾಕಿಕೊಂಡು ಹೋಗುತ್ತಾರೆ. ಏಕೆಂದರೆ ಸತ್ತವನು ದೆವ್ವವಾಗಿ ಬಂದರೆ ನಮ್ಮ ಮನೆಗೆ ಬರಬೇಕಾದರೆ ಸುತ್ತು ಹಾಕಿದ ಮುಳ್ಳಿನ ಗಿಡದ ಎಲ್ಲಾ ಎಲೆಗಳ ಮುಳ್ಳುಗಳನ್ನು ಎಣಿಸಿ ಬರಬೇಕು ಅಷ್ಟರೊಳಗೆ ಬೆಳಗಾಗುತ್ತದೆ. ದೆವ್ವವು ಮರಳಿ ಸ್ಮಶಾನಕ್ಕೆ ಹೋಗುತ್ತದೆ. ನಮ್ಮ ಮನೆಗೆ ಬರುವುದಕ್ಕೆ ಆಗುವುದಿಲ್ಲ ಎನ್ನುವುದು ಇವರ ನಂಬಿಕೆ. ಮನೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಎಲ್ಲಾದರು ನೀರು ಇರುವ ಕಡೆ ಸ್ನಾನ ಮಾಡಿಕೊಂಡು ಪುನಃ ಸತ್ತ ವ್ಯಕ್ತಿಯ ಮನೆಗೆ ಹೋಗಿ ಅವರು ಕೊಡುವಂತಹ ನೀರು ಅಥವಾ ಸರಾಯಿ ಪಡೆದು ಕುಡಿದು ನಂತರ ತಮ್ಮ ಮನೆಗೆ ಹೋಗುತ್ತಾರೆ. ಮರು ದಿನ ಮುಂಜಾನೆ ಮನೆಯವರು ಶವ ಸಂಸ್ಕಾರ ಮಾಡಿದ ಸ್ಥಳಕ್ಕೆ ಹೋಗಿ ಸತ್ತವನು ಇಷ್ಟ ಪಡುತ್ತಿದ್ದ ಆಹಾರಗಳನ್ನು ಬೀಡಿ, ಸರಾಯಿ ಮತ್ತು ಸಿಗರೇಟು ತೆಗೆದುಕೊಂಡುಬಂದು ಶವವನ್ನು ಹೂಳಿದ ತಲೆಯ ಭಾಗದಲ್ಲಿ ಇಟ್ಟು ಕೂರುತ್ತಾರೆ. ತದನಂತರ ಪ್ರಾಣಿ ಅಥವಾ ಪಕ್ಷಿ ಬಂದು ಆಹಾರಗಳನ್ನು ತಿಂದರೆ ಸತ್ತವರೆ ಬಂದು ತಿಂದ ಹಾಗೆ ಎಂಬುದು ಇವರ ನಂಬಿಕೆ.

೩.೫.೧೩. ದಿವಸ ಕಾರ್ಯ (ತಿಥಿ)

ವ್ಯಕ್ತಿ ಸತ್ತ ೧೨ನೆಯ ದಿನಕ್ಕೆ ದೊಡ್ಡ ದಿವಸ ಕಾರ್ಯ ಮಾಡುತ್ತಾರೆ. ಅಂದು ೬ ಹೊಸ ಗಡಿಗೆ, ಒಂದು ಮಗಿ, ಒಂದು ದೊಡ್ಡ ಗಡಿಗಿ, ಎರಡು ಪರಾಣಿ, ಇಪ್ಪತ್ತು ಸಣ್ಣ ಮಗಿಯನ್ನು ತಂದು ಊರ ಹೊರಗಿನ ಬಯಲು ಸ್ಥಳಕ್ಕೆ ಹೋಗಿ ದೇವರ ಪೆಟ್ಟಿಗೆಯನ್ನು ಇಟ್ಟು ಸತ್ತ ವ್ಯಕ್ತಿಯು ಇಷ್ಟ ಪಡುತ್ತಿದ್ದ ಆಹಾರಗಳನ್ನು ತಂದು ಒಂದು ಪಾವು ನವಣ್ಣಕ್ಕಿ, ೨೫೦ಗ್ರಾಂ ಗೋಧಿ ಹಿಟ್ಟು ತಂದು, ಸಂಜೆ ಸತ್ತವನ ಕಡೆಗಿನ ಹಿರಿಯರು ನೀರು ತುಂಬಿಕೊಂಡು ಬರುವಾಗ ಗಡಿಗೆಗೆ ತುತು ಮಾಡುತ್ತಾರೆ. ಗಡಿಗೆಯಲ್ಲಿರುವ ನೀರು ಕಾಲಿಯಾಗುವಷ್ಟರಲ್ಲಿ ಪೂಜೆಗೆ ಸಿದ್ಧಗೊಂಡಿರುವ ಸ್ಥಳಕ್ಕೆ ಬರಬೇಕು, ನೀರು ತರಲು ಹೋಗಿರುವ ವ್ಯಕ್ತಿ ಬರುವಷ್ಟರಲ್ಲಿ ಪೂಜೆ ಸ್ಥಳಕ್ಕೆ ತಂದಿರುವ ಮಗಿಗಳಲ್ಲಿ ೧೨ ಮಗಿಯನ್ನು ೨ ಸಾಲುಗಳಲ್ಲಿ ಆರು ಆರು ಎದುರು-ಬದುರು ಇರಿಸಿ ಉಳಿದ ಎಂಟು ಮೊಗ್ಗಿಯನ್ನು ಸ್ವಲ್ಪ ದೂರ ಸಾಲು ಸಾಲಾಗಿ ಜೋಡಿಸಿರುತ್ತಾರೆ. ನೀರು ತಂದ ವ್ಯಕ್ತಿಯು ಗಡಿಗೆಯಲ್ಲಿರುವ ನೀರನ್ನು ಮಗಿಗಳಿಗೆ ಹಾಕಬೇಕು. ತದನಂತರ ಎದುರು ಬದುರು ಇರಿಸಿದ ಮಗಿಗಳಿಗೆ ಏಳು ಸುತ್ತು ಸುರಿಗಿ ದಾರವನ್ನು ಸುತ್ತುತ್ತಾರೆ. ದೊಡ್ಡ ಗಡಿಗೆ ಗಳಿಗೆ ಸಹ

ನೀರು ತುಂಬಿಸುತ್ತಾರೆ. ಉಳಿದ ಆರು ಗಡಿಗೆಗಳ ಬಾಯಿಗೆ ರೊಟ್ಟಿಯನ್ನು ಒಂದೊಂದಾಗಿ ಗಡಿಗೆಗಳಿಗೆ ಹಾಕುತ್ತಾರೆ. ಇದಾದ ನಂತರ ಆ ಗಡಿಗೆಗಳನ್ನು ಮೂರು ಮೇಲೆ ಮೂರು ಕೆಳಗೆ ಒಂದರ ಮೇಲೊಂದನ್ನು ಇರಿಸುತ್ತಾರೆ. ದೊಡ್ಡ ಪರಾಣಿಯಲ್ಲಿ ಎಡೆಗಾಗಿ ಮಾಡಿದ ಅನ್ನ ಅದರೊಳಗೆ ಬೆಲ್ಲವನ್ನು ಹಾಕಿ ಪರಾಣಿಯಲ್ಲಿ ಹಾಕಿ ಅದರ ಮೇಲೆ ಆಹಾರಗಳನ್ನು, ಹಣ್ಣುಗಳನ್ನು ಹಾಕುತ್ತಾರೆ. ಮೂರು ಮೇಲೆ ಮೂರು ಕೆಳಗೆ ಇರುವ ಗಡಿಗೆಗಳು ಏಳು ಸಾರಿ ದಾರದಿಂದ ಸುರಿಗಿ ಸುತ್ತುತ್ತಾರೆ. ಇದಾದ ಮೇಲೆ ನೀರು ತಂದಿರುವ ಮಡಿಕೆಗೆ ಒಂದು ರೊಟ್ಟಿಯನ್ನು ಹಾಕಿ ಸ್ವಲ್ಪ ದೂರದಲ್ಲಿ ಇಡುತ್ತಾರೆ. ಎಲ್ಲಾ ಸಿದ್ಧತೆಗಳು ಮುಗಿದ ತಕ್ಷಣ ಇವುಗಳ ಸ್ವಲ್ಪ ದೂರದಲ್ಲಿ ದೇವರ ಪಟ್ಟಿಗೆಯನ್ನು ಇಟ್ಟು ರಾತ್ರಿ ೧೨ಕ್ಕೆ ಪೂಜೆ ಮಾಡುತ್ತಾರೆ. ತದನಂತರ ಪೂಜೆಗೆ ಇಟ್ಟ ಎಡೆಯನ್ನು ಯಾವುದಾದರು ಪ್ರಾಣಿ ಬಂದು ತಿಂದರೆ ಸತ್ತ ವ್ಯಕ್ತಿಯೆ ಬಂದು ತಿಂದಂತೆಂಬ ನಂಬಿಕೆ ಇವರದ್ದು. ಮರು ದಿನ ಮಧ್ಯಾಹ್ನ ೧೨ ಗಂಟೆಗೆ ಎಲ್ಲಾ ಗಡಿಗೆಯನ್ನು ಒಡೆಯಲಾಗುತ್ತದೆ. ಒಡೆದ ಎಲ್ಲಾ ಗಡಿಗೆ ಚೂರುಗಳನ್ನು ಚೀಲದಲ್ಲಿ ತುಂಬಿಕೊಂಡು ಹರಿಯುವ ನೀರಿನಲ್ಲಿ ಬಿಡುತ್ತಾರೆ. ಇದಾದ ಮೇಲೆ ದೇವರ ಪೆಟ್ಟಿಗೆಯನ್ನು ನೀರು ಇರುವ ಸ್ಥಳಕ್ಕೆ ಹೋಗಿ ಸ್ವಚ್ಚಗೊಳಿಸಿ ಪೂಜೆ ಮಾಡಿ ಪುನಃ ಮನೆಗೆ ತೆಗೆದುಕೊಂಡು ಬರುತ್ತಾರೆ. ಈ ಎಲ್ಲಾ ವಿಧಿ ವಿಧಾನಗಳು ಮುಗಿಯುವವರೆಗೆ ಶವವನ್ನು ಎತ್ತಿದ ನಾಲ್ಕು ಜನರು ಊಟ ಮಾಡುವಂತಿಲ್ಲ, ಇದು ಇವರ ಕಟ್ಟುಪಾಡಾಗಿದೆ. ಇಲ್ಲಿಗೆ ಶವಸಂಸ್ಕಾರದ ಕಾರ್ಯ ಮುಗಿದ ಹಾಗೆ.

೩.೬. ಉಡುಗೆ ತೊಡುಗೆಗಳು

ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದವರ ಉಡುಪುಗಳು ತುಂಬ ವಿಶಿಷ್ಟವಾದುದ್ದಾಗಿದೆ. ಇವರ ಉಡುಪುಗಳು ಹಾಕುವುದಕ್ಕು ಇವರುಗಳು ಕೆಲವೊಂದು ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸುತ್ತಿದ್ದರು.

೩.೬.೧. ಹೆಂಗಸರ ಉಡುಗೆ

ಹಕ್ಕಿಪಿಕ್ಕಿ ಮಹಿಳೆಯರು ಹಿಂದಿನ ಕಾಲದಲ್ಲಿ ಒಂದು ಸೀರೆಯನ್ನು ನಾಲ್ಕು ಭಾಗ ಮಾಡಿಕೊಂಡು ಸ್ವತಃ ತಾವೆ ಬಟ್ಟೆಯನ್ನು ಹೊಲೆದುಕೊಳ್ಳುತ್ತಿದ್ದರು ಹೆಂಗಸರು ಗಾಘ್ರಿ (ಲಂಗ), ಕೈಪೂರ್ತಿ ಕುಬುಸ (ರವಿಕೆ) ಮತ್ತು ಸೆರಗು ಮಾಡಿಕೊಳ್ಳುತ್ತಿದ್ದರು. ಈ ರೀತಿಯಾಗಿ ಹಕ್ಕಿಪಿಕ್ಕಿ ಹೆಂಗಸರು ತಮ್ಮ ಉಡುಗೆಯನ್ನು ಮಾಡಿಕೊಳ್ಳುತ್ತಿದ್ದರು.

೩.೬.೨. ಗಂಡಸರ ಉಡುಗೆ

ಗಂಡಸರು ಅಂಗಿಯನ್ನು ತೊಟ್ಟುಕೊಳ್ಳುತ್ತಿದ್ದರು ಅಂಗಿಯ ತೊಳು ಬುಜದವರೆಗೆ ಮಾತ್ರ ಇರುತ್ತಿತ್ತು. ಚಡ್ಡಿಯನ್ನು ಧರಿಸುತ್ತಿದ್ದರು ಈ ರೀತಿಯಾಗಿ ಗಂಡಸರು ಉಡುಪನ್ನು ಧರಿಸುತ್ತಿದ್ದರು. ಆದರೆ ಇಂದಿನ ಆಧುನಿಕ ಕಾಲದಲ್ಲಿ ಆಧುನಿಕತೆಗೆ ತಕ್ಕಂತೆ ಸಿಗುವ ಉಡುಪುಗಳನ್ನು ಧರಿಸುತ್ತಿರುವುದನ್ನು ಕಾಣುತ್ತೇವೆ.

೩.೬.೩. ಕೇಶ ವಿನ್ಯಾಶ

ಹಿಂದಿನ ಕಾಲದಲ್ಲಿ ಹಕ್ಕಿಪಿಕ್ಕಿಯರು ಕೂದಲನ್ನು ಕತ್ತರಿಸುತ್ತಿರಲಿಲ್ಲ ಕೂದಲನ್ನು ಹಾಗೆ ಬೆಳೆಯಲು ಬಿಡುತ್ತಿದ್ದರು. ಬೆಳೆದ ಕೂದಲಿಗೆ ಜುಟ್ಟನ್ನು(ತುರುಬು) ಕಟ್ಟುತ್ತಿದ್ದರು, ಆದರೆ ಇಂದಿನ ಕಾಲದಲ್ಲಿ ಈ ಆಧುನಿಕತೆಗೆ ತಕ್ಕಂತೆ ಹೊಸ ಹೊಸ ಬಗೆಯ ಕೇಶವಿನ್ಯಾಸಗಳನ್ನು ಮಾಡಿಸುತ್ತಾರೆ.

೩.೭. ಆಭರಣಗಳು

ಬುಡಕಟ್ಟು ಸಮುದಾಯದವರು ಆಭರಣಗಳು ಪ್ರಕೃತಿಕವಾಗಿ ಸಿಗುವಂತಹ ವಸ್ತುಗಳನ್ನೇ ತಮ್ಮ ಆಭರಣವನ್ನಾಗಿ ಮಾಡಿಕೊಳ್ಳುತ್ತಿದ್ದರು. ಮತ್ತು ತಾವು ಹಾಕಿಕೊಳ್ಳುತ್ತಿದ್ದ ಆಭರಣಗಳು ಇವರ ಸಾಂಸ್ಕೃತಿಕ ಸಿರಿವಂತಿಕೆಯನ್ನು ತೋರಿಸುವಂತಾಗಿತ್ತು. ಹಿಂದಿನ ಕಾಲದಲ್ಲಿ ಹಕ್ಕಿಪಿಕ್ಕಿಯರು ಮಣಿಗಳನ್ನು ಹಾಕುತ್ತಿದ್ದರು. ಮದುವೆಯಾಗದ ಹೆಣ್ಣುಮಕ್ಕಳು ಬಿಳಿಮಣಿಗಳನ್ನು ಹಾಗೂ ಮದುವೆಯಾದ ಹೆಣ್ಣುಮಕ್ಕಳು ಕರಿಮಣಿಗಳನ್ನು ಮಾತ್ರ ಹಾಕುತ್ತಿದ್ದರು. ಮಣಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಭರಣಗಳನ್ನು ಹಾಕುವ ಪದ್ಧತಿ ಇವರಲಿಲ್ಲ. ಆದರೆ ಇಂದಿನ ಕಾಲದಲ್ಲಿ ಆಧುನಿಕತೆಗೆ ತಕ್ಕಂತೆ ಸಿಗುವ ಆಭರಣಗಳನ್ನು ಹಕ್ಕಿಪಿಕ್ಕಿಯವರು ಹಾಕುವುದನ್ನು ಕಾಣುತ್ತೇವೆ.

೩.೮. ಪೂಜಾ ವಿಧಾನ

ಹಕ್ಕಿಪಿಕ್ಕಿಯರ ಪೂಜಾ ವಿಧಾನವು ಹಲವು ವೈಶಿಷ್ಟಗಳಿಂದ ಕೂಡಿದ್ದು ತಮ್ಮ ದೇವರಿಗೆ ಪೂಜೆ ಸಲ್ಲಿಸಲು ಇವರು ಕೆಲವೊಂದು ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸುತ್ತಾರೆ. ತಮ್ಮ ದೇವರುಗಳ ಮೇಲೆ ಅಪಾರ ನಂಬಿಕೆಯನ್ನು ಹೊಂದಿರುವ ಇವರು ಪೂಜೆ ಸಲ್ಲಿಸುವ ಸಂದರ್ಭದಲ್ಲಿ ಯಾವುದೇ ರೀತಿಯ ತೊಡಕುಗಳು ಹಾಗದಂತೆ ಎಚ್ಚರವಹಿಸುತ್ತಾರೆ. ಹೀಗೆ ಹಕ್ಕಿಪಿಕ್ಕಿಯವರು ವಾರದಲ್ಲಿ ಮಂಗಳವಾರ ಮತ್ತು ಶುಕ್ರವಾರ ಹಾಗೂ ಅಮವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ತಮ್ಮ ಪೆಟ್ಟಿಗೆಯಲ್ಲಿರುವ ದೇವರುಗಳಿಗೆ ಪೂಜೆಮಾಡುತ್ತಾರೆ. ಸ್ನಾನಮಾಡಿಕೊಂಡು ಹೂವನ್ನು ತಮ್ಮ ಪೆಟ್ಟಿಗೆಯ ದೇವರ ಮೇಲೆ ಹಾಕಿ, ಊದಿನಕಡ್ಡಿ ಹಚ್ಚಿ, ಲೋಭಾನ ಹಾಕಿ ದೇವರಿಗೆ ನಮಸ್ಕರಿಸುತ್ತಾರೆ. ಪೆಟ್ಟಿಗೆ ಒಳಗೆ ಅವರ ದೇವರುಗಳಾದ ಶಿವನ ವಿಗ್ರಹ, ಗಂಗಮ್ಮ, ತುಳಜಾ ಭವನಿ ಹಾಗೂ ಇತರ ದೇವರುಗಳು ಇರುತ್ತಾರೆ. ಹೀಗೆ ಹಕ್ಕಿಪಿಕ್ಕಿಯವರು ತಮ್ಮ ಪೆಟ್ಟಿಗೆ ದೇವರನ್ನು ಪೂಜಿಸುತ್ತಾರೆ.

೩.೯. ವಾರ್ಷಿಕಾವರ್ತ ಆಚರಣೆಗಳು

ತುಳಜಾಭವನಿ (ವಿಹೋ ದೇವಿ) ಹಬ್ಬ: ವಿವೋ ದೇವಿ ಹಬ್ಬ ಮಾಡಬೇಕೆಂದರೆ ಇಕೋತಿಯಾ (ಪವಾರ) ಕುಟುಂಬದ ಎಲ್ಲಾ ಸದಸ್ಯರು ಸೇರಿ ದೇವಿ ಹಬ್ಬವನ್ನು ಮಾಡುವಬಗ್ಗೆ ಕುಟುಂಬದವರಲ್ಲಿ ಕೇಳುತ್ತಾರೆ. ಆಗ ಮಾಡಬೇಕು ಎಂಬ ಅಭಿಪ್ರಾಯ ಕುಟುಂಬದವರಿಂದ ಬಂದರೆ ದೇವಿ ಹಬ್ಬ ಮಾಡುವಬಗ್ಗೆ ಪರೀಕ್ಷೆ ನೋಡುತ್ತಾರೆ. ಜೋಳ ಅಥವಾ ಗುಲಗುಂಜಿ ತೆಗೆದುಕೊಂಡು ಎಲ್ಲಾ ಕುಟುಂಬಸ್ಥರನ್ನು ದೇವಿಯ ಪೆಟಾರಿಯ ಮುಂದೆ ಕೂರಿಸುತ್ತಾರೆ. ದೇವಿ ಹಬ್ಬ ಮಾಡುವ ಬಗ್ಗೆ ನೇರವಾಗಿ ದೇವಿಯನ್ನು ಕೇಳುತ್ತಾರೆ. ಕೇಳುವ ಸಮಯದಲ್ಲಿ ಗುಲಗುಂಜಿಯನ್ನು ಹಾಕುತ್ತಾರೆ. ಗುಲಗುಂಜಿ ಹಾಕುವ ಮುನ್ನ ಗುಲಗುಂಜಿ ಹಾಕುವವರು ಯಾವ ಸಂಖ್ಯೆಯನ್ನು ಅಂದುಕೊಳ್ಳುತ್ತಾರೋ ಅದೇ ಸಂಖ್ಯೆಗಳು ಗುಲಗುಂಜಿಯಲ್ಲಿ ಬಂದರೆ ದೇವಿ ಹಬ್ಬವನ್ನು ಮಾಡಲು ದೇವಿಯು ಒಪ್ಪಿಗೆ ಕೊಟ್ಟಿದ್ದಾಳೆ ಎಂದರ್ಥ. ಗುಲಗುಂಜಿ ಹಾಕುವವರು ಅಂದುಕೊಂಡಿರುವಂತಹ ಸಂಖ್ಯೆಗಳು ಬಂದಿಲ್ಲ ಎಂದರೆ, ದೇವಿಯು ಒಪ್ಪಿಗೆ ನೀಡಿಲ್ಲ ಎಂದರ್ಥ. ದೇವಿಯು ಒಪ್ಪಿಗೆ ನೀಡಿದರೆ ಮಾತ್ರ ಹಬ್ಬವನ್ನು ಆಚರಿಸುತ್ತಾರೆ.

"ಜನಪದರು ತಮಗೆ ಬಂದಿರುವ ಅಥವಾ ಬರಬಹುದಾದ ತೊಂದರೆಗಳನ್ನು ನಿಭಾಯಿಸಲೆಂದು, ಫಲ ನೀಡುಲೆಂದು ದೇವರನ್ನು ಕೇಳಿಕೊಂಡು ಆರಾಧನೆ ಮಾಡುವ ಕಾರ್ಯಗಳೇ ಹಬ್ಬ, ಹುಣ್ಣಿಮೆಗಳು

ಆದರೆ ಕೆಲವೊಂದು ತೊಂದರೆಗಳು ಆಕಸ್ಮಿಕವಾಗಿ ಬರುವುದರಿಂದ ಅವುಗಳನ್ನು ನಿವಾರಿಸಲು ಕೆಲವು ವಿಧಿಗಳನ್ನು ಆಚರಿಸಬೇಕಾಗುತ್ತದೆ. ಇವನ್ನು ಕ್ರಮ ತೃಪ್ತಿ ಅಥವಾ ಆಕಸ್ಮಿಕವಾಗಿ ಬರುವ ವಿಧಿಗಳೆಂದು ಕರೆಯಬಹುದು ಇವುಗಳ ಜೋತೆಗೆ ಕಾಲಮಾನದಲ್ಲಿ ಹಾಗುವ ಬದಲಾವಣೆಗಳನ್ನು ಸೂಚಿಸಲು ಕೆಲವೊಂದು ಹಬ್ಬಗಳನ್ನು ಆಚರಿಸಲಾಗುವುದು."[೨]

೩.೯.೧. ದೇವಿ ಹಬ್ಬವನ್ನು ಆಚರಿಸುವ ವಿಧಾನ

ಇಕೋತಿಯ(ಪವಾರ) ಕುಟುಂಬದ ಎಲ್ಲಾ ಸದಸ್ಯರು ಹಬ್ಬವನ್ನು ಮಾಡಲು ಹಣವನ್ನು ಹೊಂದಿಸಿಕೊಳ್ಳುತ್ತಾರೆ. ನಂತರ ಶಿವ ಹಾಗೂ ತುಳಜಾಭವನಿ (ವಿಹೋ) ದೇವಿಯ ಹೆಸರಿನಲ್ಲಿ ಜೋಡಿ ಕೋಣಗಳನ್ನು ತೆಗೆದುಕೊಂಡು ಬರುತ್ತಾರೆ. ಕೋಣ ತೆಗೆದುಕೊಂಡು ಬರುವ ಸಮಯದಲ್ಲಿ ಕೋಣವನ್ನು ಸಂಪೂರ್ಣವಾಗಿ ಪರಿಶೀಲಿಸುತ್ತಾರೆ. ಕೋಣಕ್ಕೆ ಯಾವುದೇ ರೀತಿಯ ಗಾಯಗಳು(ಮುಕ್ಕು) ಆಗಿರಬಾರದು. ಅಂಥ ಕೋಣವನ್ನು ಖರೀದಿಸುತ್ತಾರೆ.

ಗಂಗಾಸ್ಥಳಕ್ಕೆ(ನೀರು ಇರುವ ಸ್ಥಳಕ್ಕೆ) ಕೋಣವನ್ನು ಕರೆದುಕೊಂಡು ಹೋಗಿ ಸ್ವಚ್ಛಮಾಡಿ ಕೂರಿಸುತ್ತಾರೆ. ನಂತರ ನೆಲ ಅಗೆದು ಕುಣಿ ತೆಗೆಯುತ್ತಾರೆ. ಕುಣಿಯಲ್ಲಿ ಕಟ್ಟಿಗೆ ಹಾಕಿ ಬೆಂಕಿ ಹಚ್ಚುತ್ತಾರೆ. ಗೋದಿ ಇಟ್ಟಿಗೆ ನೀರು ಹಾಕಿ ಕಲಸಿ ಬೆಂಕಿಯಲ್ಲಿ ಚಪಾತಿಯನ್ನು ಮಾಡಿ ದೇವರಿಗೆ ಎಡೆ ಇಡುತ್ತಾರೆ. ಎಡೆ ಇಟ್ಟನಂತರ ದೇವಿಯ ಪೂಜೆ ಮಾಡುವವರ ಮೈಮೇಲೆ ದೇವಿಯು ಬರುತ್ತಾಳೆ ಹಾಗ ಕುಟುಂಬದ ಸದಸ್ಯರು ದೇವಿಗೆ ನಮಸ್ಕರಿಸಿ ಬೇಡಿಕೊಳ್ಳುತ್ತಾರೆ. ಆಗ ದೇವಿಯು ಕೆಲವು ಮಾತುಗಳನ್ನು ಹೇಳಿ ದೇವಿ ನೀರಿನಲ್ಲಿ ಮುಳಗಿಬಿಡುತ್ತಾಳೆ. ಎಲ್ಲಾರಿಗೂ ಒಳ್ಳೆಯದಾಗಬೇಕೆಂದು ದೇವರಿಗೆ ಕಾಯಿಯನ್ನು ಹೊಡೆಯುತ್ತಾರೆ. ನಂತರ ದೇವಿಯ ಮುಂದೆ ಒಣ ಕೊಬರಿ ಬಟ್ಟಲವನ್ನು ಇಟ್ಟು ದೇವಿಗೆ ಪೂಜೆ ಮಾಡುತ್ತಾರೆ. ಬೆಲ್ಲದ ನೀರು ತುಪ್ಪ, ಕರ್ಪೂರ ಹಾಕಿ ಬೆಂಕಿ ಹಾಕುತ್ತಾರೆ. ನಂತರ ತೀರ್ಥವನ್ನು ನೆರದಿದ್ದವರ ಮೇಲೆ ಚಿಮ್ಮಿಸುತ್ತಾರೆ. ಇದಾದ ಮೇಲೆ ಎಲ್ಲಾರಿಗೂ ಊಟ ಹಾಕಿಸುತ್ತಾರೆ. ದೇವಿಯ ಪೂಜಾರಿಗಳಿಗೆ ಅವರ ಮನೆಯಲ್ಲಿ ಬೆಳಗ್ಗೆ ಸೂರ್ಯ ಹುಟ್ಟುವ ಮೊದಲೆ ರೊಟ್ಟಿ, ಬೆಳೆಸಾರು ಮಾಡುತ್ತಾರೆ. ಉಪವಾಸ ಇದ್ದವರು ಬೆಳಗ್ಗೆಯೇ ಊಟ ಮಾಡುತ್ತಾರೆ. ಮರುದಿನ ರಾತ್ರಿ ದೇವಿಯನ್ನು ಕೂರಿಸುತ್ತಾರೆ. ಮಂಗಳಾರತಿ ಮಾಡಿ ರಾತ್ರಿ ದೇವಿ ಮುಂದೆ ಕೋಣವನ್ನು ಕಟ್ಟಿ ಹಾಕುತ್ತಾರೆ. ನಂತರ ಮರುದಿನ ಬೆಳಗ್ಗೆ ಅಕ್ಕಿ, ಜೋಳ, ಗೋಧಿ ಈ ಮೂರು ಧಾನ್ಯಗಳನ್ನು ಬೆರೆಸಿ ದೇವರಿಗೆ ಎಡೆಮಾಡಿ ದೇವರ ಮುಂದೆ ಇಡುತ್ತಾರೆ. ಮತ್ತು ನಾಲ್ಕು ಮೂಲೆಗೆ ನಿಂಬೆ ಹಣ್ಣು, ಅಡಿಕೆ, ಹೂ ಇಟ್ಟು ಮರುದಿನ ಬೆಳಗ್ಗೆ ಶಿವನ ಕೋಣಕ್ಕೆ ನೀರು ಹಾಕಿ ಕೆಳಗಡೆ ಮಲಗಿಸಿ, ಕಾಲುಕಟ್ಟಿ, ಕೊಯ್ದು ಅದರ ರಕ್ತವನ್ನು ಹಿಡಿದಿಟ್ಟು ದೇವರ ವಿಗ್ರಹದ ಮೇಲೆ ಹಾಕುತ್ತಾರೆ.

"ಜಗತ್ತಿನಾದ್ಯಂತ ಬಲಿ ಸಂಪ್ರದಾಯಗಳು ಜನಪದರ ಜೀವನದಲ್ಲಿ ಆವರಿಸಿಕೊಂಡಿವೆ. ಹಿಂದಿನ ಕಾಲದಲ್ಲಿ ರೋಗರುಜಿನೆಗಳಾದಾಗ ಮಳೆ ಬೆಳೆ ಇಲ್ಲದಿದ್ದಾಗ, ನೊಂದ ಜನ ತಮ್ಮ ಕಷ್ಟಗಳ ನಿವಾರಣೆಗಾಗಿ ದೇವಿಯ ಮೊರೆ ಹೊಗುತ್ತಿದ್ದರು. ಬಲಿ ಅರ್ಪಿಸುವುದು ಬಹುತೇಕ ಹೆಣ್ಣು ದೈವಗಳಿಗೆ ಮಾತ್ರ, ದೇವತೆಗೆ ಹರಕೆ ಹೊತ್ತು ಬಲಿ ನೀಡುವುದರ ಮೂಲಕ ತಮ್ಮ ಭಕ್ತಿಯನ್ನು ತೋರಿಸುತ್ತಿದ್ದರು ಈಗೆ ಬಲಿ ನೀಡುವುದರಿಂದ ದೇವಿ ತೃಪ್ತಳಾಗಿ ರೋಗಗಳು ಇಲ್ಲವಾಗಿ ಮಳೆ ಬೆಳೆಗಳಾಗುವವೆಂಬ ನಂಬಿಕೆ ಜನಪದರಲ್ಲಿದೆ. ಹಿಂದೆ ಪ್ರಾಣಿಬಲಿ ಇತ್ತೆಂಬುದಕ್ಕೆ ಇಂದಿಗೂ ಮುಂದುವರೆಸಿಕೊಂಡು ಬಂದ ಬಲಿ ಆಚರಣೆಗಳೇ ಸಾಕ್ಷಿ."[೧೩]

ಇದಾದ ಮೇಲೆ ದೇವರು ಒಬ್ಬರ ಮೈಮೇಲೆ ಕಾಣಿಸಿಕೊಳ್ಳುತ್ತದೆ. ದೇವರು ಬಂದವರು ಕೋಣದ ಹಸಿ ರಕ್ತವನ್ನು ಕುಡಿಯುತ್ತಾರೆ. ನಂತರ ಕೋಣದ ತಲೆಯಮೇಲೆ ತುಪ್ಪವನ್ನು ಹಾಕುತ್ತಾರೆ. ದೊಡ್ಡ ಪೂಜಾರಿಯು ಏಳು ಚಪಾತಿ ಮಾಡಿ ತುಪ್ಪದ ಖಡಾಯಿಯಲ್ಲಿ ಹಾಕಿ ಬರಿಕೈಯಲ್ಲಿ ತುಪ್ಪದ ಖಡಾಯಿಯಲ್ಲಿ ಹಾಕಿರುವ ಚಪಾತಿಯನ್ನು ಒಂದೊಂದೆ ತೆಗೆದು ಹಾಕುತ್ತಾರೆ. ಜೋಳದ ಇಟ್ಟಿನಲ್ಲಿ ಬೆಲ್ಲ ಹಾಕಿ ಮಾಡಿದಂತಹ ಏಳು ರೊಟ್ಟಿಗಳನ್ನು ಬರಿಕೈಯಲ್ಲಿ ತುಪ್ಪದ ಖಡಾಯಿಗೆ ಹಾಕಿ ಒಂದೊಂದೆ ತೆಗೆದು ದೇವರಿಗೆ ಎಡೆ ಇಡುತ್ತಾರೆ. ಇದೇ ರೀತಿಯಾಗಿ ಎಣ್ಣೆ ಖಡಾಯಿಯಲ್ಲಿ ಹಾಕಿ ಏಳು ತುಪ್ಪದ ರೊಟ್ಟಿ ಮತ್ತು ಚಪಾತಿಯನ್ನು ಮಾಡುತ್ತಾರೆ. ಇದಾದ ಮೇಲೆ ಕೋಣದ ಚರ್ಮವನ್ನು ಸುಲಿದು ಅದರ ಬಲಭಾಗದಲ್ಲಿರುವ ಮಾಂಸವನ್ನು ತೆಗೆದು ಕುದಿಸುತ್ತಾರೆ. ಮತ್ತೆ ತುಪ್ಪದಲ್ಲಿ ಏಳು ರೊಟ್ಟಿಗಳನ್ನು ಮಾಡಿ ದೇವರಿಗೆ ನೈವೇದ್ಯಮಾಡುತ್ತಾರೆ. ದೇವರ ಹೆಸರಿನಲ್ಲಿ ಮಂಗಳಾರತಿ ಮಾಡಿ ಮೈದಾ ಹಿಟ್ಟಿನಿಂದ ದೀಪವನ್ನು ಮಾಡಿ ದೀಪ ಹಚ್ಚುತ್ತಾರೆ. ಆಗ ದೇವಿಯು ಒಬ್ಬರಿಗೆ ಮೈಮೇಲೆ ಬಂದು ಹಚ್ಚಿದ ದೀಪವನ್ನು ಬರಿಕೈಯಲ್ಲಿ ಹಾರಿಸುತ್ತಾರೆ. ನಂತರ ದೇವಿಯು ದೇವಿಯ ತ್ರಿಶೂಲ ತೆಗೆದುಕೊಂಡು ಇನ್ನೊಂದು ಕೋಣಕ್ಕೆ ಹರಿಶಿಣ, ಕುಂಕುಮವನ್ನು ಹಾಕಿ ಕೋಣದ ಮುಂದೆ ನರ್ತಿಸುತ್ತಾಳೆ. ನಂತರ ತ್ರಿಶೂಲವನ್ನು ಪೂಜಾರಿಯ ಕೈಯಲ್ಲಿ ಕೊಡುತ್ತಾಳೆ. ತ್ರಿಶೂಲದಿಂದ ಕೋಣಕ್ಕೆ ಚುಚ್ಚುತ್ತಾರೆ. ಇದಾದ ಮೇಲೆ ಕೋಣಕ್ಕೆ ಕಾಲು ಕಟ್ಟಿ ಎಳೆದುಕೊಂಡು ಬಂದು ಮಣ್ಣಿನಿಂದ ಮಾಡಿದ ಕಳಸದ ಮೇಲೆ ದೇವಿಯ ವಿಗ್ರಹ ಇಟ್ಟು ಕೋಣದ ರಕ್ತವನ್ನು ದೇವಿಯ ಮೇಲೆ ಹಾಕುತ್ತಾರೆ. ತದನಂತರ ದೇವಿಯು ಪೂಜಾರಿಯ ಮೈಮೇಲೆ ಬರುತ್ತಾಳೆ. ಬಂದು ಕೋಣದ ರಕ್ತವನ್ನು ಕುಡಿಯುತ್ತಾಳೆ. ಕೋಣ ಬದುಕಿರುವಾಗಲೇ ಕೋಣದ ಎದೆಯನ್ನು ಸೀಳಿ ಎದೆಯ ಮಾಂಸವನ್ನು ತೆಗೆದು ತ್ರಿಶೂಲದಲ್ಲಿ ಸಿಲುಕಿಸಿ ಸರಾಯಿ ಎಣ್ಣೆ ಕಲಿಸುತ್ತಾರೆ. ತೆಗೆದ ಮಾಂಸವನ್ನು ಬೆಯಿಸುತ್ತಾರೆ. ದೇವಿಯ ಪೂಜಾರಿಗಳು ಬಂದು ಆಶೀರ್ವಾದ ತೆಗೆದುಕೊಳ್ಳುವುದಕ್ಕೂ ಕೋಣವು ಪವಾಡ ಎಂಬಂತೆ ಕೋಣವು ಬದುಕಿರುತ್ತದೆ. ಇದಾದ ಮೇಲೆ ಬೇಯಿಸಿದ ಮಾಂಸವನ್ನು ದೇವಿಯ ಹುಡಿಗೆ ಇಡುತ್ತಾರೆ. ನಂತರ ಕೋಣವು ಸತ್ತು ಹೋಗುತ್ತದೆ. ತದನಂತರ ಅನ್ನದ ಎಡೆಗೆ ತುಪ್ಪ ಹಾಕಿ ದೇವರ ಹೆಸರಿನಿಂದ ಮಂಗಳಾರತಿ ಮಾಡಿ ನೀರು ತೆಗೆದುಕೊಂಡು ದೇವರ ಮೇಲೆ ನೆರದಿದ್ದವರ ಮೇಲೆ ಚಿಮ್ಮಿಸುತ್ತಾರೆ. ನಂತರ ಪೂಜಾರಿಗಳಿಗೆ ಊಟ ಮಾಡಿಸಿ ರಾತ್ರಿ ಸಮಯದಲ್ಲಿ ಸಮುದಾಯದ ಎಲ್ಲರೂ ಸೇರಿ ನೃತ್ಯ ಮಾಡುತ್ತಾರೆ. ಮರುದಿನ ಬೆಳಗ್ಗೆ ಕೋಣದ ಮಾಂಸವನ್ನು ಎಲ್ಲರ ಮನೆಗೆ ಪಾಲು ಹಾಕಿ ಕೊಡುತ್ತಾರೆ. ಪಾಲು ಹಾಕಿಕೊಟ್ಟ ಮಾಂಸದಲ್ಲಿ ಎಲ್ಲಾ ಮನೆಯವರು ಸ್ವಲ್ಪ ಮಾಂಸವನ್ನು ಕತ್ತರಿಸಿ ಒಣಗಿಸುತ್ತಾರೆ. ಹೀಗೆ ಒಣಗಿಸಿದ ಮಾಂಸವನ್ನು ಪೂಜಾರಿಯ ಮನೆಗೆ ತಂದು ಕೊಡುತ್ತಾರೆ. ತಂದುಕೊಟ್ಟ ಮಾಂಸವನ್ನು ಪೂಜಾರಿಯು ಒಂದು ಚೀಲದಲ್ಲಿ ತುಂಬಿಕೊಂಡು ಮಧ್ಯರಾತ್ರಿಯಲ್ಲಿ ತೆಗೆದುಕೊಂಡು ಹೋಗಿ ನದಿಯಲ್ಲಿ(ನೀರು ಇರುವ ಸ್ಥಳಕ್ಕೆ) ಹಾಕಿ ಅಲ್ಲಿಯೇ ಸ್ನಾನ ಮಾಡಿ ಮರಳಿಬರುತ್ತಾರೆ. ಮಾಂಸವನ್ನು ತೆಗೆದುಕೊಂಡು ಹೋಗಿ ನದಿಯಲ್ಲಿ ಬಿಡುವ ವರೆಗೂ ಮಾರ್ಗ ಮಧ್ಯದಲ್ಲಿ ಯಾರು ಸಹಿತ ಪೂಜಾರಿಯನ್ನು ಮಾತನಾಡಿಸುವಂತಿಲ್ಲ. ಒಂದುವೇಳೆ ಮಾತನಾಡಿಸಿದರೆ ಆ ವ್ಯಕ್ತಿ ಮೂಗು ಮತ್ತು ಬಾಯಿಯಲ್ಲಿ ರಕ್ತಬಿದ್ದು ಸಾಯುತ್ತಾನೆ ಎಂಬ ನಂಬಿಕೆ ಇವರಲ್ಲಿದೆ. ಪೂಜಾರಿಯು ಮನೆಯ ಒಳಕ್ಕೆ ಬರುವ ಹೊತ್ತಿಗೆ ಅವರ ಮನೆಯವರು ಬ್ರಾಹ್ಮಣರ ಮನೆಯಲ್ಲಿ ನೀರು ಮತ್ತು ಗೋಮೂತ್ರವನ್ನು ತರುತ್ತಾರೆ. ಮನೆಗೆ ಬಂದ ಪೂಜಾರಿಯು ಪುನಃ ಸ್ನಾನ

ಮಾಡಿ ಬ್ರಾಹ್ಮಣ ಮನೆಯಲ್ಲಿ ತಂದ ನೀರು ಮತ್ತು ಗೋಮೂತ್ರವನ್ನು ತೆಗೆದುಕೊಂಡು ದೇವಿಗೆ ಪೂಜೆ ಮಾಡುತ್ತಾರೆ. ಮರುದಿನ ಬೆಳಗ್ಗೆ ದೇವಿಗೆ ಮನೆಯಲ್ಲಿ ಮಾಡಿದಂತಹ ಸರಾಯಿಯನ್ನು ನೈವೇದ್ಯಕ್ಕೆ ಇಡುತ್ತಾರೆ. ಇಲ್ಲಿಗೆ ತುಳಜಾಭವನಿ(ವಿವೋ) ದೇವಿಯ ಹಬ್ಬದ ಆಚರಣೆ ಮುಗಿದಹಾಗೆ. ಮರುದಿವಸ ದೇವಿಯನ್ನು ನೀರಿನಿಂದ ಸ್ವಚ್ಛಮಾಡಿ ಅಳ್ಳಿ ಇಟ್ಟು ಒಂದು ಬಟ್ಟೆಯಿಂದ ಸುತ್ತಿ ಪೆಟಾರಿಯಲ್ಲಿ ಇಡುತ್ತಾರೆ.

ಪುನಃ ದೇವಿಯ ಹಬ್ಬವನ್ನು ಆಚರಿಸಬೇಕೆಂದರೆ ಪುನಃ ಕುಟುಂಬದವರು ಸೇರಿ ನಿರ್ಧಾರ ಮಾಡಿ ದೇವಿಯನ್ನು ಬೇಡಿ ಈ ಬಾರಿ ಹಬ್ಬ ಮಾಡಬೇಕೆಂದು ದೇವಿಯನ್ನು ಕೇಳಿ ಗುಲಗುಂಜಿಯನ್ನು ಹಾಕುತ್ತಾರೆ. ಅಂದುಕೊಂಡಾಗೆ ಸಂಖ್ಯೆಗಳು ಬಿದ್ದರೆ ದೇವಿ ಅಪ್ಪಣೆಯನ್ನು ನೀಡಿದ್ದಾಳೆ ಎಂದರ್ಥ. ಅಪ್ಪಣೆ ನೀಡಿದ ನಂತರವೆ ದೇವಿಯ ಹಬ್ಬವನ್ನು ಮಾಡುತ್ತಾರೆ. ಹಬ್ಬವನ್ನು ಮಾಡುವ ಸಂದರ್ಭದಲ್ಲಿ ಮಾತ್ರವೇ ದೇವಿಯ ವಿಗ್ರಹವನ್ನು ಪೆಟಾರಿಯಿಂದ ತೆಗೆದು ಹಬ್ಬ ಆಚರಿಸುತ್ತಾರೆ. ಉಳಿದ ದಿನಗಳಲ್ಲಿ ಎಂದಿಗೂ ಯಾವುದೇ ಕಾರಣಕ್ಕೂ ಪೆಟಾರಿಯನ್ನು ತೆಗೆಯುವುದಿಲ್ಲ. ಇದು ಹಕ್ಕಿಪಕ್ಕಿ ಸಮುದಾಯದ ಇಕೋತಿಯ ಬೆಡಗಿನವರ ಆಚರಣೆ.

೩.೧೦. ಹಕ್ಕಿಪಿಕ್ಕಿಯರ ಕಲಾ ಬದುಕು ಮತ್ತು ಆರ್ಥಿಕತೆ

೩.೧೦.೧. ಕಲಾತಂಡಗಳು

ಹಕ್ಕಿಪಿಕ್ಕಿಯರು ತಮ್ಮದೆಯಾದಂತಹ ವಿಶಿಷ್ಟವಾದ ಕಲೆ, ಸಂಸ್ಕೃತಿಯನ್ನು ಹೊಂದಿದ್ದಾರೆ. ತಮ್ಮ ವಿಶಿಷ್ಟವಾದ ಕಲೆಯನ್ನು ಪರಿಚಯಿಸಲು ಇವರುಗಳು ತಮ್ಮದೆಯಾದಂತಹ ಕಲಾ ತಂಡವನ್ನು ಕಟ್ಟಿಕೊಂಡಿದ್ದಾರೆ. ಕಲಾ ತಂಡಗಳು ತಮ್ಮ ಪ್ರದರ್ಶನ ಕೊಡುವ ಮುಖಾಂತರ ಜನರಿಗೆ ತಮ್ಮ ಕಲೆಯ ಸಿರಿವಂತಿಕೆಯನ್ನು ಪ್ರಚಾರಮಾಡುತ್ತಿದ್ದಾರೆ.

ಹಕ್ಕಿಪಿಕ್ಕಿಯರಲ್ಲಿ ಇಂದು ಮೂರು ರೀತಿಯ ಕಲಾ ತಂಡಗಳನ್ನು ಕಾಣುತ್ತೇವೆ.

೧. ಪುರುಷರ ತಾಷ್ಯ ರಾಂಡೋಲ್

೨. ಮಹಿಳೆಯರ ತಾಷ್ಯ ರಾಂಡೋಲ್

೩. ಮಹಿಳಾ ನೃತ್ಯ ಕಲಾ ತಂಡ

ಈ ಪ್ರತಿಯೊಂದು ಕಲಾ ತಂಡಗಳಲ್ಲಿಯೂ ೯ ರಿಂದ ೧೦ ಸದಸ್ಯರು ಇರುತ್ತಾರೆ. ಈ ಕಲಾತಂಡಗಳು ಕರ್ನಾಟಕ ಸೇರಿದಂತೆ ಬೇರೆ ಬೇರೆ ರಾಜ್ಯಗಳಾದಂತಹ ಗುಜರಾತ್, ರಾಜಸ್ಥಾನ್, ಆಂಧ್ರಪ್ರದೇಶ, ಗೋವಾ, ತಮಿಳು ನಾಡು, ಮಧ್ಯಪ್ರಧೇಶ, ಛತ್ತಿಸಘಡ ಇನ್ನು ಮುಂತಾದ ರಾಜ್ಯಗಳಲ್ಲಿ ಸರ್ಕಾರಿ ಕಾರ್ಯಕ್ರಮ ಹಾಗೂ ಖಾಸಗಿ ಕಾರ್ಯಕ್ರಮಗಳಲ್ಲಿ ತಮ್ಮ ಕಲಾಪ್ರದರ್ಶನ ನೀಡಿ ಜನರಿಂದ, ಸಂಘಸಂಸ್ಥೆಗಳಿಂದ ಹಾಗೂ ಆಯಾ ರಾಜ್ಯಸರ್ಕಾರಗಳಿಂದ ಪ್ರಶಂಸೆ ಹಾಗೂ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ.

ವಿಶೇಷವಾಗಿ ಮಹಿಳಾ ತಾಷ್ಯ ರಾಂಡೋಲ್ ಹಾಗೂ ಮಹಿಳಾ ನೃತ್ಯ ತಂಡಗಳು ತಮ್ಮ ಕಲಾಪ್ರದರ್ಶನ ಮುಖಾಂತರ ಹೆಚ್ಚು ಪ್ರಖ್ಯಾತಿಯನ್ನು ಹೊಂದಿದ್ದು ಈ ಕಲಾತಂಡಗಳು ನೋಡುಗರನ್ನು ಹೆಚ್ಚು ಆಕರ್ಷಿಸುತ್ತದೆ. ಮತ್ತು ಕಲಾತಂಡಗಳಲ್ಲಿ ವಿಶೇಷವಾದ ಮತ್ತು ವಿಶೀಷ್ಟವಾದ ಕಲಾತಂಡಗಳು ಇವಾಗಿವೆ. ಈ ತಮ್ಮ

ಕಲಾತಂಡಗಳ ಪ್ರದರ್ಶನದಿಂದ ಆದಾಯ ಗಳಿಸುತ್ತಿದ್ದು ಈ ರೀತಿಯಾಗಿ ಗಳಿಸಿದ ಆದಾಯವು ಹಕ್ಕಿಪಿಕ್ಕಿಯರ ಜೀವನ ನಿರ್ವಹಣೆಗೆ ಸ್ವಲ್ಪ ಮಟ್ಟಿನ ಸಹಕಾರಿಯಾಗುತ್ತಿದೆ.

೩.೧೧. ಕುಲಪಂಚಾಯಿತಿ

ಕಟ್ಟೆಮನೆ ಗೌಡರು ಕುಲಪಂಚಾಯಿತಿಯಲ್ಲಿ ನ್ಯಾಯವನ್ನು ತೀರ್ಮಾನಿಸುತ್ತಾರೆ. ಸಾಮಾನ್ಯವಾಗಿ ಹಕ್ಕಿಪಿಕ್ಕಿಯರಲ್ಲಿ ಪಿಂಪಳಾಜ ಬೆಡಗಿನವರು ಕಟ್ಟೆಮನೆ ಗೌಡರು ಆಗಿರುತ್ತಾರೆ. ಈ ಬೆಡಗಿನಲ್ಲಿ ಪುರಾತನ ಕಾಲದಿಂದ ಯಾವ ಕುಟುಂಬದವರು ಕಟ್ಟೆಮನೆಗೌಡರು ಆಗಿರುತ್ತಾರೆಯೋ ಆ ಕುಟುಂಬದವರನ್ನೆ ಕಟ್ಟೆಮನೆಗೌಡರನ್ನಾಗಿ ನೇಮಿಸುತ್ತಾರೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ನೆಲೆಸಿರುವ ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದಲ್ಲಿ ಕೊರುಬ್ಯಾ ಬೆಡಗಿನವರು ಕಟ್ಟೆಮನೆಗೌಡರನ್ನಾಗಿ ನೇಮಿಸುವುದನ್ನು ಕಾಣುತ್ತೇವೆ.

೩.೧೧.೧. ಕುಲ ಪಂಚಾಯಿತಿ (ತಪ್ಪಿತಸ್ಥರನ್ನು ಕಂಡುಹಿಡಿಯುವ ಬಗೆ)

೧. ಹಕ್ಕಿಪಿಕ್ಕಿಯ ಕಟ್ಟೆಮನೆ ಗೌಡರು ತಪ್ಪು ಮಾಡಿದವರನ್ನು ಕಂಡುಹಿಡಿಯಲು ಅನುಸರಿಸುವ ಕ್ರಮಗಳೆಂದರೆ? ಒಂದು ಕಾಲ್ಕೇಜಿ ಎಣ್ಣೆ ಒಂದು ಮೊಣ ಕಟ್ಟಿಗೆಯನ್ನು ತಂದು ಮಣ್ಣಿನಿಂದ ಮಾಡಿದ ಕಡಾಯಿ ತಂದು ಗೌಡನ ಮನೆಮುಂದೆ ಕಡಾಯಿಗೆ ಎಣ್ಣೆ ಹಾಕಿ ಬೆಂಕಿ ಹಚ್ಚಿ ಕುದಿಸುತ್ತಾರೆ. ಹಾಗ ಗೌಡ ಕೇಳುತ್ತಾನೆ ನೀನು ತಪ್ಪು ಮಾಡದಿದ್ದರೆ ಎಣ್ಣೆಯಲ್ಲಿ ಕೈಯನ್ನು ಇಡಬೇಕು ಹೀಗೆ ಎಣ್ಣೆಯಲ್ಲಿ ಕೈಯಿಟ್ಟವನನ್ನು ಮೂರು ದಿವಸದವರೆಗೆ ಮನೆಗೆ ಕಳುಹಿಸುವುದಿಲ್ಲ ಅವರು ಗೌಡನ ಮನೆಯ ಮುಂದಯೇ ಮೂರು ದಿನಗಳಕಾಲ ಇರಬೇಕು ಅವನು ಹೇಳುವುದು ಸತ್ಯವಾದರೆ ಕೈಸುಡುವುದಿಲ್ಲ ಅವನು ಹೇಳುವುದು ಸುಳ್ಳಾದರೆ ಕೈಸುಡುತ್ತದೆ ಎನ್ನುವುದು ಹಕ್ಕಿಪಿಕ್ಕಿ ಸಮುದಾಯದವರ ನಂಬಿಕೆ. ತಪ್ಪು ಸಾಬೀತಾದರೆ ಅಪರಾಧಿಯು ಗೌಡನ ಮನೆಗೆ ಹೋಗಿ ದಂಡ ಕಟ್ಟಬೇಕು.

೨. ತಪ್ಪು ಮಾಡಿದವರನ್ನು ಕಂಡುಹಿಡಿಯುವದಕ್ಕೆ ನದಿಗೆ ಕರೆದುಕೊಂಡು ಹೋಗುತ್ತಾರೆ ನಂತರ ಗೌಡ ದೇವರ ಹೆಸರಿನಿಂದ ನಮಸ್ಕರಿಸಿ ಮೂರು ಕಲ್ಲುಗಳನ್ನು ತೆಗೆದುಕೊಂಡು ಬೇರೆಯವರಿಗೆ ಎಸೆಯುವದಕ್ಕೆ ಕೊಡುತ್ತಾರೆ. ಕಲ್ಲನ್ನು ಎಲ್ಲಿಯವರೆಗೆ ಎಸೆಯುತ್ತಾರೆಯೋ ಕಲ್ಲನ್ನು ಎಸೆದ ಜಾಗದಲ್ಲಿ ಒಂದು ಗೆರೆಯನ್ನು ಎಳೆದು ಗುರುತು ಮಾಡಿ ಕಲ್ಲು ಬಿದ್ದ ಜಾಗದಲ್ಲಿ ಒಬ್ಬನನ್ನು ನೀಲ್ಲಿಸುತ್ತಾರೆ ನಂತರ ಗೌಡ ಪೂಜಾರಿಗೆ ದೇವರ ಹೆಸರಿನಿಂದ ನಮಸ್ಕರಿಸಿ ದೇವರಲ್ಲಿ ಇದರಲ್ಲಿ ಯಾರು ತಪ್ಪು ಮಾಡಿಲ್ಲವೋ ಅವರನ್ನು ಆ ವ್ಯಕ್ತಿಯು ಓಡಿ ಹೋಗಿ ಕಲ್ಲುಬಿದ್ದ ಜಾಗದಲ್ಲಿರುವ ಸ್ಥಳದಲ್ಲಿ ನಿಲ್ಲಿಸಿದ. ಆ ವ್ಯಕ್ತಿಯನ್ನು ಸುತ್ತಿಕೊಂಡು ಬರುವವರೆಗೂ ನೀರಿನಲ್ಲಿ ಮುಳುಗಿರುವ ವ್ಯಕ್ತಿಯನ್ನು ಬದುಕಿಸು ತಪ್ಪು ಮಾಡಿದವರನ್ನು ನೀರಿನಿಂದ ಹೊರಕ್ಕೆ ಹಾಕು ಎಂದು ಬೇಡಿಕೊಳ್ಳಲು ಗೌಡ ಪೂಜಾರಿಗೆ ತಿಳಿಸುತ್ತಾನೆ. ಪೂಜಾರಿಯು ದೇವರಿಗೆ ಬೇಡಿಕೊಂಡು ನಂತರ ಗೌಡ ಒಂದರಿಂದ ಮೂರು ಅಂಕಿ ಎಣಿಸುತ್ತಾನೆ ಮೂರು ಅಂದ ತಕ್ಷಣ ಒಬ್ಬ ಓಡಿ ಹೋಗಿ ನಿಂತಿರುವ ವ್ಯಕ್ತಿಯನ್ನು ಸುತ್ತಿ ಬರುವವರೆಗೂ ನೀರಿನಲ್ಲಿ ಮುಳುಗಿದ್ದ ವ್ಯಕ್ತಿಯು ನೀರಿನಿಂದ ಎದ್ದಿಲ್ಲವೆಂದರೆ ಅವರು ತಪ್ಪು ಮಾಡಿಲ್ಲವೆಂದು ಅರ್ಥ ಅವರು ಓಡಿ ಬರುವ ಮುನ್ನವೆ ನೀರಿನಲ್ಲಿ ಮುಳುಗಿದ ವ್ಯಕ್ತಿಯು ನೀರಿನಿಂದ ಎದ್ದರೆ ಅವನು ತಪ್ಪು ಮಾಡಿರುವನೆಂದು ಅರ್ಥ ಹೀಗೆ ಹಕ್ಕಿಪಿಕ್ಕಿಯವರು ತಪ್ಪು ಮಾಡಿದವರನ್ನು ಈ ರೀತಿಯ ಪರಿಕ್ಷೆಗಳಿಂದ ಕಂಡುಹಿಡಿಯುತ್ತಾರೆ.

೩.೧೧.೨. ಕುಲಪಂಚಾಯಿತಿಗೆ ದಂಡ ಕಟ್ಟುವುದು

ತಪ್ಪು ಮಾಡಿದವರು ಕುಲಪಂಚಾಯಿತಿಗೆ ದಂಡವನ್ನು ಕಟ್ಟಲೇಬೇಕು, ದಂಡ ಮೊತ್ತದ ಶೇಕಡ ೫೦ ರಷ್ಟು ಹಣ ಕಟ್ಟೆಮನೆಗೆ ಸಲ್ಲುತ್ತದೆ. ಉಳಿದ ಶೇಕಡ ೫೦ ರಷ್ಟು ಹಣ ಪಂಚಾಯಿತಿಗೆ ಸೇರಿದ ಹಿರಿಯರಿಗೆ ಹಾಗೂ ಪಂಚಾಯಿತಿ ನಡೆದ ಸ್ಥಳದಲ್ಲಿ ಎಷ್ಟು ಮನೆಗಳು ಇರುತ್ತವೆಯೋ ಅಷ್ಟು ಮನೆಗಳಿಗೆ ಹಣವನ್ನು ಭಾಗ ಮಾಡಿ ಪಾಲನ್ನು ಕೊಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಕಂಪ್ಲಿಯ ಹಕ್ಕಿಪಿಕ್ಕಿಯರು ಕಟ್ಟೆಮನೆಗೆ ಸಲ್ಲಿಸಿ ಉಳಿದ ಶೇಕಡ ೫೦ ರಷ್ಟು ಹಣವನ್ನು ಕ್ರೋಡಿಸಿಕೊಂಡು ಕಟ್ಟೆಮನೆ ಗೌಡರಿಗೆ ಸಲ್ಲಬೇಕಾದ ಬಾಬ್ತನ್ನು ಕೊಟ್ಟು ಸ್ವಲ್ಪ ಹಣವನ್ನು ಪಂಚಾಯಿತಿಗೆ ಸೇರಿದ ಹಿರಿಯರಿಗೆ ಕೊಟ್ಟು ಉಳಿದ ಹಣವನ್ನು ಸಮುದಾಯದ ಒಳಿತಿಗಾಗಿ ಬಳಸುತ್ತಿದ್ದಾರೆ.

ಅಡಿ ಟಿಪ್ಪಣಿ

೧. ಲಕ್ಷ್ಮಣ್ ತೆಲಗಾವಿ, ಸ್ಥಳೀಯ ಚರಿತ್ರೆ ಅಧ್ಯಯನ ತಾತ್ವಿಕತೆ ಮತ್ತು ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪು–೦೬.

೨. ರಮೇಶ್ ಸ ಚಿ, ಜಾನಪದ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೧೨೫.

೩. ಮೇತ್ರಿ ಕೆ ಎಂ, 'ಕರ್ನಾಟಕದ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೭, ಪು–೦೬

೪. ಮೇತ್ರಿ ಕೆ ಎಂ, 'ಬುಡಕಟ್ಟು ಕುಲಕಸುಬುಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨, ಪು–೮೧.

೫. ಪ್ರಭಾಕರ್ ಎ ಎಸ್, ಆದಿವಾಸಿ ಆಖ್ಯಾನ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ, ೨೦೦೬, ಪು–೪೮೦.

೬. ಶಾಲಿನಿ ರಘುನಾಥ, ಜಾನಪದ ಸಾಹಿತ್ಯ ದರ್ಶನ, ಭಾಗ ೧೪, ೨೦೦೧, ಪು–೫೧

೭. ಪ್ರಭಾಕರ್ ಎ ಎಸ್, ಕರ್ನಾಟಕ ದೊಂಬರು, ಅಪ್ರಕಟಿತ ಪಿಹೆಚ್‌ಡಿ ಮಹಾಪ್ರಬಂಧ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು–೪೬.

೮. ಪ್ರಭಾಕರ ಎ ಎಸ್, ಡೊಂಬರ ಒಂದು ಚಾರಿತ್ರಿಕ ಹಿನ್ನೋಟ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ, ೨೦೦೬, ಪು–೧೧೫.

೯. ಸಾವಿತ್ರಿ ಎಸ್ ಎಂ, ಕುಮಾರರಾಮ ಸಂಪ್ರದಾಯದ ಅಧ್ಯಯನ, ೨೦೦೨, ಪು–೦೪.

೧೦. ರಾಜಶೇಖರಯ್ಯ ಎಲ್, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿವಾಹ ಪದ್ಧತಿ, ಅಭಿರುಚಿ ಪ್ರಕಾಶನ ಮೈಸೂರು, ೨೦೦೨, ಪುಟ–೧.

೧೧. ಅದೇ ಪುಟ-೧

೧೨.ಮೂಲಗಿ ಆರ್.ಬಿ, ಧಾರವಾಡ ಜಿಲ್ಲೆಯ ಜನಪದ ಸಂಪ್ರದಾಯಗಳು, ಸಾಹಿತ್ಯ ಪ್ರಕಾಶನ ಹುಬ್ಬಳಿ, ೨೦೧೦, ಪುಟ-೧೬೧

೧೩.ಸಿದ್ದೇಶ್ವರಿ ಎ ಎನ್, ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪ್ರಭುದೇವರ ಜನಕಲ್ಯಾಣ ಸಂಸ್ಥೆ ಸೊಂಡುರು, ೨೦೧೪, ಪುಟ-೧೬೩-೧೬೪.

ಅಧ್ಯಾಯ: ನಾಲ್ಕು
ಹಕ್ಕಿಪಿಕ್ಕಿಯರ ಆರ್ಥಿಕ ಜೀವನ

೪.೧. ಪ್ರಸ್ತಾವನೆ

೪.೨. ಪಾರಂಪರಿಕ ವೃತ್ತಿಗಳು

೪.೨.೧. ಆಹಾರ ಸಂಗ್ರಹಣೆ

೪.೨.೨. ಬೇಟೆ

೪.೨.೩. ಪಶುಪಾಲನೆ

೪.೨.೪. ಕೃಷಿ ಮತ್ತು ಕೃಷಿಕೂಲಿ

೪.೩. ಅವಲಂಬಿತ ವೃತ್ತಿಗಳು

೪.೩.೧. ಕೃಷಿ ಕೂಲಿ

೪.೪. ಕೃಷಿ ಕಾರ್ಮಿಕರು

೪.೪.೧. ಹಕ್ಕಿಪಿಕ್ಕಿಯರು ಮಾಡುವ ಕೃಷಿಕೂಲಿ ಕೆಲಸಗಳು

೪.೪.೧.೧. ಕಳೆ ತೆಗೆಯುವುದು

೪.೪.೧.೨. ಬೀಜ ಬಿತ್ತುವುದು

೪.೪.೧.೩. ಗೊಬ್ಬರ ಹಾಕುವುದು

೪.೪.೧.೪. ಹತ್ತಿ ಬಿಡಿಸುವುದು ಮತ್ತು ಮೆಣಸಿನ ಕಾಯಿ ಕೀಳುವುದು

೪.೪.೧.೫. ಬೆಳೆಗಳಿಗೆ ಔಷಧಿ ಸಿಂಪಡಿಸುವ

೪.೪.೧.೬. ಕಬ್ಬು ಕಟಾವು ಮಾಡುವುದು

೪.೪.೧.೭. ಹೊಲಗದ್ದೆ ಮತ್ತು ತೋಟವನ್ನು ಕಾಯುವುದು

ಅಧ್ಯಾಯ: ನಾಲ್ಕು
ಹಕ್ಕಿಪಿಕ್ಕಿಯರ ಆರ್ಥಿಕ ಜೀವನ

೪.೧. ಪ್ರಸ್ತಾವನೆ

ಕರ್ನಾಟಕದ ಬುಡಕಟ್ಟುಗಳಲ್ಲಿ ಮೂರು ಬಗೆಯ ಬುಡಕಟ್ಟು ಸಮುದಾಯಗಳನ್ನು ಕಾಣಬಹುದು. ಅವುಗಳನ್ನು ಮುಖ್ಯವಾಗಿ ಕಾಡುವಾಸಿ ಬುಡಕಟ್ಟುಗಳು ಮತ್ತು ಬಯಲುಪ್ರದೇಶದಲ್ಲಿ ನಿರ್ಧಿಷ್ಟ ಪ್ರದೇಶದಲ್ಲಿ ನೆಲೆಸಿದ ಬುಡಕಟ್ಟುಗಳು ಹಾಗೂ ಅಲೆಮಾರಿ ಬುಡಕಟ್ಟುಗಳೆಂದು ವಿಭಾಗಿಸಬಹುದು. ಮುಖ್ಯವಾಗಿ ಪಶ್ಚಿಮ ಘಟ್ಟಗಳ ಕಾಡು, ಕೊಡಗು, ಬಿಳಿಗಿರಿ ರಂಗನಬೆಟ್ಟ, ಮಲೆ ಮಹಾದೇಶ್ವರ ಬೆಟ್ಟ ಮುಂತಾದ ಕಡೆ ಇರುವ ಬುಡಕಟ್ಟುಗಳು ಬಹುತೇಕ ಇಂದಿಗೂ ಜೇನು ಸಂಗ್ರಹಣೆ, ಮರದ ಮೇಲಿನ ಪಾಚಿ ಸಂಗ್ರಹಣೆ, ವನಸ್ಪತಿಗಳ ಸಂಗ್ರಹಣೆ ಮತ್ತು ಮಾರಾಟಗಳಲ್ಲಿ ಹಾಗೂ ಕೃಷಿಯಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಆದರೆ ಬಯಲು ಸೀಮೆಯಲ್ಲಿ ಜೀವನ ನಿರ್ವಹಣೆ ಮಾಡುತ್ತಿರುವ ಬುಡಕಟ್ಟು ಸಮುದಾಯಗಳು ಇಂದು ಪಶುಪಾಲನೆ ಮತ್ತು ಸಣ್ಣ ಹಿಡುವಳಿಯ ಬೇಸಾಯ ಕ್ರಮವನ್ನೇ ಹೆಚ್ಚಾಗಿ ಅವಲಂಬಿಸಿವೆ. ಅದೇ ರೀತಿಯಾಗಿ ಕಾಡು ಬಯಲುಗಳೆಲ್ಲಾ ಕಡೆ ನಿರಂತರವಾಗಿ ಅಲೆಮಾರಿತನವನ್ನೇ ಮೈಗೂಡಿಸಿಕೊಂಡಿರುವ ಹಕ್ಕಿಪಿಕ್ಕಿಯಂತಹ ಬುಡಕಟ್ಟುಗಳೂ ಇವೆ. ಈ ಸಮುದಾಯ ಅಲೆಮಾರಿತನವನ್ನು ಸಂಪೂರ್ಣವಾಗಿ ತೊರೆದಿಲ್ಲವಾದರೂ ನಗರಗಳ ಹೊರವಲಯಗಳಲ್ಲಿ ಆಶ್ರಯಹೊಂದಿದ ಹಕ್ಕಿಪಿಕ್ಕಿಯರು ಒಂದು ಕಡೆ ನೆಲೆನಿಲ್ಲಲು ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ.

ಆದಿ ಮಾನವ ಹಿಂದೆ ಕಾಡುಪ್ರಾಣಿಯನ್ನು ಬೇಟೆಯಾಡಿ ಅದರ ಹಸಿ ಮಾಂಸವನ್ನು ತಿಂದು ಹಸಿವನ್ನು ತಣಿಸಿಕೊಳ್ಳುತ್ತಿದ್ದ. ಕ್ರಮೇಣ ಹಸಿ ಮಾಂಸವನ್ನು ಬೇಯಿಸಿಕೊಂಡು ತಿನ್ನುವುದನ್ನು ರೂಢಿಸಿಕೊಂಡನು. ಹೀಗೆ ಹಂತ ಹಂತವಾಗಿ ಬೆಳೆದು ಇಂದಿನ ಸ್ಥಿತಿಗೆ ಮನುಷ್ಯನು ಬಂದು ನಿಂತ ಪರಿ ನಿಜಕ್ಕೂ ಆಶ್ಚರ್ಯವನ್ನುಂಟು ಮಾಡುತ್ತದೆ. ಅಲೆಮಾರಿಯಾಗಿ ಜೀವಿಸುತ್ತಿದ್ದ ಮಾನವ ಒಂದು ಕಡೆ ನೆಲೆನಿಂತು ಕೃಷಿಯನ್ನು ಮಾಡಲಾರಂಭಿಸಿದ. ದಿನ ಕಳೆದಂತೆ ಜೀವನದ ಅವಶ್ಯಕತೆಗಳ ಪೂರೈಕೆಗಾಗಿ ವಸ್ತು ವಿನಿಮಯ ಪದ್ಧತಿ ರೂಢಿಗೆ ತಂದುಕೊಳ್ಳಲಾಯಿತು. ಮೊದಲು ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳಲಷ್ಟೆ ಆಹಾರ

ಉತ್ಪಾದಿಸುತ್ತಿದ್ದ. ಮನುಷ್ಯ ಹೆಚ್ಚು ನಾಗರಿಕನಾದಂತೆಲ್ಲಾ ಹೆಚ್ಚು ಹೆಚ್ಚು ಸ್ವಾರ್ಥಿಯಾಗತೊಡಗಿದ. ತನ್ನ ಅವಶ್ಯಕತೆಗೆ ಮೀರಿದ ಉತ್ಪಾದನೆ ಮಾಡುವುದು, ಅದನ್ನು ಸಂಗ್ರಹಿಸಿ ಇರಿಸಿಕೊಳ್ಳುವುದರತ್ತ ಹೆಚ್ಚು ಆಸಕ್ತನಾದನು. ಮನುಷ್ಯನ ಅತಿಯಾದ ಸ್ವಾರ್ಥದ ಫಲವೇ ಸಂಪತ್ತಿನ ಸಂಗ್ರಹ ಚಟುವಟಿಕೆಗಳ ಮೂಲವಾಯಿತು.

ಇಂದು ಆರ್ಥಿಕತೆ ಎಂಬುದು ಜನಜೀವನಲ್ಲಿ ಎಷ್ಟು ಮುಖ್ಯವಾಗಿದೆ ಎಂದರೆ ಇಂದು ಮಾನವ ಕೈಗೊಳ್ಳುವ ಎಲ್ಲಾ ಚಟುವಟಿಕೆಗಳು ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಆರ್ಥಿಕ ಚಟುವಟಿಕೆಗಳಾಗಿವೆ. ಸಮಾಜದಲ್ಲಿ ಅಸಮಾನತೆಯ ಸೃಷ್ಟಿಗೆ ಈ ಆರ್ಥಿಕ ವ್ಯವಸ್ಥೆಯೇ ಕಾರಣವಾಗಿದೆ.

ಹಕ್ಕಿಪಿಕ್ಕಿಯರು ಅಲೆಮಾರಿಗಳಾಗಿ ಕಾಡುತ್ಪನ್ನಗಳ ಸಂಗ್ರಹಣೆ, ಪಶುಸಂಗೋಪನೆ ಮಾಡುತ್ತ ತಮ್ಮ ಪಾಡಿಗೆ ತಾವೆಂಬಂತೆ ಜೀವನ ನಡೆಸುತ್ತಿದ್ದರು. ಇವರ ಬದುಕು ಸೂತ್ರ ತಪ್ಪಿದ ಗಾಳಿಪಟವಾದದ್ದು ಮಾತ್ರ ಬ್ರಿಟೀಷರ ಆಗಮನದ ತರುವಾಯವೆನ್ನಬಹುದು. ಬ್ರಿಟೀಷರು ಸ್ಥಳೀಯ ಅರಸರನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಶಸ್ತ್ರಾಸ್ತ್ರ ನೀತಿಯನ್ನು ಜಾರಿಗೆ ತಂದರು. ಅಷ್ಟೇ ಅಲ್ಲದೆ ಸ್ಥಳೀಯ ರಾಜಕೀಯ ವ್ಯವಸ್ಥೆಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿದ್ದ ಬುಡಕಟ್ಟುಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಅರಣ್ಯ ನೀತಿಯನ್ನು ಜಾರಿಗೊಳಿಸಿದರು. ಬ್ರಿಟೀಷರ ಈ ರೀತಿಯ ಕಾನೂನುಗಳಿಂದಾಗಿಯೇ ಕಾಡನ್ನು ಆಶ್ರಯಿಸಿದ್ದ ಎಷ್ಟೋ ಬುಡಕಟ್ಟುಗಳು ಕಾಡಿನಿಂದ ದೂರಉಳಿಯಬೇಕಾದ ಅನಿವಾರ್ಯ ಸ್ಥಿತಿ ಏರ್ಪಟ್ಟಿತು. ಕಾಡನ್ನು ತೊರೆದ ಎಷ್ಟೋ ಬುಡಕಟ್ಟುಗಳು ಅತ್ತ ಕಾಡನ್ನೂ ಸೇರದೆ ಇತ್ತ ನಾಡನ್ನೂ ಸೇರದೆ ಅಲೆಮಾರಿಗಳಾಗಿ ಉಳಿಯುವ ಸ್ಥಿತಿಯೊದಗಿತು. ಈ ರೀತಿ ಅಲೆಮಾರಿಗಳಾಗಿ ಉಳಿದ ಬುಡಕಟ್ಟುಗಳಲ್ಲಿ ಹಕ್ಕಿಪಿಕ್ಕಿ ಬುಡಕಟ್ಟೂ ಒಂದಾಗಿದೆ. ಇಂದಿಗೂ ಅಲೆಮಾರಿತನವನ್ನು ಪೂರ್ಣವಾಗಿ ತೊರೆಯದ ಈ ಬುಡಕಟ್ಟು ಜನರು ಇತ್ತೀಚೆಗೆ ಒಂದೇ ಕಡೆ ನೆಲೆಸಲು ಪ್ರಯತ್ನಿಸುತ್ತಿರುವರು. ಈ ಬುಡಕಟ್ಟನ್ನು ಬ್ರಿಟೀಷರು ಅಪರಾಧಿ ಬುಡಕಟ್ಟು ಎಂದು ಗುರುತಿಸಿತು. ಬ್ರಿಟೀಷರು ಅಂದು ಇವರ ಮೇಲೆ ಹೊರಸಿದ ಅಪವಾದದಿಂದ ಇಂದಿಗೂ ಹಕ್ಕಿಪಿಕ್ಕಿಗಳಿಗೆ ಬಿಡುಗಡೆ ದೊರೆತಿಲ್ಲ. ಇಂದಿಗೂ ಈ ಸಮುದಾಯವನ್ನು ಸಾರ್ವಜನಿಕರು ಅಪರಾಧಿಗಳೆಂದೇ ಗುಮಾನಿಯಿಂದ ನೋಡುವರು. ಪೋಲಿಸ್ ವ್ಯವಸ್ಥೆಯೂ ಇವರನ್ನು ಅಪರಾಧಿಗಳೆಂದೇ ಪರಿಗಣಿಸುವುದು. ಅಪರಾಧಿ ಎನ್ನುವ ಕಳಂಕದಿಂದ ಈ ಬುಡಕಟ್ಟು ಹೊರಬರಲು ಇಂದಿಗೂ ಸಾಧ್ಯವಾಗುತ್ತಿಲ್ಲ.

ನಾಲ್ಕು ಜನರಂತೆ ಜೀವನ ನಡೆಸಬೇಕೆಂಬ ಆಪೇಕ್ಷೆ ಹಕ್ಕಿಪಿಕ್ಕಿಯರಿಗಿದೆ. ಆದರೆ ಅವರಿಗೆ ಕೆಲಸ ನೀಡಲು ಸಾರ್ವಜನಿಕರು ಹಿಂಜರಿಯುವರು. ಅಲೆಮಾರಿಗಳಾಗಿರುವುದರಿಂದ ಆಧುನಿಕ ಶಿಕ್ಷಣದಿಂದಲೂ ಇವರು ವಂಚಿತರಾಗಿರುವರು. ತುಂಬಾ ಅಲ್ಪ ಸಂಖ್ಯಾತವಾದ ಈ ಬುಡಕಟ್ಟು ರಾಜಕೀಯ ಪ್ರಾತಿನಿಧ್ಯ ಪಡೆಯುವಲ್ಲಿಯೂ ಸೋತಿದೆ. ಹೀಗೆ ನಾನಾ ಮಗ್ಗಲುಗಳಿಂದ ಹೊಡೆತಗಳನ್ನೇ ಉಣ್ಣುತ್ತ ಬಂದಿರುವ ಹಕ್ಕಿಪಿಕ್ಕಿ ಸಮುದಾಯವು ಬದುಕಿಗಾಗಿ ಹೋರಾಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

೪.೨. ಪಾರಂಪರಿಕ ವೃತ್ತಿಗಳು

೪.೨.೧. ಆಹಾರ ಸಂಗ್ರಹಣೆ

ಹಕ್ಕಿಪಿಕ್ಕಿ ಸಮುದಾಯದವರು ಕಾಡಿನಲ್ಲಿ ಸಿಗುವ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಅದರಲ್ಲಿಯೇ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುವವರಾಗಿದ್ದರು. ಸಂಗ್ರಹಿಸಿದ ಕಾಡೊತ್ಪನ್ನಗಳಲ್ಲಿ ತಮ್ಮ ಜೀವನಕ್ಕೆ

ಅವಶ್ಯವಾದಷ್ಟನ್ನು ಇರಿಸಿಕೊಂಡು ಮಿಕ್ಕಿದುದನ್ನು ಪರರಿಗೆ ಮಾರಿ ಅದರಿಂದ ತಮಗೆ ಅಗತ್ಯವಾದ ಇತರ ವಸ್ತುಗಳನ್ನು ಕೊಳ್ಳುತ್ತಿದ್ದರು. ಕಾಡಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ ಈ ಬುಡಕಟ್ಟು ತನ್ನ ಸರಂಜಾಮುಗಳನ್ನು ಸಾಗಿಸಲು ಅವಶ್ಯವಾದ ಪಶು ಸಂಪತ್ತನ್ನೂ ಹೊಂದಿದ್ದರು.

೪.೨.೨. ಬೇಟೆ

ಬೇಟೆ ಹಕ್ಕಿಪಿಕ್ಕಿಯವರ ಮುಖ್ಯ ವೃತ್ತಿಯಾಗಿತ್ತು. ಮೂಲತಃ ಬೇಟೆಯನ್ನೇ ಆಶ್ರಯಿಸಿದ ಬುಡಕಟ್ಟಿದು. ಹಕ್ಕಿಪಿಕ್ಕಿ, ಫಾನ್ಸೆಪಾರ್ಧಿ, ನೀಲ್‌ಶಿಕಾರಿ, ಚಿಗರಿಬೇಟೆಗಾರ್ ಇತ್ಯಾದಿ ಹೆಸರುಗಳು ಇವರು ಮೂಲತಃ ಬೇಟೆಗಾರರೆಂಬುದನ್ನೇ ಪ್ರತಿನಿಧಿಸುತ್ತವೆ. ಇವರುಗಳು ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡಿ ಅದರಿಂದ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಿದ್ದರು. ಪ್ರಾಣಿಯ ಕೂಗನ್ನು ಸೂಕ್ಷ್ಮವಾಗಿ ಗ್ರಹಿಸುವ, ಅನುಕರಿಸುವ ಜ್ಞಾನವನ್ನು ಹೊಂದಿರುವವರು. ಕಾಡುಹಂದಿ, ಬರಕ, ಮೊಲ, ಉಡ, ಕಾಡುಕುರಿ, ಚಿಗರೆ, ಜಿಂಕೆ, ಕಡವೆ, ಕಾಡುಬೆಕ್ಕು, ಕಾಡುಕೋಳಿ ಮುಂತಾದ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡಿ ಜೀವನ ಸಾಗಿಸುತ್ತಿದ್ದರು. ಬೇಟೆಗೆ ಬರ್ಚಿ, ಈಟಿ, ದೊಣ್ಣೆ, ಬಲೆಗಳನ್ನು ಉಪಯೋಗಿಸುತ್ತಿದ್ದರು. ಬೇಟೆಗೆ ಸಹಕಾರಿಯಾಗಿ ಬೇಟೆಯ ನಾಯಿಗಳನ್ನೂ ಸಾಕುತ್ತಿದ್ದರು.

ಸರ್ಕಾರ ವನ್ಯಜೀವಿ ರಕ್ಷಣ ಕಾಯ್ದೆಯನ್ನು ಜಾರಿಗೆ ತಂದ ನಂತರ ಬೇಟೆಯಾಡುವುದು ಶಿಕ್ಷಾರ್ಹ ಅಪರಾಧವಾಗಿರುವುದರಿಂದ ಬೇಟೆಯಾಡುವುದನ್ನು ಬಹುತೇಕ ನಿಲ್ಲಿಸಿರುವರು.

೪.೨.೩. ಪಶುಪಾಲನೆ

ಬೇಟೆಗಾರಿಕೆಯಿಂದ ಜೀವನ ಸಾಗದೆಂದು ತಿಳಿದ ತರುವಾಯ ಪಶುಪಾಲನೆಯತ್ತ ಹಕ್ಕಿಪಿಕ್ಕಿಯವರು ವಾಲಿದರು. ಆದರೆ ಕಾಡಿನೊಳಗೆ ಪಶುಗಳನ್ನು ಮೇಯಿಸುವುದು ನಿರ್ಭಂದಗೊಂಡಿದ್ದರಿಂದಲೂ, ರೈತರು ಇವರನ್ನು ದನಕರುಗಳನ್ನು, ಮೇವನ್ನು ಕದಿಯುವವರು ಎಂದು ಗುಮಾನಿಪಟ್ಟು ತೊಂದರೆ ಕೊಡತೊಡಗಿದ್ದರಿಂದ ಪಶುಪಾಲನೆಯಿಂದಲೂ ಇವರು ದೂರವುಳಿಯಬೇಕಾಯಿತು. ಬ್ರಿಟೀಷ್ ಸರ್ಕಾರವು ಇವರನ್ನು ಕೆಲವು ಕಡೆ ಬಂಧಿಸಿಡುವ, ಒಂದೇ ಕಡೆ ನೆಲೆನಿಲ್ಲುವಂತೆ ಪ್ರಯತ್ನ ಮಾಡಿದರು. ಆ ಕಾರಣಕ್ಕಾಗಿಯೇ ಕರ್ನಾಟಕದಲ್ಲಿ ಬಹುತೇಕ ಕಡೆ ಹಕ್ಕಿಪಿಕ್ಕಿಗಳಿಗೆ ಕೃಷಿ ಭೂಮಿ ಇನಾಮಾಗಿ ನೀಡಿ ಕೃಷಿ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಿದರು. ಇದಕ್ಕೆ ಉದಾಹರಣೆಯಾಗಿ ಬಾಗಲಕೋಟೆ, ಧಾರವಾಡದ ಹತ್ತಿರದ ಕಮ್ಮಾರಘಟ್ಟ ಮುಂತಾದ ಊರುಗಳನ್ನೇ ನೋಡಬಹುದು. ಕಂಪ್ಲಿಯಲ್ಲಿ ಪ್ರಸ್ತುತ ನೆಲೆಸಿರುವ ಕೆಲವು ಕುಟುಂಬಗಳ ಪೂರ್ವಜರಿಗೆ ೧೯೦೦ರಲ್ಲಿಯೇ ೭೮ ಎಕರೆಗೂ ಮೇಲ್ಪಟ್ಟು ಕೃಷಿ ಉಪಯೋಗಕ್ಕಾಗಿ ಜಮೀನನ್ನು ಇನಾಮಾಗಿ ನೀಡಿದ ದಾಖಲೆಗಳಿವೆ. ಪ್ರಸ್ತುತ ಈ ಸಮುದಾಯದ ಕುಟುಂಬಗಳ ಹಿಡಿತದಲ್ಲಿ ಆ ಜಮೀನಿರದೆ ಪರರ ಪಾಲಾಗಿದೆ. ಆ ಜಮೀನಿನ ಪಾಣಿಪಟ್ಟು ದಾಖಲೆಗಳು ಇನ್ನೂ ಈ ಸಮುದಾಯದವರ ಹೆಸರಿನಲ್ಲಿರುವವಾದರೂ ಇವರ ಜಮೀನುಗಳನ್ನು ಆಕ್ರಮಿಸಿಕೊಂಡಿರುವ ಪ್ರಬಲ ವರ್ಗಗಳ ವಿರುದ್ಧ ಹೋರಾಡುವ ಸ್ಥಿತಿಯಲ್ಲಿ ಇವರಿರದೆ ಅಸಾಹಾಯಕಾಗಿದ್ದಾರೆ. ಪ್ರಾಯಶಃ ಅಲೆಮಾರಿತನವನ್ನು ಮೈಗೂಡಿಸಿಕೊಂಡಿದ್ದ ಹಕ್ಕಿಪಿಕ್ಕಿಯವರಿಗೆ ಒಂದೇಕಡೆ ನೆಲೆನಿಂತು ಕೃಷಿ ಮಾಡುವುದು ಅಷ್ಟಾಗಿ ಒಗ್ಗಿರಲಿಕ್ಕಿಲ್ಲ. ಕೃಷಿಯ ಪರಿಣತಿ ಇರದೇ ಇರುವುದರಿಂದಲೂ ಇವರು ಕೃಷಿಯಿಂದ ದೂರವುಳಿದಿರುವ ಸಾಧ್ಯತೆಗಳಿವೆ.

ಇಂದು ತಮ್ಮ ಪೂರ್ವಜರ ಭೂಮಿಗಾಗಿ ಆ ಕುಟುಂಬಗಳು ಹಪಾಹಪಿಸುತ್ತಿವೆಯಾದರೂ ಯಾವೊಬ್ಬ ಅಧಿಕಾರಿಗೂ ಅವರ ಅಳಲಿಗೆ ಸ್ಪಂದಿಸದೇ ಇರುವುದು ಕಂಡುಬರುತ್ತಿದೆ.

೪.೨.೪. ಕೃಷಿ ಮತ್ತು ಕೃಷಿಕೂಲಿ

"ಕೃಷಿಯು ಪಶುಗಳಿಗೆ ಹಾಗೂ ಮಾನವನಿಗೆ ಆಹಾರ, ಕೈಗಾರಿಕೆಗಳಿಗೆ ಕಚ್ಚಾಸರಕು ಮತ್ತು ಮಾನವನಿಗೆ ಆಹಾರದೊಡನೆ ಉದ್ಯೋಗವನ್ನು ದೊರಕಿಸುವ ಅರ್ಥವವ್ಯಸ್ಥೆಯ ಪ್ರಾಥಮಿಕ ವಲಯವಾಗಿದೆ. ಕೃಷಿಯು ಮಾನವನಿಗೆ ಎಷ್ಟು ಮಹತ್ವದೆಂದು ಮನವರಿಕೆಯಾದ ಕಾರಣ ಪ್ರಾಚಿನ ಕಾಲದಿಂದಲೂ ಚಿಂತಕರು ಕೃಷಿಗೆ ವಿಶೇಷ ಮಹತ್ವವನ್ನು ನೀಡಿದ್ದರು. ಕೃಷಿಯ ಮಹತ್ವವನ್ನು ಎತ್ತಿಹಿಡಿದ್ದಿದ್ದು ಗ್ರೀಕ್‌ದಾರ್ಶನಿಕ ಪ್ಲೇಟೋ ಅದನ್ನು ಅತ್ಯಂತ ಸಾದುವಾದ ವೃತ್ತಿ ಎಂದು ಕರೆದಿದ್ದಾನೆ. ಪ್ರಮುಖ ರೋಮನ್ ಚಿಂತಕ ಸಿಸಿರೋ ಪ್ರಯೋಜನದಾಯಕವಾದ ಸಾಧನಗಳಲ್ಲಿ ಕೃಷಿ ಉತ್ತಮವಾದದ್ದು. ಅಧಿಕ ಉತ್ಪಾದಕವಾದದ್ದು ಉದರ ಮನಸ್ಸಿನ ಮಾನವನಿಗೆ ಎಚ್ಚು ಸಮರ್ಪಕವಾದದ್ದು ಇನ್ನೊಂದಿಲ್ಲ ಎಂದಿದ್ದಾನೆ. ಭಾರತೀಯ ಮೇದಾವಿ ಕೌಟಿಲ್ಯ ಅರ್ಥವವ್ಯಸ್ಥೆಯನ್ನು ವರ್ತ ಎಂದು ಕರೆದು ಅದರಲ್ಲಿ ಕೃಷಿ ಪಶುಸಂಗೋಪನೆ ಮತ್ತು ವ್ಯಾಪಾರವೆಂಬ ಮೂರು ವಲಯಗಳಿವೆ ಎಂದು ಹೇಳುವ ಮೂಲಕ ಕೃಷಿ ಮತ್ತು ಅದರ ಸಂಬಂಧಿ ಚಟುವಟಿಕೆಗಳಾದ ಪಶುಸಂಗೋಪನೆಯ ಮತಹ್ವವನ್ನು ಎತ್ತಿ ತೋರಿಸಿದ್ದಾನೆ."೧ ಕೃಷಿ ಮತ್ತು ಕೃಷಿಕೂಲಿಯು ಹಕ್ಕಿಪಿಕ್ಕಿಯರ ಮೂಲವೃತ್ತಿಯಾಗಿರಲಿಲ್ಲ. ವನ್ಯಜೀವಿ ರಕ್ಷಣ ಕಾಯ್ದೆ ಜಾರಿಗೆ ತಂದ ನಂತರ ಬಲವಂತವಾಗಿ ಕಾಡುಬಿಟ್ಟು ಬಂದ ಹಕ್ಕಿಪಿಕ್ಕಿಯರು ನಾಡಿಗೆ ಪ್ರವೇಶವಾದ ನಂತರ ಭೂಮಾಲೀಕರ ಆಳುಗಳಾಗಿ ಹೊಲ-ಗದ್ದೆ, ತೋಟ ಮತ್ತು ಎಸ್ಟೇಟ್‌ಗಳಲ್ಲಿ ಕೃಷಿಕೂಲಿ ಕೆಲಸಮಾಡುವುದರ ಮೂಲಕ ತಮ್ಮ ಜೀವನ ನಡೆಸುತ್ತಿದ್ದರು. ಹೀಗೆ ಕೃಷಿ ಕೂಲಿಯನ್ನು ಮಾಡುತ್ತಾ ಬಂದ ಇವರು ಕೃಷಿ ಕೆಲಸವನ್ನು ಕರಗತಮಾಡಿಕೊಂಡರು. ಇದೇ ರೀತಿಯಾಗಿ ಇವರು ಭೂಮಾಲೀಕರ ಅಡಿಯಲ್ಲಿ ಗೇಣಿಮಾಡಿಕೊಂಡಿದ್ದರು. ಈ ರೀತಿಯಾಗಿ ಹಕ್ಕಿಪಿಕ್ಕಿಯವರು ಕೃಷಿ ಮತ್ತು ಕೃಷಿಕೂಲಿಯನ್ನು ಮಾಡುತ್ತ ಜೀವನವನ್ನು ನಡೆಸುತ್ತಿದ್ದರು.

೪.೩. ಅವಲಂಬಿತ ವೃತ್ತಿಗಳು

೪.೩.೧. ಕೃಷಿ ಕೂಲಿ

ಕೃಷಿಕೆಲಸಗಳಲ್ಲಿ ದುಡಿಯುವುದನ್ನು ಕೃಷಿಕೂಲಿ ಎನ್ನಬಹುದು. ಕೃಷಿ ಕೆಲಸವನ್ನು ಮೂಲ ಉದ್ಯೋಗವನ್ನಾಗಿ ಮಾಡಿಕೊಂಡಿರುವುದನ್ನು ಭಾರತದಲ್ಲಿ ನಾವು ಹೆಚ್ಚಾಗಿ ಕಾಣುತ್ತೇವೆ. ಕೃಷಿಯನ್ನು ಎಲ್ಲಾ ವರ್ಗದವರು ಮಾಡುವುದನ್ನು ನೋಡುತ್ತೇವೆ. ಹಕ್ಕಿಪಿಕ್ಕಿಯವರು ಮೂಲತಃ ಬಡವರಾಗಿದ್ದು ಇವರಿಗೆ ಆಸ್ತಿಯ ಪರಿಕಲ್ಪನೆ ಇದ್ದಿಲ್ಲ. ಮತ್ತು ಕೃಷಿ ಭೂಮಿಯನ್ನು ಹೊಂದಿರುವುದು ತೀರ ಕಡಿಮೆ. ಇಂದು ಇವರು ಬೇರೆಯವರ ಹೊಲಗದ್ದೆಗಳಲ್ಲಿ ದುಡಿಯುವುದನ್ನು ಹೆಚ್ಚಾಗಿ ನೋಡುತ್ತೇವೆ. ಗಂಡಸರು ಮತ್ತು ಹೆಂಗಸರು ಇಬ್ಬರೂ ಸಹ ಕೃಷಿ ಕೆಲಸ ಮಾಡುವುದನ್ನು ಕಾಣುತ್ತೇವೆ. ಬೆಳಗಿನ ಜಾವ ತಮ್ಮ ಮನೆಯ ಕೆಲಸಗಳನ್ನು ಮುಗಿಸಿಕೊಂಡು ಊಟದ ಬುತ್ತಿಯನ್ನು ಕಟ್ಟಿಕೊಂಡು ಕೃಷಿಕೆಲಸಕ್ಕೆ ಹೋಗುವ ಹಕ್ಕಿಪಿಕ್ಕಿಯರನ್ನು ಸಾಮಾನ್ಯವಾಗಿ ಕಾಣುತ್ತೇವೆ. ಬೆಳಗ್ಗೆ ಎಂಟರಿಂದ ಸಂಜೆ ಐದು ಗಂಟೆಯವರೆಗೆ ಕೃಷಿ ಕೂಲಿ ಕೆಲಸ ಮಾಡುತ್ತಾರೆ. ಕೆಲಸವನ್ನು ಮುಂಗಾರು ಮಳೆಯ ಪ್ರಾರಂಭದಿಂದ ಬೀಜ ಬಿತ್ತುವುದರಿಂದ ಆರಂಭಗೊಂಡು ಪೈರು ಕೊಯ್ದು ರಾಶಿ ಮಾಡುವು ವರೆಗೆ ಕೆಲಸವು ಸಿಗುತ್ತದೆ.

೪.೪. ಕೃಷಿ ಕಾರ್ಮಿಕರು

"ಬೇರೆಯವರ ಹೊಲಗದ್ದೆಗಳಲ್ಲಿ ಕೂಲಿಗಾಗಿ ದುಡಿಯುವ ಕಾರ್ಮಿಕರನ್ನು ಕೃಷಿಕಾರ್ಮಿಕರೆಂದು ಕರೆಯಲಾಗುತ್ತದೆ. ಕೃಷಿ ಕಾರ್ಮಿಕರಲ್ಲಿ ಭೂರಹಿತ ಕೃಷಿ ಕಾರ್ಮಿಕರು ಮತ್ತು ಅತೀ ಸಣ್ಣ ಭೂಹಿಡುವಳಿ ಇರುವ ಕಾರ್ಮಿಕರು ಎಂಬ ವರ್ಗಗಳಿವೆ. ಭೂರಹಿತ ಕೃಷಿಕಾರ್ಮಿಕರು ಬೇರೆಯಾವುದೇ ಅದಾಯದ ಮೂಲಗಳು ಇಲ್ಲದಿರುವುದು ಅವರು ಕೂಲಿಗಾಗಿ ಸದಾ ಬೇರೆಯವರ ಭೂಮಿಯಲ್ಲಿ ದುಡಿಯುತ್ತಾರೆ. ಆದರೆ ಅತೀ ಸಣ್ಣ ಭೂಹಿಡುವಳಿ ಹೊಂದಿರುವ ರೈತರು ತಮ್ಮ ಭೂಮಿಯಿಂದ ಬರುವ ಅದಾಯ ಜೀವನ ಸಾಗಿಸಲು ಸಾಲದುಬರುವುದರಿಂದ ತಮ್ಮ ಬಿಡುವಿನ ವೇಳೆಯಲ್ಲಿ ಬೇರೆಯವರ ಭೂಮಿಯಲ್ಲಿ ಕೂಲಿಗಾಗಿ ದುಡಿಯುತ್ತಾರೆ."೨ ಈ ರೀತಿಯಾಗಿ ಹಕ್ಕಿಪಿಕ್ಕಿಯರು ಕೇವಲ ದಿನದ ಊಟಕ್ಕಾಗಿ ಕಂಪ್ಲಿಯ ಸುತ್ತ ಮುತ್ತ ಹೊಲ, ಗದ್ದೆ, ತೋಟಗಳಲ್ಲಿ ಕೃಷಿ ಕೂಲಿಗಳಾಗಿ ದುಡಿಯುತ್ತಿರುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ.

೪.೪.೧. ಹಕ್ಕಿಪಿಕ್ಕಿಯರು ಮಾಡುವ ಕೃಷಿಕೂಲಿ ಕೆಲಸಗಳು

೪.೪.೧.೧. ಕಳೆ ತೆಗೆಯುವುದು: ಹೊಲಗದ್ದೆಗಳಿಗೆ ಬೀಜ ಬಿತ್ತನೆ ಮಾಡುವ ಮೊದಲು ಹೊಲಗದ್ದೆಗಳನ್ನು ಸ್ವಚ್ಚಮಾಡುವ ಕೂಲಿ ಕೆಲಸಕ್ಕೆ ಹಕ್ಕಿಪಿಕ್ಕಿಯವರು ಹೋಗುತ್ತಾರೆ. ಹೊಲಗದ್ದೆಗಳಲ್ಲಿ ಕಸಕಡ್ಡಿಗಳನ್ನು, ಕಲ್ಲುಗಳನ್ನು ಆರಿಸುವುದು, ಪೈರಿನ ಮಧ್ಯ ಬೆಳೆದ ಕಳೆ(ಹುಲ್ಲು) ತೆಗೆಯುವುದು ಹಾಗು ಇತರೆ ಕೆಲಸಗಳನ್ನು ಮಾಡುತ್ತಾರೆ.

೪.೪.೧.೨. ಬೀಜ ಬಿತ್ತುವುದು: ಕೃಷಿಯ ಕೆಲಸದ ಪ್ರಾರಂಭಿಕ ಕಾಲ ಮುಂಗಾರು ಮಳೆಯ ಸಂದರ್ಭದಲ್ಲಿ ಭೂ ಮಾಲಿಕರ ಹೊಲಗದ್ದೆಗಳಲ್ಲಿ ಬೀಜ ಬಿತ್ತುವುದಕ್ಕೆ ಹಕ್ಕಿಪಿಕ್ಕಿಯರು ಹೋಗುತ್ತಾರೆ.

೪.೪.೧.೩. ಗೊಬ್ಬರ ಹಾಕುವುದು: ಬೆಳದ ಬೆಳಗಳು ಚೆನ್ನಾಗಿ ಬರಲು, ಒಳ್ಳೆಯ ಪಸಲನ್ನು ಕೊಡಲು ವಿವಿಧ ರೀತಿಯ ಗೊಬ್ಬರಗಳನ್ನು ಹಾಕುವ ಕೆಲಸಗಳಿಗೆ ಹಕ್ಕಿಪಿಕ್ಕಿಯರು ಹೋಗುತ್ತಾರೆ.

೪.೪.೧.೪. ಹತ್ತಿ ಬಿಡಿಸುವುದು ಮತ್ತು ಮೆಣಸಿನ ಕಾಯಿ ಕೀಳುವುದು: ಹಕ್ಕಿಪಿಕ್ಕಿಯರು ಹತ್ತಿ ಬಿಡಿಸುವ ಮತ್ತು ಮೆಣಸಿನ ಕಾಯಿಯನ್ನು ಕೀಳುವ ಕೃಷಿಕೆಲಸಕ್ಕೆ ಕೃಷಿ ಆಳುಗಳಾಗಿ ಹೋಗುತ್ತಾರೆ.

೪.೪.೧.೫. ಬೆಳೆಗಳಿಗೆ ಔಷಧಿ ಸಿಂಪಡಿಸುವ: ಬೆಳೆದ ಬೆಳೆಗಳನ್ನು ಕಾಪಾಡಿಕೊಳ್ಳುವುದಕ್ಕೆ ಕೃಷಿಕರು ಬೆಳೆಗಳಿಗೆ ವಿವಿಧ ರೀತಿಯ ರಾಸಾಯನಿಕ ಔಷಧಿಗಳನ್ನು ಸಿಂಪಡಿಸುತ್ತಾರೆ. ಈ ರೀತಿಯ ಕೆಲಸಕ್ಕೆ ಹಕ್ಕಿಪಿಕ್ಕಿಯರು ಹೆಚ್ಚಾಗಿ ಹೋಗುತ್ತಾರೆ.

೪.೪.೧.೬. ಕಬ್ಬು ಕಟಾವು ಮಾಡುವುದು: ಈ ಭಾಗದಲ್ಲಿ ಕಬ್ಬು ಹೆಚ್ಚಾಗಿ ಬೆಳೆಯುವುದರಿಂದ ಕಬ್ಬು ಕಟಾವು ಮಾಡುವ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಯ ಪರವಾಗಿ ಕೂಲಿಯ ಆಳುಗಳಂತೆ ಗದ್ದೆಗಳಿಗೆ ಕಬ್ಬು ಕಟಾವು ಮಾಡುವುದಕ್ಕೆ ಹೋಗುತ್ತಾರೆ.

೪.೪.೧.೭. ಹೊಲಗದ್ದೆ ಮತ್ತು ತೋಟವನ್ನು ಕಾಯುವುದು: ಬೆಳದ ಬೆಳೆಯನ್ನು ಕಾಯುವ ಕೆಲಸಕ್ಕೆ ಹಕ್ಕಿಪಿಕ್ಕಿಯರು ಕಂಪ್ಲಿಯ ಸುತ್ತಮುತ್ತ ಹಗೂ ಬೆರೆ ಕಡೆಗೆ ಹೆಚ್ಚಾಗಿ ಹೋಗುತ್ತಾರೆ. ಹಗಲು ಮತ್ತು ರಾತ್ರಿ ಎರಡು ಸಮಯದಲ್ಲಿ ಇವರು ಹೊಲಗದ್ದೆ ಮತ್ತು ತೋಟವನ್ನು ಕಾಯುತ್ತಾರೆ.

ಈ ಮೇಲೆ ತಿಳಿಸಿದ ಎಲ್ಲಾ ಕೃಷಿ ಕೆಲಸಕ್ಕೆ ದಿನಕ್ಕೆ ೧೦೦-೨೦೦ ರೂಪಾಯಿ ಹಣ ಮಾತ್ರ ದೊರೆಯುತ್ತದೆ.

೪.೫. ಕೃಷಿಕಾರ್ಮಿಕರ ಪ್ರಮುಖ ಸಮಸ್ಯೆಗಳು

೪.೫.೧. ಅಪೂರ್ಣ ಉದ್ಯೋಗ: ಕೃಷಿ ಕಾರ್ಮಿಕರು ಹೆಚ್ಚಾಗಿ ಋತುಮಾನಕ್ಕೆ ತಕ್ಕಂತೆ ತಮ್ಮ ಉದ್ಯೋಗವನ್ನು ಮಾಡುತ್ತಾರೆ. ಇವರಿಗೆ ಮಳೆಗಾಲದಲ್ಲಿ(ಕೃಷಿ ಆರಂಭದ ಕಾಲದಲ್ಲಿ) ಹೆಚ್ಚಾಗಿ ಕೆಲಸ ಸಿಗುತ್ತದೆ. ಕೃಷಿ ಆರಂಭದ ಕಾಲ ಮುಗಿದನಂತರ ಕೃಷಿಕಾರ್ಮಿಕರಿಗೆ ಹೆಚ್ಚು ಉದ್ಯೋಗಗಳು ಸಿಗುವುದಿಲ್ಲ. ಹೀಗಾಗಿ ಕೃಷಿಕಾರ್ಮಿಕರು ಅಪೂರ್ಣ ಉದ್ಯೋಗಿಗಳು ಎಂದು ಹೇಳಬಹುದು.

೪.೫.೨. ಕೆಳಸ್ಥರ ಜೀವನ ಮಟ್ಟ: ಭೂಮಾಲಿಕರು ಇವರಿಂದ ಹೆಚ್ಚು ದುಡಿಸಿಕೊಂಡು ಕಡಿಮೆ ಕೂಲಿ ನೀಡುವುದರಿಂದ ಇವರ ಜೀವನ ಮಟ್ಟವು ಕೆಳಸ್ಥರವಾಗಿದೆ.

೪.೫.೩. ಹೆಚ್ಚು ಪರಿಶ್ರಮ: ಕೃಷಿಕಾರ್ಮಿಕ ಕೆಲಸವು ಹೆಚ್ಚು ಪರಿಶ್ರಮದಿಂದ ಕೂಡಿರುತ್ತದೆ. ಮಳೆ, ಬಿಸಿಲು, ಚಳಿ ಇದ್ಯಾವುದನ್ನು ಲೆಕ್ಕಿಸದೆ ತಮ್ಮ ಕೆಲಸವನ್ನು ನಿರ್ವಹಿಸಬೇಕಾದುದ್ದರಿಂದ ಕೃಷಿಕಾರ್ಮಿಕ ಕೆಲಸವು ಹೆಚ್ಚು ಪರಿಶ್ರಮದಾಯಕವಾಗಿರುತ್ತದೆ.

೪.೫.೪. ಅನಕ್ಷರತೆ: ಬಹುತೇಕ ಕೃಷಿಕಾರ್ಮಿಕರು ಅನಕ್ಷರಸ್ಥರಾಗಿರುತ್ತಾರೆ. ಈ ಕಾರಣದಿಂದಲೆ ಕೃಷಿ ಕಾರ್ಮಿಕ ವೃತ್ತಿಯನ್ನು ಬಿಟ್ಟು ಬೇರೆ ಕೆಲಸಮಾಡುವ ಕೌಶಲ್ಯವು ಇವರ ಬಳಿ ಇರುವುದಿಲ್ಲ. ಆದುದ್ದರಿಂದ ಅನಕ್ಷರಸ್ಥರು ಬಹುತೇಕರು ಕೃಷಿಕಾರ್ಮಿಕರಾಗಿರುವುದನ್ನು ಕಾಣಬಹುದು.

೪.೫.೫. ಸಾಲ: ಕೃಷಿಕಾರ್ಮಿಕರು ಹೆಚ್ಚು ದುಡಿದರು, ಸಹ ಕಡಿಮೆ ಕೂಲಿ ಸಿಗುವುದರಿಂದ ಸಾಗಿಸಲು ಕೆಲವೊಂದು ಸಮಯದಲ್ಲಿ ತಮ್ಮ ಬಳಿ ಇರುವ ಹಣ ಸಾಲದೆ ಅನಿವಾರ್ಯವಾಗಿ ತಮ್ಮ ಜೀವನವನ್ನು ನಿರ್ವಹಿಸಲು ಸಾಲದ ಮೊರೆ ಹೋಗುತ್ತಾರೆ, ಹಾಗೂ ಸಾಲಗಾರರಾಗುತ್ತಾರೆ.

೪.೬. ಕೃಷಿ ಕಾರ್ಮಿಕರ ಸುಧಾರಣೆಗಾಗಿ ಸರ್ಕಾರ ಅಮ್ಮಿಕೊಂಡಿರುವ ಯೋಜನೆಗಳು

ಕೃಷಿ ಕಾರ್ಮಿಕರ ಪರಿಸ್ಥಿತಿ ಕರ್ನಾಟಕದಲ್ಲಿ ತುಂಬಾ ಸೋಚನಿಯವಾಗಿರುವುದರಿಂದ ಈ ಕೃಷಿಕಾರ್ಮಿಕ ಸ್ಥಿತಿಗಳನ್ನು ಸುಧಾರಿಸಲು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ ಅವುಗಳಲ್ಲಿ ಪ್ರಮುಖವಾದವು ಈ ಕೆಳಗಿನಂತಿವೆ.

೪.೬.೧. ಕನಿಷ್ಟ ಕೂಲಿ ಕಾಯ್ದೆ: ಕೃಷಿ ಕಾರ್ಮಿಕರಿಗಾಗಿ ಸರ್ಕಾರವು ಕನಿಷ್ಟ ಕೂಲಿ ಕಾಯ್ದೆಯನ್ನು ಜಾರಿಗೊಳಿಸಿದೆ ರಾಜ್ಯಸರ್ಕಾರ ಕೃಷಿ ಕಾರ್ಮಿಕರಿಗಾಗಿ ಕನಿಷ್ಟ ಕೂಲಿಯನ್ನು ನಿಗಧಿಗೊಳ್ಳಿಸಿದೆ. ಆದರೆ ಇದರ ಅನುಷ್ಟಾನದಲ್ಲಿ ಕೆಲವು ತೊಂದರೆಗಳಿವೆ.

೪.೬.೨. ಜೀತಪದ್ಧತಿಯ ನಿರ್ಮೂಲನೆ: ಕರ್ನಾಟಕ ಸರ್ಕಾವು ಜೀತಪದ್ಧತಿಯ ನಿರ್ಮೂಲನೆಗಾಗಿ ೧೯೭೬ರಲ್ಲಿ ಜಿತವಿಮುಕ್ತಿ ಶಾಸನವನ್ನು ಜಾರಿಗೆ ತಂದಿದೆ. ಈ ಕಾಯ್ದೆಯಿಂದ ಅನೇಕ ಜೀತ ಕಾರ್ಮಿಕರನ್ನು ವಿಮುಕ್ತಗೊಳಿಸಿ ಮರುವಸತಿ ಕಲ್ಪಿಸಿದೆ ಆದರೂ ಇಂದಿಗೂ ಸಹ ಅನೇಕ ಕಡೆಗಳಲ್ಲಿ ಜೀತಪದ್ಧತಿಯು ಅಸ್ಥಿತ್ವದಲ್ಲಿರುವುದನ್ನು ಕಾಣುತ್ತೇವೆ.

೪.೬.೩. ಭೂರಹಿತ ಕೃಷಿಕಾರ್ಮಿಕರಿಗೆ ಭೂಮಿ ಹಂಚಿಕೆ: ಕೃಷಿಕಾರ್ಮಿಕರ ಆರ್ಥಿಕ ಜೀವನವನ್ನು ಉತ್ತಮಗೊಳಿಸಲು ಸರ್ಕಾರವು ಭೂರಹಿತ ಕೃಷಿಕಾರ್ಮಿಕರಿಗೆ ಕೃಷಿ ಭೂಮಿ ಹಂಚುವ ಯೋಜನೆಯನ್ನು ಹಮ್ಮಿಕೊಂಡಿದೆ.

೪.೬.೪. ನಿವೇಶನ ಸೌಲಭ್ಯ: ರಾಜ್ಯದಲ್ಲಿ ಕೃಷಿಕಾರ್ಮಿಕರಿಗೆ ಅವರ ಜೀವನವನ್ನು ಸದೃಢವಾಗಿಸಲು ಸರ್ಕಾರವು ಕೃಷಿಕಾರ್ಮಿಕರಿಗಾಗಿ ನಿವೇಶನವನ್ನು ನೀಡುವ ಯೋಜನೆಯನ್ನು ಜಾರಿಗೆ ತಂದಿದೆ ಆಶ್ರಯ, ಅಂಬೇಡ್ಕರ್ ಅವಾಸ್, ವಸತಿ ಯೋಜನೆಗಳಡಿಯಲ್ಲಿ ಕೃಷಿಕಾರ್ಮಿಕರಿಗೆ ನಿವೇಶನಗಳನ್ನು ನೀಡುವ ಹಾಗೂ ಗೃಹನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ.

೪.೬.೫. ಉದ್ಯೋಗ ಯೋಜನೆಗಳು: ಸರ್ಕಾರಗಳು ವಿವಿಧ ಪಂಚವಾರ್ಷಿಕ ಯೋಜನೆಗಳಡಿಯಲ್ಲಿ ಅನೇಕ ಉದ್ಯೋಗ ಯೋಜನೆಗಳನ್ನು ಜಾರಿಗೆ ತಂದಿದೆ ಅವುಗಳಲ್ಲಿ ಮುಖ್ಯವಾದವು ಗ್ರಾಮೀಣ ಕೇಲಸ ಕಾರ್ಯಕ್ರಮ, ಉದ್ಯೋಗ ಭರವಸೆ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ, ಕೂಲಿಗಾಗಿ ಕಾಳು ಯೋಜನೆ, ಜವಹರ್ ರೋಜಗಾರ್ ಯೋಜನೆ, ಗ್ರಾಮೀಣ ಭೂರಹಿತ ಉದ್ಯೋಗ ದೃಢೀಕರಣ ಯೋಜನೆ ಮುಂತಾದವುಗಳು. ಇತ್ತೀಚಿನ ದಿನಗಳಲ್ಲಿ ಕೇಲವ ಉದ್ಯೋಗ ಯೋಜನೆಗಳನ್ನು ಪರಿಷ್ಕರಿಸಿ ಹೊಸ ಯೋಜನೆಗಳನ್ನು ಘೋಷಿಸಲಾಗಿದೆ.

೪.೬.೬. ವಿಶೇಷ ಅಭಿವೃದ್ಧಿ ಯೋಜನೆಗಳು: ಕೃಷಿ ಕಾರ್ಮಿಕ ಹಾಗೂ ಸಣ್ಣ ಹಿಡುವಳಿದಾರರ ಸ್ಥಿತಿಗತಿಗಳನ್ನು ಸುಧಾರಿಸಲು ಸರ್ಕಾರವು ಕೆಲವೊಂದು ಯೋಜನೆಗಳನ್ನು ಜಾರಿಗೊಳ್ಳಿಸಿದೆ ಇದರಲ್ಲಿ ಸಣ್ಣ ರೈತರ ಅಭಿವೃದ್ಧಿ ಸಂಸ್ಥೆ. (SFDA), ಅತೀ ಸಣ್ಣ ರೈತರ ಕೃಷಿಕಾರ್ಮಿಕ ಅಭಿವೃದ್ಧಿ ಸಂಸ್ಥೆ (MFAL), ಬರಪ್ರದೇಶ ಯೋಜನೆ (DPAP), ಮುಂತಾದ ವಿಶೇಷ ಅಭಿವೃದ್ಧಿ ಯೋಜನೆಗಳನ್ನು ಸರ್ಕಾರ ಜಾರಿಗೆ ತಂದಿದೆ.

೪.೭. ಕೃಷಿಯೇತರ ಕೂಲಿ ಕೆಲಸ: ಕೃಷಿ ಕೆಲಸವನ್ನು ಬಿಟ್ಟು ಇನ್ನು ಹಲವಾರು ಕೆಲಸಗಳಲ್ಲಿ ಹಕ್ಕಿಪಿಕ್ಕಿಯರು ದುಡಿಯವುದನ್ನು ಕಾಣುತ್ತೇವೆ ಹೀಗೆ ತಮ್ಮ ಜೀವನ ನಿರ್ವಣೆಗೆ ಹಕ್ಕಿಪಿಕ್ಕಿಯವರು ಅನೇಕ ಕೃಷಿಯೇತರ ವೃತ್ತಿಯನ್ನು ಮಾಡುತ್ತಾರೆ,

೪.೭.೧. ಕಟ್ಟಡ ನಿರ್ಮಾಣ: ಹಕ್ಕಿಪಿಕ್ಕಿಯವರಲ್ಲಿ ಕಟ್ಟಡ ನಿರ್ಮಾಣ ಕೆಲಸಕ್ಕೆ ಹೋಗುವುದನ್ನು ಹೆಚ್ಚಾಗಿ ಕಾಣುತ್ತೇವೆ, ಕಟ್ಟಡ ನಿರ್ಮಾಣದಲ್ಲಿ ವಿವಿಧ ರೀತಿಯ ಕೆಲಸಗಳನ್ನು ನಿರ್ವಾಹಿಸುತ್ತಾರೆ.

೪.೭.೨. ಮನೆಕೆಲಸ: ಹಕ್ಕಿಪಿಕ್ಕಿ ಮಹಿಳೆಯರು ಬೇರೆಯವರ ಮನೆಗಳಿಗೆ ಮನೆಕೆಲಸಕ್ಕೆ ಹೋಗುವುದನ್ನು ನೋಡುತ್ತೇವೆ. ಹೀಗೆ ಕೃಷಿ ಕೆಲಸವನ್ನು ಬಿಟ್ಟರೆ ಮನೆ ಕೆಲಸ ಮಾಡುವ ಕಾರ್ಯಕ್ಕೆ ಹೆಂಗಸರು ಹೋಗುವುದನ್ನು ನೋಡುತ್ತೇವೆ.

೪.೭.೪. ಸಣ್ಣ ವ್ಯಾಪಾರ: ಬೆರಳೆಣಿಕೆಯಷ್ಟು ಜನ ಸಣ್ಣ ವ್ಯಾಪಾರವನ್ನು ಮಾಡುತ್ತಾರೆ. ಚಿಕ್ಕಪುಟ್ಟ ಬೀಡಿ, ಪಾನ್ ಅಂಗಡಿಗಳನ್ನು ಇಟ್ಟುಕೊಂಡಿರುವುದನ್ನು ಕಾಣುತ್ತೇವೆ. ಇವುಗಳು ಸಣ್ಣಪ್ರಮಾಣದ ಬಂಡವಾಳದ ಅಂಗಡಿಗಳು ಆಗಿವೆ.

೪.೭.೫. ಕೃಷಿಯೇತರ ಕೆಲಸಗಳು

೪.೭.೫.೧. ಪಶುಪಾಲನೆ

ಪಶುಪಾಲನೆ ಎಂಬುದು ಹಕ್ಕಿಪಿಕ್ಕಿಯವರು ಇತ್ತೀಚೆಗೆ ರೂಡಿಸಿಕೊಂಡಿದ್ದಾರೆ. ಆರ್ಥಿಕವಾಗಿ ಸ್ವಲ್ಪಮಟ್ಟಿಗೆ ಸಧೃಡವಾಗುವುದಕ್ಕೆ ಪಶುಪಾಲನೆಯನ್ನು ಮಾಡುತ್ತಾರೆ. ಕುರಿ, ಕೋಳಿ, ಮೇಕೆ, ಹಂದಿ ಸಾಕಾಣಿಕೆ ಇತ್ತೀಚೆಗೆ ಹಕ್ಕಿಪಿಕ್ಕಿಯರಲ್ಲಿ ಕೋಳಿ, ಕುರಿ, ಮೇಕೆ ಮತ್ತು ಹಂದಿ ಸಾಕಾಣಿಕೆ ಮಾಡುತ್ತಿದ್ದಾರೆ. ಸ್ವಲ್ಪಪ್ರಮಾಣದಲ್ಲಿ ಆದಾಯ ತಂದುಕೊಡುವಂತಹ ಕೆಲಸಗಳು ಇವುಗಳು ಆಗಿರುವುದರಿಂದ ಈ ವೃತ್ತಿಯನ್ನು ಹಕ್ಕಿಪಿಕ್ಕಿಯರಲ್ಲಿ ಬೆರಳೆಣಿಕೆಯಷ್ಟು ಜನರು ಪಶುಪಾಲನೆ ಮಾಡುತ್ತಿದ್ದಾರೆ. ಕುರಿ, ಮೇಕೆ, ಸಾಕುತ್ತಿದ್ದಾರೆ ಕೆಲವರು ಮನೆ ಉಪಯೋಗಕ್ಕೆ ಕುರಿ ಮೇಕೆಯನ್ನು ಸಾಕುತ್ತಿದ್ದಾರೆ.

ಈ ಮೇಲ್ಕಂಡಂತೆ ತಿಳಿಸಿದಲ್ಲದೆ ಇತರೆ ಕೆಲಸಗಳನ್ನು ಹಕ್ಕಿಪಿಕ್ಕಿಯರು ನಿರ್ವಾಹಿಸುತ್ತಾರೆ. ರಸ್ತೆ ಕಾಮಗಾರಿ, ವಾಹನ ಚಾಲನೆ, ಸಣ್ಣಕಾರ್ಖಾನೆಗಳಲ್ಲಿ ಕೂಲಿ ಕೆಲಸ, ಐಸ್‌ಕ್ರೀಮ್ ಮಾರುವಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಇವುಗಳೆಲ್ಲವು ಹಕ್ಕಿಪಿಕ್ಕಿಯವರು ನಿರ್ವಾಹಿಸುತ್ತಿರುವ ಅವಲಂಬಿತ ಆರ್ಥಿಕ ವೃತ್ತಿಳಾಗಿವೆ. ಈ ಕೆಲಸಗಳು ಹೆಚ್ಚು ದೈಹಿಕ ಶ್ರಮದ ಕೆಲಸಗಳಾಗಿವೆ. ಇಷ್ಟೆಲ್ಲಾ ಕಷ್ಟದ ಕೆಲಸಗಳನ್ನು ಹಕ್ಕಿಪಿಕ್ಕಿಯರು ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳಲು ತಮ್ಮ ಜೀವನ ನಡೆಸಲು ಮಾಡುತ್ತಿದ್ದಾರೆ. ಹೀಗೆ ದುಡಿದರೂ ಸಹ ಹಕ್ಕಿಪಿಕ್ಕಿಯರಿಗೆ ಸಿಗುವ ಕೂಲಿ ಸಂಬಳ ಕಡಿಮೆ ಇದೆ. ಮತ್ತು ಆರ್ಥಿಕ ಜೀವನ ಸಹ ದೊಡ್ಡಪ್ರಮಾಣದಲ್ಲಿ ಬದಲಾಗಿಲ್ಲ.

೪.೮. ಹಕ್ಕಿಪಿಕ್ಕಿಯರ ಆರ್ಥಿಕ ಸಮಸ್ಯೆಗಳು

೧. ಹಕ್ಕಿಪಿಕ್ಕಿಯವರ ಪ್ರಸ್ತುತ ಜೀವನ ನೋಡಿದರೆ ಇವರು ಆರ್ಥಿಕವಾಗಿ ತೀರ ಹಿಂದುಳಿದವರಾಗಿದ್ದಾರೆ.

೨. ಶಿಕ್ಷಣ ಪಡೆಯದಿರುವುದು ಕೂಡ ಹಕ್ಕಿಪಿಕ್ಕಿಯರು ಆರ್ಥಿಕವಾಗಿ ಹಿಂದುಳಿಯಲು ಒಂದು ಬಹುಮುಖ್ಯ ಕಾರಣವಾಗಿದೆ.

೩. ಹಕ್ಕಿಪಿಕ್ಕಿಯರಲ್ಲಿ ಬಹುತೇಕರು ಕೃಷಿ ಕೂಲಿ ಹಾಗೂ ಕೃಷಿಯೇತರ ಕೂಲಿ ಆಳುಗಳಾಗಿ ದುಡಿಯುತ್ತಿದ್ದು ಇವರು ದುಡಿದು ತರುವ ಹಣ ಇವರ ಜೀವನ ನಿರ್ವಹಣೆಗೆ ಕಷ್ಟವಾಗಿರುವುದು ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿದೆ.

೪. ಸ್ಥಳೀಯವಾಗಿ ಕೂಲಿ ಕೆಲಸ ಸಿಗದ ಸಂದರ್ಭದಲ್ಲಿ ಉದ್ಯೋಗವನ್ನು ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗಿ ಕಡಿಮೆ ಸಂಬಳಕ್ಕೆ ದುಡಿಯುವುದು ಕಂಡುಬರುತ್ತದೆ.

೫. ಸರ್ಕಾರದ ಯೋಜನೆಗಳು ಹಕ್ಕಿಪಿಕ್ಕಿಯರಿಗೆ ತಲುಪುವಲ್ಲಿ ವಿಫಲವಾಗುತ್ತಿರುವುದು.

೬. ಬಹುತೇಕ ಹಕ್ಕಿಪಿಕ್ಕಿಯರು ವಾಸುಸಿತ್ತಿರುವ ವಸತಿಗಳು ದುಃಸ್ಥಿತಿಯಲ್ಲಿವೆ. ಇವರಿಗೆ ಸರ್ಕಾರದ ವಸತಿ ಯೋಜನೆಗಳಿಂದ ಯಾವುದೇ ರೀತಿಯ ಉಪಯೋಗವಾಗಿಲ್ಲದಿರುವುದು.

೭. ಸಣ್ಣವ್ಯಾಪಾರವನ್ನು ಮಾಡಲು ಬ್ಯಾಂಕ್‌ಗಳಿಂದ ಯಾವುದೇ ರೀತಿಯ ಸಾಲದ ಸೌಲಭ್ಯ ಸಿಗದಿರುವುದು.

೮. ದುಡಿದ ಸಂಬಳ ಜೀವನ ನಿರ್ವಾಹಣೆಗೆ ಸಾಕಾಗದೆ ಅನಿವಾರ್ಯವಾಗಿ ಜೀವನ ನಿರ್ವಾಹಿಸಲು ಬಡ್ಡಿಸಾಲ ತೆಗೆದುಕೊಂಡು ಸಾಲದ ಸುಳಿಗೆ ಸಿಕ್ಕಿರುವುದು.

೯. ಅನಕ್ಷರಸ್ಥರೇ ಹೆಚ್ಚು ಇರುವ ಹಕ್ಕಿಪಿಕ್ಕಿಯರು ಸರ್ಕಾರದ ಅಭಿವೃದ್ಧಿ ಯೋಜನೆಗಳ ಬಗ್ಗೆ ಅರಿವಿಲ್ಲದಿರುವುದು. ಯೋಜನೆಗಳನ್ನು ಪಡೆಯುವ ಕ್ರಮ ತಿಳಿಯದಿರುವುದು.

ದುಡಿಯುವ ವರ್ಗದವರಾಗಿರುವ ಹಕ್ಕಿಪಿಕ್ಕಿಯರಿಂದ ಹೆಚ್ಚು ಕೆಲಸ ಮಾಡಿಸಿಕೊಂಡು ಕಡಿಮೆ ಕೂಲಿ ನೀಡುತ್ತಿರುವುದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಂಡ ಸತ್ಯವಾಗಿದೆ.

೪.೯. ವಲಸೆ ವೃತ್ತಿ

ಸಾಮಾನ್ಯವಾಗಿ ಹಕ್ಕಿಪಿಕ್ಕಿಯವರು ಕೃಷಿ ಕೂಲಿ ಕೆಲಸಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಕೃಷಿ ಚಟುವಟಿಕೆ ಸಂದರ್ಭದಲ್ಲಿ ಇವರಿಗೆ ಹೆಚ್ಚು ಕೆಲಸ ಸಿಗುತ್ತದೆ. ಹೀಗೆ ಕೃಷಿ ಕೆಲಸಕ್ಕೆ ಇವರು ಕಂಪ್ಲಿ ಸುತ್ತಮುತ್ತ ಹೋಗುವುದಲ್ಲದೆ ಬೇರೆ ಜಿಲ್ಲೆಗಳಿಗೆ ಹಾಗೂ ಬೇರೆ ರಾಜ್ಯಗಳಿಗೂ ಹೋಗುವುದುಂಟು. ಹೆಚ್ಚಾಗಿ ರಾಯಚೂರು ಸುತ್ತಮುತ್ತ ಪ್ರದೇಶಗಳಲ್ಲಿ ಮೆಣಸಿನ ಕಾಯಿಯನ್ನು ಕೀಳುವುದಕ್ಕೆ ಹೋಗುತ್ತಾರೆ. ಸ್ಥಳೀಯವಾಗಿ ಕೆಲಸ ಸಿಗದಿದ್ದ ಸಮಯದಲ್ಲಿ ನೆರೆಯ ರಾಜ್ಯವಾದ ಆಂಧ್ರಪ್ರದೇಶಕ್ಕೆ ಕೃಷಿ ಭೂಮಿಗಳಲ್ಲಿ ಕೃಷಿ ಕೂಲಿಯಾಳುಗಳಾಗಿ ಹೋಗುತ್ತಾರೆ. ಈ ಹಕ್ಕಿಪಿಕ್ಕಿಯರು ಕೃಷಿ ಕೂಲಿ ಕೆಲಸಕ್ಕೆ ವಲಸೆ ಹೋಗುವುದನ್ನು ಕಾಣುತ್ತೇವೆ.

ಹಕ್ಕಿಪಿಕ್ಕಿಯರು ಹೆಚ್ಚಾಗಿ ಕೃಷಿ ಕೂಲಿ ಕೆಲಸದ ಆಳುಗಳಾಗಿ ದುಡಿಯವವರೇ ಹೆಚ್ಚು. ಕೃಷಿ ಚಟುವಟಿಕೆಯ ಸಮಯದಲ್ಲಿ ಇವರಿಗೆ ಕೆಲಸವಿರುತ್ತದೆ. ಇನ್ನುಳಿದ ಸಮಯದಲ್ಲಿ ಇವರಿಗೆ ಇವರು ಕೃಷಿಯೇತರ ಕೂಲಿ ಕೆಲಸಗಳನ್ನು ಮಾಡುತ್ತ ಜೀವನ ನಡೆಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಸ್ಥಳೀಯವಾಗಿ ಸಿಗುವ ಕೂಲಿ ಕೆಲಸಗಳನ್ನು ಮಾಡುತ್ತಾರೆ. ಕೆಲಸ ಸಿಗದ ಪರಿಸ್ಥಿತಿ ಇಲ್ಲದಿದ್ದರೆ ಉದ್ಯೋಗವನ್ನು ಹುಡುಕಿಕೊಂಡು ಬೇರೆ ನಗರಗಳಿಗೆ ವಲಸೆ ಹೋಗುತ್ತಾರೆ.

೪.೧೦. ಆರ್ಥಿಕ ಬದಲಾವಣೆ

ಹಕ್ಕಿಪಿಕ್ಕಿಯರಲ್ಲಿ ಬಹುತೇಕರು ತಮ್ಮ ಜೀವನ ನಡೆಸುತ್ತಿರುವುದು ಕೂಲಿ ವೃತ್ತಿಯನ್ನು ಅವಲಂಭಿಸಿದೆ. ಕೃಷಿ ಚಟುವಟಿಕೆಯ ಸಮಯದಲ್ಲಿ ಕೃಷಿ ಕೂಲಿ ಆಳುಗಳಾಗಿ ಹಾಗೂ ಕೃಷಿ ಚಟುವಟಿಕೆಗಳು ಕಡಿಮೆಯಾದ ಸಂದರ್ಭದಲ್ಲಿ ಕೃಷಿಯೇತರ ಕೂಲಿ ಆಳುಗಳಾಗಿ ದಿನಗೂಲಿ ಮಾಡುತ್ತ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಹಕ್ಕಿಪಿಕ್ಕಿಯರ ಆರ್ಥಿಕ ಬದಲಾವಣೆಯನ್ನು ಗಮನಿಸಿದರೆ ಇವರಲ್ಲಿ ಆರ್ಥಿಕ ಬದಲಾವಣೆ ಎಂಬುದು ದೊಡ್ಡ ಪ್ರಮಾಣದಲ್ಲಿ ಕಾಣಲಾಗುವುದಿಲ್ಲ. ಕೂಲಿ ವೃತ್ತಿಯನ್ನೆ ಮಾಡುತ್ತ ಬದುಕುತ್ತಿರುವ ಇವರು ಆರ್ಥಿಕವಾಗಿ ಸದೃಡವಾಗಿಲ್ಲ. ತಾವು ಮಾಡುತ್ತಿರುವ ವೃತ್ತಿಯಿಂದ ಕಡಿಮೆ ಸಂಬಳ ಪಡೆಯುತ್ತಿರುವ ಇವರು ತಮಗೆ ಬರುವ ಆದಾಯದಲ್ಲಿ ದಿನನಿತ್ಯ ಆಹಾರಕ್ಕಾಗಿ ಬೇಕಾಗಿರುವ ಆಹಾರ ಸಾಮಗ್ರಿಗೆ ಬಹುತೇಕ ತಮ್ಮ ಆದಾಯವನ್ನು ವೆಚ್ಚಮಾಡುತ್ತಾರೆ. ಹೀಗಾಗಿ ಹಣ ಉಳಿತಾಯ ಮಾಡುವುದು ಇವರಲ್ಲಿ ತೀರ ಕಡಿಮೆ ಇದೆ. ಬಹುತೇಕರು ತಾವು ಮಾಡುತ್ತಿರುವ ವೃತ್ತಿಯಿಂದ ಸಂತೃಪ್ತರಾಗಿಲ್ಲ.

ಇದಕ್ಕೆ ಕಾರಣ ಹೆಚ್ಚು ಶ್ರಮವಹಿಸುವ ಮಾಡುವ ಕೂಲಿ ವೃತ್ತಿಯಲ್ಲಿ ಇವರು ಪಡೆಯುತ್ತಿರುವುದು ಸಂಬಳ ಕಡಿಮೆ ಇದೆ.

ತಮಗೆ ಬರುವ ಆದಾಯದಲ್ಲಿ ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳಲಾಗುವುದಿಲ್ಲ. ಬಹುತೇಕರಿಗೆ ವಾಸಿಸಲು ಸರಿಯಾದ ವಸತಿ ಇಲ್ಲ. ಗುಡಿಸಲು ಸೀಟ್ ಮನೆಗಳು ಹೆಚ್ಚಾಗಿದ್ದು ಇವು ಸಹ ದುಃಸ್ಥಿತಿಯಲ್ಲಿವೆ. ಇನ್ನೂ ಕೆಲವರಿಗೆ ವಾಸಿಸಲು ಮನೆಯೇ ಇಲ್ಲ. ತಮಗೆ ಬರುವ ಆದಾಯದಲ್ಲಿ ತಮ್ಮ ಮಕ್ಕಳಿಗೆ ಶಿಕ್ಷಣಕೊಡಿಸಲು ಸಹ ಹಕ್ಕಿಪಿಕ್ಕಿಯರಿಗೆ ಕಷ್ಟವಾಗಿದೆ. ಬಹುತೇಕ ಮಕ್ಕಳು ಶಿಕ್ಷಣ ವಂಚಿತರಾಗಿದ್ದಾರೆ. ಇನ್ನೂ ಕೆಲವು ಮಕ್ಕಳನ್ನು ಹತ್ತಿರದ ಸರ್ಕಾರಿ ಶಾಲೆಗಳಿಗೆ ಕಳಿಸುತ್ತಿದ್ದಾರೆ. ಇವೆಲ್ಲವನ್ನು ಗಮನಸಿದಾಗ ಹಕ್ಕಿಪಿಕ್ಕಿಯರಲ್ಲಿ ಆರ್ಥಿಕ ಬದಲಾವಣೆ ಎಂಬುದು ದೊಡ್ಡ ಪ್ರಮಾಣದಲ್ಲಿ ಕಾಣಲಾಗುವುದಿಲ್ಲ. ಇವರೆಲ್ಲರು ಇಂದಿಗೂ ಬಡ ಕೂಲಿ ಕಾರ್ಮಿಕರಾಗಿಯೇ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ.

೪.೧೦.೧. ಸ್ವ-ಸಹಾಯ ಗುಂಪು

ಕಂಪ್ಲಿಯಲ್ಲಿ ವಾಸಿಸುತ್ತಿರುವ ಹಕ್ಕಿಪಿಕ್ಕಿಯರ ಕಾಲೋನಿಯಲ್ಲಿ ಆದರ್ಶ ಮಹಿಳಾ ಸ್ವ-ಸಹಾಯ ಸಂಘ ಹಾಗೂ ಶ್ರೀ ತುಳುಜಾ ಭಾವನಿ ಸ್ವ-ಸಹಾಯ ಎಂಬ ಸಂಘಗಳಿದ್ದು, ಈ ಎರಡು ಸ್ವ-ಸಹಾಯ ಸಂಘಗಳಲ್ಲಿ ತಲ ೨೦ ಸದಸ್ಯರಿದ್ದಾರೆ, ಸರ್ಕಾರದಿಂದ ಈ ಎರಡು ಸಂಘಗಳಿಗೆ ಸರ್ಕಾರದಿಂದ ಸುತ್ತು ನಿಧಿ ಬಂದಿದ್ದು ಸಂಘದ ಸದಸ್ಯರಿಗೆ ನೆರವಾಗಿದೆ. ಹಾಗೂ ಕಾಲೋನಿಯಲ್ಲಿ ನೆಲೆಸಿರುವ ಇತರೆ ಮಹಿಳೆಯರು ಸಹ ಧರ್ಮಸ್ಥಳ ಮಂಜುನಾಥ ಸ್ವಾಮಿ ಸಂಘದಲ್ಲಿ ಹಾಗೂ ಇತರೆ ಸ್ವ-ಸಹಾಯ ಸಂಘಗಳಲ್ಲಿ ಸದಸ್ಯರಿದ್ದಾರೆ. ಈ ಸಂಘಗಳು ಇವರಿಗೆ ಆರ್ಥಿಕವಾಗಿ ಸಹಾಯಕಾರಿಯಾಗಿದೆ.

೪.೧೧. ಭೂ ಹಿಡುವಳಿ

ಪರಿಶಿಷ್ಟ ಪಂಗಡಗಳು ಹೊಂದಿರುವ ಭೂಮಿಗಳು ಸಣ್ಣ ಹಿಡುವಳಿಯ ತುಂಡು ಭೂಮಿಗಳಾಗಿವೆ. ಅದರಲ್ಲೂ ಇವರ ಕೃಷಿ ಭೂಮಿಗಳು ಕೆಳಮಟ್ಟದ ಉತ್ಪಾದನೆಯನ್ನು ನೀಡುವ ಭೂಮಿಗಳೇ ಹೆಚ್ಚಾಗಿವೆ. ಇವರು ಹೆಚ್ಚಿನ ಆದಾಯ ತರುವ ಯಾವ ಹುದ್ದೆಯಲ್ಲೂ ಇರದಿರುವುದಕ್ಕೆ ಕಾರಣ ಇವರ ಕೆಳಮಟ್ಟದ ಸಾಕ್ಷರತೆ, ವೃತ್ತಿ ಕೌಶಲ್ಯಗಳ ಕೊರತೆ ಇರುವುದರಿಂದ ಕಡಿಮೆ ಸಂಭಾವನೆ ಬರುವಂಥ ಕೆಲಸಗಳಿಗೆ ಅವರು ತಳ್ಳಲ್ಪಟ್ಟಿದ್ದಾರೆ. ಅವರ ತಲಾವಾರು ಮಾಸಿಕ ವೆಚ್ಚವು ತಮ್ಮ ಅಗತ್ಯಕ್ಕಿಂತಲೂ ಕಡಿಮೆ ಕೂಲಿ ಪಡೆಯುತ್ತಿರುವುದನ್ನು ಪ್ರತಿನಿಧಿಸುತ್ತದೆ (ಮಾನವಾಭಿವೃದ್ಧಿ ವರದಿ ೨೦೦೫; ೨೬೦) ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡದವರಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿರುವ ಪರಿಶಿಷ್ಟ ಪಂಗಡದವರು ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರೆ. ೨೦೧೧ ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೭.೬ ರಷ್ಟು ಸಾಗುವಳಿದಾರರಿದ್ದಾರೆ. ಶೇಕಡ ೧೧.೮೬ ರಷ್ಟು ಕೃಷಿ ಕಾರ್ಮಿಕರಿದ್ದರೆ ಶೇಕಡ ೪.೭೦ ಯಷ್ಟು ಗೃಹ ಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ.

ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಅಧಿಕ ಮಹಿಳೆಯರು, ಅಂದರೆ ಶೇಕಡ ೫೮.೮೦ ರಷ್ಟು ಮಹಿಳೆಯರು ಗೃಹ ಸಂಬಂಧಿ ಕೈಗಾರಿಕೆಗಳಲ್ಲಿ ತೊಡಗಿದ್ದಾರೆ. ಕೇವಲ ಶೇಕಡ ೫೯.೮೯ ರಷ್ಟು ಮಹಿಳೆಯರು ಮಾತ್ರ ಸಾಗುವಳಿದಾರರಾಗಿದ್ದಾರೆ.

"ಮಾದರಿ ಸಮೀಕ್ಷೆಯು ತಿಳಿಸುವಂತೆ ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಶೇಕಡ ೫೭.೩೯ ರಷ್ಟು ಕುಟುಂಬಗಳು ಭೂ ಒಡೆತನ ಹೊಂದಿವೆ. ಅದರಲ್ಲಿ ಶೇಕಡ ೭೪.೩೫ ರಷ್ಟು ಒಣಭೂಮಿಯಾಗಿದೆ. ರಾಜ್ಯದಲ್ಲಿ ಬಿತ್ತನೆಗೊಳ್ಳುವ ನೀರಾವರಿ ಕೃಷಿ ಭೂಮಿಯು ಶೇಕಡ ೨೧ ರಷ್ಟು ಮಾತ್ರವಾಗಿದೆ".(ಕೃಷಿ ಗಣತಿ ವರದಿ ೨೦೦೧)

೨೦೦೧ ರ ಕರ್ನಾಟಕ ಕೃಷಿ ಗಣತಿಯ ಪ್ರಕಾರ ಪರಿಶಿಷ್ಟ ಪಂಗಡದವರಲ್ಲಿ ಶೇಕಡ ೩೦.೯ ರಷ್ಟು ಅತಿ ಸಣ್ಣ ಹಿಡುವಳಿದಾರರು ಮತ್ತು ಶೇಕಡ ೧೯.೪ ರಷ್ಟು ಅರೆ ಮಧ್ಯಮ ಗಾತ್ರದ ಹಿಡುವಳಿದಾರರಿದ್ದಾರೆ ಈ ವಿಷಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಮತ್ತು ಇತರರಿಗೆ ಅಷ್ಟೇನೂ ವ್ಯತ್ಯಾಸವಿಲ್ಲ.

ಆದರೆ ಮಧ್ಯಮ(ಶೇಕಡ ೭.೯) ಮತ್ತು ದೊಡ್ಡ ಹಿಡುವಳಿಗಳ (ಶೇಕಡ ೧.೦) ಪ್ರಮಾಣ ಕಡಿಮೆ ಇದೆ.

ಇಲ್ಲಿ ಗಮನಿಸಬೇಕಾದ ಅತಿ ಮುಖ್ಯವಾದ ಅಂಶವೆಂದರೆ ಬಹುಪಾಲು ಪರಿಶಿಷ್ಟ ಪಂಗಡಗಳು ಕಡಿಮೆ ಉತ್ಪಾದಕತೆಯ ಸಣ್ಣ ಘಟಕಗಳನ್ನು ಹೊಂದಿವೆ. ಅವು ಆರ್ಥಿಕವಾಗಿಯೂ ಲಾಭಕರವಲ್ಲ. ಆದ್ದರಿಂದಲೇ ಬಹುತೇಕ ಸಣ್ಣ ಹಿಡುವಳಿದಾರರು ಜೀವನ ನಿರ್ವಹಣೆಗಾಗಿ ಕೂಲಿ ಕಾರ್ಮಿಕ ವೃತ್ತಿಗೆ ತಳ್ಳಲ್ಪಟ್ಟಿದ್ದಾರೆ. ವರಮಾನದ ವಿಚಾರವಾಗಿ ತಿಳಿಯಬಯಸುವುದೇನೆಂದರೆ ೨೦೧೦-೨೦೧೧ ಅಂಕಿ ಅಂಶಗಳ ಪ್ರಕಾರ ಬಹುಪಾಲು ಗ್ರಾಮೀಣ ಪರಿಶಿಷ್ಟ ಪಂಗಡದ ಕುಟುಂಬಗಳ ವರಮಾನದ ಮೂಲವೆಂದರೆ ಕೃಷಿ ಕಾರ್ಮಿಕರಾಗಿ ಕೆಲಸಮಾಡುವುದು. (ಶೇಕಡ ೯.೭) ಸಾಗುವಳಿ (ಶೇಕಡ ೭.೭) ಮೀನುಗಾರಿಕೆ ಹಾಗೂ ಇತರ ಸಣ್ಣ ಪುಟ್ಟ ಉದ್ದಿಮೆಗಳು (ಶೇಕಡ ೧೧.೪) ಅವರ ವರಮಾನದ ಮೂಲಗಳಾಗಿವೆ.

'ನಗರ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ರೂ ೧೦.೯೮೭ ರಷ್ಟಾಗಿದ್ದರೆ ಗ್ರಾಮೀಣ ಪ್ರದೇಶದಲ್ಲಿಯ ಪರಿಶಿಷ್ಟ ಪಂಗಡದವರ ವಾರ್ಷಿಕ ತಲಾವಾರು ವರಮಾನ ಕೇವಲ ರೂ ೪.೭೬೮ ಆಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ವಿಚಾರವೆಂದರೆ ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡದ ಕುಟುಂಬಗಳ ಪೈಕಿ ಶೇಕಡ ೪೦ ರಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗಿನ ಕುಟುಂಬಗಳಾಗಿವೆ. ಇದೇ ನಗರ ಪ್ರದೇಶದ ಪರಿಶಿಷ್ಟ ಪಂಗಡದ ಕುಟುಂಬಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರಮಾಣ ಶೇಕಡ ೨೫ ರಷ್ಟಾಗಿದೆ' (ಮಾನವಾಭಿವೃದ್ಧಿ ವರದಿ: ೨೦೦೫:೨೬೧)

ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಪಂಗಡಗಳ ಜನರ ತಲಾವಾರು ಮಾಸಿಕ ವೆಚ್ಚವು ಅತ್ಯಂತ ಕಡಿಮೆ ಇದೆ. ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚ ರೂ ೪೧೯ ಆಗಿದ್ದರೆ ಇತರರ ತಲಾವಾರು ವೆಚ್ಚ ರೂ ೫೦೦ ಆಗಿದೆ. ಇತರರ ಮಾಸಿಕ ತಲಾವಾರು ವೆಚ್ಚಕ್ಕೆ ಹೋಲಿಸಿದರೆ ಪರಿಶಿಷ್ಟ ಪಂಗಡದವರ ತಲಾವಾರು ವೆಚ್ಚವು ಅತ್ಯಂತ ಕಡಿಮೆಯಂದೇ ಹೇಳಬಹುದು. ನಗರವಾಸಿ ಪರಿಶಿಷ್ಟ ಪಂಗಡಗಳ ತಲಾವಾರು ಮಾಸಿಕ ವೆಚ್ಚವು ರೂ ೬೩೪ ಆಗಿದ್ದು ನಗರವಾಸಿ ಇತರರಿಗೆ ಹೋಲಿಸಿದರೆ ಅವರ ತಲಾವಾರು ವೆಚ್ಚದ ಪ್ರಮಾಣ ಅತ್ಯಂತ ಕಡಿಮೆಯೆನಿಸುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿ ಕೂಲಿ ಮತ್ತು ಕೃಷಿಯನ್ನೇ ಆಧರಿಸಿರುವುದರಿಂದ ಅವರ ಮಾಸಿಕ ತಲಾವಾರು ವೆಚ್ಚವು ಕಡಿಮೆಯಾಗಿರುವುದು ಸಹಜವಾಗಿದೆ. ಸಾಮಾನ್ಯವಾಗಿ ಮಳೆಯಾಶ್ರಿತ ಕೃಷಿ ಚಟುವಟಿಕೆಗಳು ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಚುರುಕಾಗಿರುತ್ತದೆ. ಇನ್ನುಳಿದ ಆರು ತಿಂಗಳು ಕೃಷಿಕರಿಗೆ ಬೇರೆ ಯಾವುದೇ ಕೆಲಸವಿರುವುದಿಲ್ಲ. ಅದೂ ಮಳೆ ಬಂದರೆ ಮಾತ್ರ ಕೃಷಿ ಚಟುವಟಿಕೆಗಳು ನಡೆಯುತ್ತವೆ. ಮಳೆ ಸರಿಯಾಗಿ ಬಾರದೇ ಇದ್ದರೆ ಆ ಆರು ತಿಂಗಳು ಸಹ ಅಂತಹ ಹೇಳಿಕೊಳ್ಳುವಂತಹ ಕೆಲಸಗಳು ಇರುವುದಿಲ್ಲ. ಹೀಗಾಗಿ ಅನಿಶ್ಚಿತವಾದ ದುಡಿಮೆಯನ್ನೇ ಪರಿಶಿಷ್ಟ ಪಂಗಡದವರು ನೆಚ್ಚಿಕೊಂಡಿರುಬೇಕಾಗುತ್ತದೆ. ಸಾಮಾನ್ಯವಾಗಿ ಬಳ್ಳಾರಿ ಜಿಲ್ಲೆಯಂತಹ ಬಿರು ಬಿಸಿಲ ನಾಡಲ್ಲಿ ಕೃಷಿ ಚಟುವಟಿಕೆ ಪೂರ್ಣಗೊಂಡ ತರುವಾಯ ಸಣ್ಣ ಹಿಡುವಳಿದಾರ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಜೀವನೋಪಾಯಕ್ಕಾಗಿ ಚಿಕ್ಕಮಗಳೂರು ಮುಂತಾದ ಕಡೆಯ ಕಾಫಿ ಎಸ್ಟೇಟುಗಳಲ್ಲಿ ಕೂಲಿಗಳಾಗಿ ದುಡಿಯಲು ಹೋಗುತ್ತಾರೆ. ಇಲ್ಲವಾದರೆ ಕೂಲಿ ಕೆಲಸವನ್ನು ಹುಡುಕಿಕೊಂಡು ಬೆಂಗಳೂರು, ಗೋವಾ, ಹೈದರಾಬಾದು ಮುಂತಾದ ಕಡೆ ವಲಸೆ ಹೋಗುತ್ತಾರೆ. ಈ ರೀತಿ ವಲಸೆ ಹೋಗುವ ಅನಿವಾರ್ಯತೆ ಇರುವುದರಿಂದ ಇವರ ಬಹುತೇಕ ಮಕ್ಕಳು ಶಾಲೆಗೆ ಸಮರ್ಪಕವಾಗಿ ಹೋಗಲು ಸಾಧ್ಯವಾಗುವುದಿಲ್ಲ.

ಬಳ್ಳಾರಿ ಜಿಲ್ಲೆಯಲ್ಲಿ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ತಾಲೂಕಿನ ತುಂಗಾಭದ್ರಾ ಆಣೆಕಟ್ಟಿನಿಂದ ಮೇಲ್ಭಾಗಕ್ಕೆ, ಒಣಬೇಸಾಯವನ್ನು ಅವಲಂಬಿಸಿದ ಗ್ರಾಮೀಣ ಪರಿಶಿಷ್ಟ ಪಂಗಡದವರು ಗೋವಾ, ಚಿಕ್ಕಮಗಳೂರು ಮುಂತಾದ ಕಡೆ ಕೂಲಿಯನ್ನು ಹುಡುಕಿಕೊಂಡು ವಲಸೆ ಹೋಗುವುದು ಸಹಜ. ಈ ರೀತಿ ವಲಸೆ ಹೋದವರು ಮರಳಿ ತಮ್ಮ ಗ್ರಾಮಗಳಿಗೆ ಮರಳುವುದು ಮಳೆಗಾಲಕ್ಕೆ.


ಪ್ರಸ್ತುತ ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಹಕ್ಕಿಪಿಕ್ಕಿ ಬುಡಕಟ್ಟಿನವರ ಆರ್ಥಿಕ ಜೀವನವನ್ನು ಇಲ್ಲಿ ಗಮನಿಸಲಾಗಿದೆ.

ಮುಖ್ಯವಾಗಿ ಹಕ್ಕಿಪಿಕ್ಕಿ ಕುಟುಂಬಗಳಿಗೆ ಯಾವುದೇ ಭೂ ಹಿಡುವಳಿ ಇಲ್ಲದಿರುವುದು ಕಂಡು ಬರುತ್ತದೆ. ಅದರಲ್ಲಿ ಎರಡು ಕುಟುಂಬಗಳಿಗೆ ಮಾತ್ರ ಭೂಮಿ ಇರುವುದಾಗಿ ತಿಳಿದುಬರುವುದಾದರೂ ಅವು ಕೃಷಿಯೋಗ್ಯವಲ್ಲದ ತುಂಡು ಭೂಮಿಗಳಾಗಿವೆ.

ಕೋಷ್ಟಕ: ೧

ಪ್ರಸ್ತುತ ಕೃಷಿಭೂಮಿ ಇರುವ ಹಕ್ಕಿಪಿಕ್ಕಿ ಕುಟುಂಬಗಳ ವಿವರ

ಕ್ರಸಂ	ವಿವರಗಳು	ಸಂಖ್ಯೆ	ಶೇಕಡ
೧	ಕೃಷಿ ಭೂಮಿ ಇರುವವರು	೦೨	೨.೩೨
೨	ಕೃಷಿ ಭೂಮಿ ಇರದವರು	೮೪	೯೭.೬೭
	ಒಟ್ಟು	೮೬	೧೦೦



ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಹಕ್ಕಿಪಿಕ್ಕಿ ಕುಟುಂಬಗಳಲ್ಲಿ ೮೪ ಕುಟುಂಬಗಳಿಗೆ ಅಂದರೆ ಶೇಕಡ ಪ್ರಮಾಣ ೯೭.೬೭ರಷ್ಟು ಕುಟುಂಬಗಳಿಗೆ ಕನಿಷ್ಟವಾದ ತುಂಡು ಭೂಮಿಯೂ ಇಲ್ಲ. ಕೇವಲ ಎರಡು ಕುಟುಂಬಗಳಲ್ಲಿ ಅಂದರೆ ಶೇಕಡ ಪ್ರಮಾಣ ೨.೩೨ರಷ್ಟು ಕುಟುಂಬಗಳಲ್ಲಿ ಒಂದು ಕುಟುಂಬಕ್ಕೆ ಅರ್ಧ ಎಕರೆ ಮಳೆಯಾಧಾರಿತ ಭೂಮಿ ಇದೆ. ಇನ್ನೊಂದು ಕುಟುಂಬಕ್ಕೆ ಮುಕ್ಕಾಲೆಕರೆಯಷ್ಟು ಮಾತ್ರ ಭೂಮಿ ಇದ್ದು ಅದೂ ಮಳೆಯಾಶ್ರಿತ ಭೂಮಿಯಾಗಿದೆ. ಅಸಮರ್ಪಕ ಮಳೆಯಿಂದಾಗಿ ಆ ಭೂಮಿಗಳಲ್ಲಿ ಕೃಷಿ ಮಾಡುವುದು ಕನಸಿನ ಮಾತೇ ಸರಿ. ಈ ಸಮುದಾಯದವರಿಗಾಗಿ ಸುಗ್ಗೇನಹಳ್ಳಿಯಲ್ಲಿ ಕೃಷಿ ಉದ್ದೇಶಕ್ಕಾಗಿ ೧೯೦೮ರಲ್ಲಿಯೇ ಬ್ರಿಟೀಷ್ ಸರ್ಕಾರವು ೭೮ ಎಕರೆಯಷ್ಟು ಭೂಮಿಯನ್ನು ನೀಡಿದೆಯಾದರೂ ಅದೆಲ್ಲವೂ ಪರರ ಪಾಲಾಗಿದೆ. ಇಂದು ಆ ಭೂಮಿಗಾಗಿ ಹೋರಾಡಬೇಕೆಂಬ ಪ್ರಜ್ಞೆಯಿದ್ದರೂ ಹೋರಾಡಲು ಬೇಕಾದ ಬೆಂಬಲ, ಸಾಮರ್ಥ್ಯಗಳಿಲ್ಲದೆ ಹಕ್ಕಿಪಿಕ್ಕಿಯರು ಕೈಕಟ್ಟಿ ನಿಲ್ಲಬೇಕಾದ ಸ್ಥಿತಿ ಒದಗಿದೆ.

೪.೧೨. ಕರ್ನಾಟಕದ ಪರಿಶಿಷ್ಟ ಪಂಗಡದವರ ವಸತಿ ವಿವರ

ಕರ್ನಾಟಕದಲ್ಲಿ ಒಟ್ಟು ೫೦ ಅನುಸೂಚಿತ ಪರಿಶಿಷ್ಟ ಪಂಗಡಗಳಿವೆ. ಆದರೆ ಅನುಸೂಚಿತವಲ್ಲದ ಎಷ್ಟೋ ಪರಿಶಿಷ್ಟ ಪಂಗಡಗಳು ಕಂಡುಬರುತ್ತವೆ. ಪ್ರಸ್ತುತ ಇಲ್ಲಿ ಅನುಸೂಚಿತ ಪರಿಶಿಷ್ಟ ಪಂಗಡಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದ್ದು ಕರ್ನಾಟಕದ ಒಟ್ಟಾರೆ ಪರಿಶಿಷ್ಟ ಪಂಗಡಗಳ ವಸತಿ ರೂಪು ರೇಷೆಗಳನ್ನು ಈ ರೀತಿ ವರ್ಗೀಕರಿಸಲಾಗಿದೆ.

೪.೧೨.೧. ಕರ್ನಾಟಕದ ಪರಿಶಿಷ್ಟ ಪಂಗಡದವರ ವಸತಿ ವಿವರ (ಶೇಕಡವಾರುಗಳಲ್ಲಿ)

ಶಾಶ್ವತ	ಅರೆ ಶಾಶ್ವತ	ತಾತ್ಕಾಲಿಕ
೬೬.೯	೨೩.೧	೧೦.೦

ಕರ್ನಾಟಕದ ಒಟ್ಟು ಪರಿಶಿಷ್ಟ ಪಂಗಡಗಳಲ್ಲಿ ಈ ಹಿಂದೆ ಶಾಶ್ವತ ಮನೆಗಳು ಕಂಡು ಬರುವುದು ಅತ್ಯಲ್ಪವಾಗಿತ್ತು. ಕೇವಲ ಹುಲ್ಲಿನ ಗುಡಿಸಲು, ತಾಳೆಗರಿ ಗುಡಿಸಲುಗಳ ಪ್ರಮಾಣವೇ ಶೇಕಡ ತೊಂಭತ್ತ ರಷ್ಟಿದ್ದಿತು. ಆದರೆ ಇತ್ತೀಚಿನ ಎರಡು ದಶಕಗಳೀಚೆಗೆ ಸರ್ಕಾರ ಕೊಡಮಾಡುವ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮುಂತಾದ ವಸತಿ ಯೋಜನೆಗಳ ಲಾಭ ಪಡೆದ ಪರಿಶಿಷ್ಟ ಪಂಗಡಗಳು ತಮ್ಮ ಹುಲ್ಲು ಮನೆಯ ಬದಲಾಗಿ ಶಾಶ್ವತವಾದ ಮನೆಗಳನ್ನು ಕಾಣುವಂತಾಗಿದೆ.


ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಸಬಲರಾದವರು ಸರ್ಕಾರದ ಯೋಜನೆಗಳ ಗೊಡವೆಗೆ ಹೋಗದೆ ಸ್ವತಂತ್ರವಾಗಿ ಮನೆಗಳನ್ನು ನಿರ್ಮಿಸಿಕೊಂಡ ಉದಾಹರಣೆಗಳು ಉಂಟು. ಒಟ್ಟಾರೆಯಾಗಿ ಪಕ್ಕಾ (ಶಾಶ್ವತ) ಮನೆಗಳನ್ನು ಹೊಂದಿದ ಪರಿಶಿಷ್ಟ ಪಂಗಡಗಳ ಪ್ರಮಾಣ ಶೇಕಡ ೬೬.೯ರಷ್ಟಿದೆ. ಅರೆ ಶಾಶ್ವತ ಅಂದರೆ ಕೆಳ ಭಾಗವೆಲ್ಲಾ ಕಲ್ಲು ಅಥವಾ ಇಟ್ಟಿಗೆ ಗೋಡೆಗಳನ್ನು ನಿರ್ಮಿಸಿಕೊಂಡಿದ್ದು ಮೇಲ್ಭಾಗದಲ್ಲಿ ಹುಲ್ಲು ಮುಂತಾದ ತಾತ್ಕಾಲಿವಾದ ಮೇಲು ಹೊದಿಕೆ ಹೊಂದಿದ ಮನೆಗಳ ಪ್ರಮಾಣ ಶೇಕಡ ೧೧.೮ ರಷ್ಟಿದೆ. ಇನ್ನೂ ತಾತ್ಕಾಲಿಕವಾದ ಗುಡಿಸಲು ರಚಿಸಿಕೊಂಡು ಜೀವಿಸುವ ಪರಿಶಿಷ್ಟ ಪಂಗಡಗಳಿದ್ದು ಬಹುತೇಕ ಅವು ಕಾಡಿನಲ್ಲಿ ವಾಸಿಸುವ ಬುಡಕಟ್ಟುಗಳಾಗಿವೆ. ಇಂತಹ ಸಮುದಾಯಗಳ ಮನೆಗಳು ಶೇಕಡ ೧೦.೦ರಷ್ಟಿವೆ. (ಮಾನವಾಭಿವೃದ್ಧಿ ವರದಿ; ೨೦೦೫; ೨೦೫)

ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಹಕ್ಕಿಪಿಕ್ಕಿ ಕುಟುಂಬಗಳನ್ನು ಗಮನಿಸಿದರೆ ಆ ಕುಟುಂಬಗಳಲ್ಲಿ ಶೇಕಡ ೯೯.೯ ಕುಟುಂಬಗಳು ಇನ್ನು ತಾತ್ಕಾಲಿಕವಾದ ಕಚ್ಚಾ ಮನೆ, ಗುಡಸಲಿನಲ್ಲಿ ವಾಸಿಸುತ್ತಿವೆ. ಕೇವಲ ೦.೫ರಷ್ಟು ಕುಟುಂಬಗಳು ಮಾತ್ರ ಮನೆಗಳನ್ನು ನಿರ್ಮಿಸಿಕೊಂಡಿವೆ. ಈ ಸಮುದಾಯಕ್ಕಾಗಿ ೧೯೬೦ರ ಸುಮಾರಿಗೇ ೧.೬೦ ಎಕರೆ ಭೂಮಿಯನ್ನು ಕಾಯ್ದಿರಿಸಲಾಗಿದೆಯಾದರೂ ಆ ಭೂಮಿಯಲ್ಲಿ ನಿವೇಶನಗಳ ಹಂಚಿಕೆಯಾಗಿಲ್ಲ ಮತ್ತು ಅವುಗಳ ಪಟ್ಟಾ ಖಾತೆಯಾಗಿಲ್ಲ. ಪಟ್ಟಾ ಖಾತೆ ಇರದೇ ಇರುವುದರಿಂದ ಸರ್ಕಾರದ ವಸತಿ ಯೋಜನೆಗಳ ಲಾಭ ಪಡೆಯಲು ಸಾಧ್ಯವಾಗಿಲ್ಲ. ಇತ್ತೀಚೆಗೆ ವಸತಿಯೋಜನೆಗಳಾದ ಅಂಬೇಡ್ಕರ್ ಅವಾಸ್ ಯೋಜನೆ ಅಡಿಯಲ್ಲಿ ಮೂರು ಮನೆಗಳಾಗಿವೆ ಹಾಗೂ ಸ್ವಚ್ಚ ಭಾರತ್ ಯೋಜನೆ ಅಡಿಯಲ್ಲಿ ೧೦ ಶೌಚಾಲಯಗಳನ್ನು ನಿರ್ಮಿಸಿದ್ದಾರೆ. ಈ ಯೋಜನೆಗಳು ಅಲ್ಲದೆ, ಬೇರೆ ಯಾವುದೇ ಯೋಜನೆಗಳು ಇವರಿಗೆ ದೊರೆತಿಲ್ಲ.

ಕೋಷ್ಟಕ: ೨

ಹಕ್ಕಿಪಿಕ್ಕಿ ಕುಟುಂಬಗಳ ವಸತಿ ಮಾಲಿಕತ್ವದ ನಮೂನೆ

ಕ್ರಸಂ	ಮಾಲಿಕತ್ವದ ನಮೊನೆ	ಸಂಖ್ಯೆ	ಶೇಕಡ
೧	ಸ್ವಂತ	೬೮	೭೯.೦೬
೨	ಬಾಡಿಗೆ	೧೨	೧೩.೯೫
೩	ಇತರೆ	೬	೬.೯೭
	ಒಟ್ಟು	೮೬	೧೦೦




ಕೋಷ್ಟಕ ೨ರಲ್ಲಿ ಸಮೀಕ್ಷೆಗೆ ಒಳಪಡಿಸಿದ ಒಟ್ಟು ೮೬ ಹಕ್ಕಿಪಿಕ್ಕಿ ಕುಟುಂಬಗಳಲ್ಲಿ ೬೮ ಕುಟುಂಬಗಳು ಅಂದರೆ ಶೇಕಡ ಪ್ರಮಾಣ ೭೯.೦೬ ರಷ್ಟು ಕುಟುಂಬದವರು ಸ್ವಂತ ಮನೆಗಳನ್ನು ಹೊಂದಿದ್ದಾರೆ. ಇನ್ನು ೧೨ ಕುಟುಂಬಗಳು ಅಂದರೆ ಶೇಕಡ ಪ್ರಮಾಣ ೧೩.೯೫ ರಷ್ಟು ಕುಟುಂಬಗಳು ಬಾಡಿಗೆ ಮನೆಗಳಲ್ಲಿ ವಾಸಮಾಡುತ್ತಿದ್ದು, ಈ ಬಾಡಿಗೆ ಮನೆಗಳು ಹೆಸರಿಗಷ್ಟೆ ಮನೆಗಳಾಗಿದ್ದು ಅವು ಪೂರ್ಣವಾಗಿ ಗುಡಿಸಲು ಮನೆಗಳಾಗಿವೆ. ಇನ್ನೂಳಿದ ೬ ಕುಟುಂಬಗಳು ಶೇಕಡ ಪ್ರಮಾಣ ೬.೯೭ ರಷ್ಟು ಕುಟುಂಬದವರು ಸ್ವಂತ ಮನೆಗಳು ಇಲ್ಲದೆ ಬಾಡಿಗೆ ಮನೆಯನ್ನು ತೆಗೆದುಕೊಂಡು ವಾಸಮಾಡುವುದಕ್ಕೂ ಆಗದಷ್ಟು ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿದ್ದು ಇತರರ ಮನೆಗಳಲ್ಲಿ ವಾಸ ಮಾಡುತ್ತಿರುವುದು ತಿಳಿದುಬರುತ್ತದೆ.

ಕೋಷ್ಟಕ: ೩

ಹಕ್ಕಿಪಿಕ್ಕಿ ಕುಟುಂಬದವರ ಮನೆಗಳ ಸ್ವರೂಪದ ವಿವರ

ಕ್ರಸಂ	ಮನೆಯ ಸ್ವರೂಪ	ಸಂಖ್ಯೆ	ಶೇಕಡ
೧	ಗುಡಾರ	೬	೬.೯೭
೨	ಹೆಂಚಿನ ಮನೆ	೧	೧.೧೬
೩	ಗುಡಿಸಲು	೧೭	೧೯.೭೬
೪	ಸೀಟಿನ ಮನೆ	೪೫	೫೨.೩೨
೫	ಆರ್ ಸಿ ಸಿ	೧೭	೧೯.೭೬
	ಒಟ್ಟು	೮೬	೧೦೦



ಕೋಷ್ಟಕ ೩ರಲ್ಲಿ ಹಕ್ಕಿಪಿಕ್ಕಿ ಕುಟುಂಬದವರ ಮನೆಗಳ ಸ್ವರೂಪದ ವಿವರಗಳನ್ನು ನೀಡಲಾಗಿದ್ದು ಇದರಲ್ಲಿ ಶೇಕಡ ಪ್ರಮಾಣ ೬.೯೭ ರಷ್ಟು ಕುಟುಂಬದವರ ಮನೆಗಳ ಸ್ವರೂಪ ಗುಡಾರಗಳಾಗಿವೆ ಕೇವಲ ಒಂದೇ ಒಂದು ಮನೆ ಅಂದರೆ ೧.೧೬ ರಷ್ಟು ಕುಟುಂಬದವರು ಅಂಚಿನ ಮನೆಗಳನ್ನು ಹೊಂದಿರುವುದು ತಿಳಿಯುತ್ತದೆ. ಗುಡಿಸಲು ಮನೆಗಳನ್ನು ಹೊಂದಿದವರು ೧೭ ಕುಟುಂಬದವರು ಶೇಕಡ ಪ್ರಮಾಣ ೧೯.೭೬ ರಷ್ಟು ಇರುವುದಾಗಿ ಕಂಡುಬರುತ್ತದೆ. ಸೀಟಿನ ಮನೆಗಳನ್ನು ಹೊಂದಿದವರು ಶೇಕಡ ಪ್ರಮಾಣ ೫೨.೩೬ ರಷ್ಟು ಇದ್ದು ಆರ್.ಸಿ.ಸಿ ಮನೆಗಳನ್ನು ಹೊಂದಿದವರು ಶೇಕಡ ಪ್ರಮಾಣ ೧೯.೭೬ ರಷ್ಟು ಕುಟುಂಬದವರು ಇರುವುದಾಗಿ ಕಾಣುತ್ತೇವೆ. ಆದರೆ ಇದರಲ್ಲಿ ಬಹುತೇಕ ಮನೆಗಳ ವ್ಯವಸ್ಥೆಯು ಚನ್ನಾಗಿಲ್ಲದಿರುವುದನ್ನು ಕಾಣುತ್ತೇವೆ.


೪.೧೩. ಶೌಚಾಲಯಗಳು

ಪ್ರತಿಯೊಂದು ಕುಟುಂಬಕ್ಕೆ ಮನೆ ಹೇಗೆ ಮುಖ್ಯವೋ ಅದೇ ರೀತಿ ಶೌಚಾಲಯವೂ ಮುಖ್ಯವಾಗಿರುತ್ತದೆ. ಭಾರತೀಯ ಪರಂಪರೆಯಲ್ಲಿ ಮನೆಯೊಳಗೆ ಶೌಚಾಲಯ ಹೊಂದುವುದು ಸರಿಯಾದ ಕ್ರಮವಲ್ಲ ಎನ್ನುವ ಮನೋಭಾವನೆ ಇದೆ. ಹೀಗಾಗಿ ಇಂದಿಗೂ ಗ್ರಾಮೀಣ ಪ್ರದೇಶದ ಅರ್ಧಕ್ಕಿಂತ ಹೆಚ್ಚು ಮನೆಗಳು ಶೌಚಾಲಯಗಳನ್ನೇ ಹೊಂದಿಲ್ಲ. ಇತ್ತೀಚೆಗೆ ಸ್ವಚ್ಛ ಭಾರತ ಅಭಿಯಾನದಡಿ ಪ್ರತಿ ಮನೆಯೂ ಪ್ರತ್ಯೇಕವಾದ ಶೌಚಾಲಯ ಹೊಂದಿರಬೇಕು ಎಂದು ಕಡ್ಡಾಯಗೊಳಿಸಿದೆ. ಪ್ರತ್ಯೇಕವಾದ ಶೌಚಾಲಯ ನಿರ್ಮಿಸಿಕೊಳ್ಳಲೆಂದೇ ಹನ್ನೆರಡು ಸಾವಿರ ರೂಪಾಯಿಗಳನ್ನು ಸಹಾಯ ಧನವಾಗಿ ನೀಡಲಾಗುತ್ತಿದೆ. ಸಹಾಯ ಧನವನ್ನು ಪಡೆದು ಶೌಚಾಲಯ ನಿರ್ಮಿಸಿಕೊಳ್ಳುವರಾದರೂ ಶೌಚಾಲಯವನ್ನು ನಿರ್ಧಿಷ್ಟವಾದ ಕಾರ್ಯಕ್ಕೆ ಬಳಸದೆ ಇರುವುದನ್ನು ಪ್ರತಿ ಗ್ರಾಮದಲ್ಲಿಯೂ ಕಾಣುತ್ತೇವೆ.

ಕೋಷ್ಟಕ: ೪

ಶೌಚಾಲಯದ ವ್ಯವಸ್ಥೆಯ ವಿವರಗಳು

ಕ್ರಸಂ	ಶೌಚಲಯದ ವ್ಯವಸ್ಥೆ	ಸಂಖ್ಯೆ	ಶೇಖಡ
೧	ಇದೆ	೨೦	೨೩.೨೫
೨	ಇಲ್ಲ	೬೬	೭೬.೭೪
	ಒಟ್ಟು	೮೬	೧೦೦





ಹಕ್ಕಿಪಿಕ್ಕಿಯರ ಶೇಕಡ ೨೩.೨೫ ಕುಟುಂಬಗಳಿಗೆ ಶೌಚಾಲಯಗಳಿವೆ. ಆದರೆ ಈ ಶೌಚಾಲಯಗಳು ಬಹುತೇಕ ಮಹಿಳೆಯರ ಸ್ನಾನಗೃಹಗಳಾಗಿ ಮಾರ್ಪಟ್ಟಿವೆ. ಈ ಕಾಲೋನಿಯ ಪುರುಷರು ಹಾಗೂ ಶೇಕಡ ೭೬.೭೪ ಕುಟುಂಬಗಳ ಸದಸ್ಯರು ಬಹುತೇಕ ಬಯಲು ಶೌಚವನ್ನೇ ಆಶ್ರಯಿಸಿದ್ದಾರೆ. ಕಾಲೋನಿಯ ಹಿಂಭಾಗದ ಇಂದಿರಾನಗರದ ಬೀಳು ಪ್ರದೇಶದಲ್ಲಿ ಮತ್ತು ಹಳೆಬಸ್ ನಿಲ್ದಾಣದ ಬಳಿಯ ಕೆರೆಯ ಬಯಲನ್ನು ಶೌಚಕಾರ್ಯಕ್ಕಾಗಿ ಅವಲಂಭಿಸಿರುವರು. ಪ್ರತ್ಯೇಕ ಶೌಚಾಲಯಗಳಿಗೆ ಒಳಚರಂಡಿ ವ್ಯವಸ್ಥೆ ಇರದೆ ಗುಂಡಿ ಶೌಚಾಲಯಗಳಾಗಿವೆ.

ಇಲ್ಲಿ ಮನೆಗಳ ಸ್ವರೂಪ ಮತ್ತು ಶೌಚಾಲಯಗಳು ಪರೋಕ್ಷವಾಗಿ ಆಯಾ ಕುಟುಂಬಗಳ ಆರ್ಥಿಕ ಸ್ಥಿತಿಗತಿಯನ್ನು ಪ್ರದರ್ಶಿಸುತ್ತಿವೆ ಎಂಬ ಕಾರಣಕ್ಕಾಗಿ ಇಲ್ಲಿ ಹಕ್ಕಿಪಿಕ್ಕಿ ಬುಡಕಟ್ಟಿನ ಕುಟುಂಬಗಳು ಮನೆಗಳ ಮತ್ತು ಶೌಚಾಲಯಗಳ ಸ್ಥಿತಿಗತಿಗಳನ್ನು ತಿಳಿಸಲಾಗಿದೆ.


೪.೧೩.೧. ಕರ್ನಾಟಕದ ಪರಿಶಿಷ್ಟ ಪಂಗಡದ ಕುಟುಂಬಗಳು ಶೌಚಾಲಯ ಸೌಲಭ್ಯ ಪಡೆದ ವಿವರ

ಕರ್ನಾಟಕದ ೫೦ ಅನುಸೂಚಿತ ಪರಿಶಿಷ್ಟ ಪಂಗಡಗಳಲ್ಲಿ ಶೇಕಡ ೪೦ ರಷ್ಟು ಸಮುದಾಯಗಳು ಗುಂಪುಗಳಾಗಿ ಪ್ರತ್ಯೇಕವಾಗಿ ಕಾಡಿನ ಮಧ್ಯಕ್ಕೋ ಅಥವ ಜನ ಸಮುದಾಯದಿಂದ ದೂರವಾಗಿಯೋ ಜೀವಿಸುತ್ತಿವೆ. ಇನ್ನುಳಿದ ಶೇಕಡ ೧೦ ರಷ್ಟು ಸಮುದಾಯಗಳು ಮಾತ್ರ ಜನ ಸಮುದಾಯದೊಂದಿಗೆ ಬೆರೆತು ಜೀವನ ಸಾಗಿಸುತ್ತಿವೆ. ಬಹುತೇಕವಾಗಿ ಕಾಡಿನಲ್ಲಿ ಅಥವಾ ಕಾಡಿನಂಚಿಗೆ ಹೊಂದಿಕೊಂಡು ನೆಲೆಸಿರುವ ಪರಿಶಿಷ್ಟ ಪಂಗಡಗಳು ಪ್ರತ್ಯೇಕವಾದ ಶೌಚಾಲಯಗಳನ್ನು ಆಪೇಕ್ಷಿಸದೆ ಬಯಲನ್ನೇ ಶೌಚ ಕಾರ್ಯಕ್ಕಾಗಿ ಬಳಸುತ್ತಿವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವ ಪರಿಶಿಷ್ಟ ಪಂಗಡಗಳ ಸ್ಥಿತಿಯೇನೂ ಇದಕ್ಕಿಂತ ಭಿನ್ನವಾಗಿಲ್ಲ. ಇಂದಿಗೂ ಎಷ್ಟೋ ಹಳ್ಳಿಗಳಲ್ಲಿ ಪರಿಶಿಷ್ಟ ಪಂಗಡಗಳು ಇತರರಂತೆ ಶೌಚಕ್ಕಾಗಿ ಬಯಲನ್ನೇ ಆಶ್ರಯಿಸಿರಬೇಕಾದ ಅನಿವಾರ್ಯತೆ ಇದೆ.

ಕೋಷ್ಟಕ: ೫

ವಿದ್ಯುತ್ ಸೌಲಭ್ಯದ ವಿವರಗಳು

ಕ್ರಸಂ	ವಿದ್ಯುತ್ ಬಳಕೆ	ಸಂಖ್ಯೆ	ಶೇಕಡ
೧	ಇದೆ	೫೪	೬೨.೭೭
೨	ಇಲ್ಲ	೩೨	೩೭.೨೦
	ಒಟ್ಟು	೮೬	೧೦೦



ಕಂಪ್ಲಿಯು ತಾಲೂಕು ಕೇಂದ್ರವಾಗಿದೆ. ಕಂಪ್ಲಿಯ ಹೃದಯ ಭಾಗದಲ್ಲಿಯೇ ಹಕ್ಕಿಪಿಕ್ಕಿ ಕಾಲೋನಿ ಇದೆ. ಹೀಗಿದ್ದೂ ಹಕ್ಕಿಪಿಕ್ಕಿಯ ಶೇಕಡ ಪ್ರಮಾಣ ೩೭.೨೦ಯಷ್ಟು ಕುಟುಂಬಗಳು ಇಂದಿಗೂ ವಿದ್ಯುತ್ ಸೌಲಭ್ಯವಿರದೇ ಕತ್ತಲೆಯಲ್ಲಿ ಜೀವನ ಕಳೆಯುತ್ತಿವೆ. ಈ ಮನೆಗಳಿಗೆ ಬೀದಿ ದೀಪದ ಬೆಳಕೇ ಆಸರೆಯಾಗಿದೆ. ಇನ್ನುಳಿದ ಶೇಕಡ ಪ್ರಮಾಣ ೬೨.೭೭ ಕುಟುಂಬಗಳಲ್ಲಿ ಅರ್ಧದಷ್ಟು ಕುಟುಂಬಗಳು ಭಾಗ್ಯಜ್ಯೋತಿ ಯೋಜನೆಯ ಸೌಲಭ್ಯವನ್ನು ಹೊಂದಿವೆ. ಇನ್ನುಳಿದ ಕುಟುಂಬಗಳು ಸ್ವಂತ ಖರ್ಚಿನಿಂದ ವಿದ್ಯುತ್ ಸಂಪರ್ಕ ಪಡೆದಿವೆ.

೪.೧೩.೨. ಪರಿಶಿಷ್ಟ ಪಂಗಡಗಳ ಕುಡಿಯುವ ನೀರಿನ ಸೌಲಭ್ಯ

ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದ ಶೇಕಡ ೫೩.೭ ರಷ್ಟು ಕುಟುಂಬಗಳಿಗೆ ನಲ್ಲಿ ನೀರೇ ಕುಡಿಯುವ ನೀರಿನ ಪ್ರಮುಖ ಮೂಲವಾಗಿದೆ. (ಎಲ್ಲಾ ಕುಟುಂಬಗಳಲ್ಲಿ ಅದು ಶೇಕಡ ೫೮.೩೯ ರಷ್ಟು ಆಗಿದೆ) ಪರಿಶಿಷ್ಟ ಜಾತಿಯವರಿಗೆ ಅವರ ಮನೆಯ ಆವರಣದೊಳಗೆ ಅಥವಾ ಸನಿಹದಲ್ಲಿ ನಲ್ಲಿಯ ಮೂಲಕ ಕುಡಿಯುವ ನೀರು ದೊರೆಯುವ ಪ್ರಮಾಣ ಶೇ ೧೨.೬ ಆಗಿದ್ದರೆ, ಪರಿಶಿಷ್ಟ ಪಂಗಡಗಳಿಗೆ ದೊರೆಯುವ ಪ್ರಮಾಣ ಶೇಕಡ ೧೨.೭ ಆಗಿದೆ. ಆದರೆ ಇತರೆ ಎಲ್ಲಾ ಕುಟುಂಬಗಳಿಗೆ ಶೇಕಡ ೨೪.೧ ರಷ್ಟು ಕುಟುಂಬಗಳಿಗೆ ಅವರ ಮನೆಯ ಆವರಣ ಅಥವಾ ಸನಿಹದಲ್ಲಿ ನಲ್ಲಿಯ ಮೂಲಕ ಕುಡಿಯುವ ನೀರು ದೊರೆಯುತ್ತದೆ (೨೦೧೧ ರ ಜನಗಣತಿ ವರದಿ)

೨೦೧೧ ರ ಜನಗಣತಿ ವರದಿಯ ಪ್ರಕಾರ ಪರಿಶಿಷ್ಟ ಪಂಗಡಗಳು ನೆಲೆಸಿರುವ ಗ್ರಾಮಗಳ ಪೈಕಿ ಶೇಕಡ ೮೯ ರಷ್ಟು ಗ್ರಾಮಗಳು ಕೈ ಪಂಪು ಸಹಿತ ಕೊಳವೆ ಬಾವಿಗಳು, ಕಿರುನೀರು ಸರಬರಾಜು




ಯೋಜನೆ ಮತ್ತು ಕೊಳವೆ ನೀರು ಸರಬರಾಜು ಯೋಜನೆಗಳ ಮೂಲಕ ಕುಡಿಯುವ ನೀರಿನ ಸೌಕರ್ಯ ಹೊಂದಿದೆ. ನಾಲ್ಕರಲ್ಲಿ ಮೂರು ಗ್ರಾಮಗಳು ಎಲ್ಲಾ ಋತುಗಳಲ್ಲಿ ಸಾಕಷ್ಟು ಕುಡಿಯುವ ನೀರಿನ ಸೌಕರ್ಯವನ್ನು ಹೊಂದಿವೆ.

೪.೧೩.೩. ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡಗಳಿಗೆ ಕುಡಿಯುವ ನೀರಿನ ಸೌಕರ್ಯದ ವಿಧಗಳು

ಪರಿಶಿಷ್ಟ ಪಂಗಡಗಳ ಕಾಲೋನಿಯೊಳಗೆ ಅಥವಾ ಅದಕ್ಕೆ ಹತ್ತಿರದಲ್ಲಿ ಕೈ ಪಂಪು ಸಹಿತ ಕೊಳವೆ ಬಾವಿಗಳನ್ನು ಹೊಂದಿದ್ದು ಅಂತಹ ಕೊಳವೆ ಬಾವಿಗಳಿಂದ ಶೇಕಡ ೬೫.೮೪ ರಷ್ಟು ಕುಟುಂಬಗಳು ಬಳಕೆಗೆ ಮತ್ತು ಕುಡಿಯುವುದಕ್ಕೆ ನೀರನ್ನು ಪಡೆಯುತ್ತವೆ. ಅದೇ ರೀತಿ ಗ್ರಾಮ ಪಂಚಾಯಿತಿಗಳ ನಿರ್ವಹಣೆಯಲ್ಲಿ ನಡೆಯುತ್ತಿರುವ ಕಿರು ನೀರು ಯೋಜನೆಯಡಿ ಶೇಕಡ ೫೩.೪೨ ರಷ್ಟು ಪರಿಶಿಷ್ಟ ಪಂಗಡಗಳು ಕುಡಿಯುವ ನೀರನ್ನು ಪಡೆದರೆ ಇನ್ನು ಶೇಕಡ ೫೮.೩೯ ರಷ್ಟು ಕುಟುಂಬಗಳು ಕೊಳವೆ ನೀರನ್ನು ಬಳಸುತ್ತವೆ. ಇನ್ನು ಕಾಡಿನ ಮಧ್ಯ ಜೀವಿಸುತ್ತಿರುವ ಕೆಲವು ಪರಿಶಿಷ್ಟ ಪಂಗಡ ಬುಡಕಟ್ಟುಗಳಲ್ಲಿ ಶೇಕಡ ೪.೩೫ ರಷ್ಟು ಜನ ನದಿಯ ಮೂಲದಿಂದ ಕುಡಿಯುವ ನೀರನ್ನು ಪಡೆದರೆ ಗ್ರಾಮೀಣ ಪ್ರದೇಶದಲ್ಲಿ ಬದುಕುವ ಪರಿಶಿಷ್ಟ ಪಂಗಡಗಳು ಶೇಕಡ ೧೫.೫೩ ರಷ್ಟು ತೆರೆದ ಬಾವಿಯಿಂದ ನೀರನ್ನು ಪಡೆಯುತ್ತವೆ. ಅದೇ ರೀತಿ ಹಳ್ಳ, ಒರತೆ, ಜರಿ ಮುಂತಾದವುಗಳಿಂದ ಕುಡಿಯುವ ನೀರಿನ ಸೌಲತ್ತನ್ನು ಪಡೆಯುತ್ತಿರುವವರಲ್ಲಿ ಶೇಕಡ ೪.೯೭ ರಷ್ಟು ಪರಿಶಿಷ್ಟ ಪಂಗಡದ ಜನರಿದ್ದಾರೆ. (ಮಾದರಿ ಸಮೀಕ್ಷೆ; ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ- ೨೦೦೪:೨೪)

೪.೧೩.೪. ಹಕ್ಕಿಪಿಕ್ಕಿ ಕುಟುಂಬಗಳ ಕುಡಿಯುವ ನೀರಿನ ಸೌಲಭ್ಯಗಳ ಕುರಿತ ವಿವರ

ಪ್ರಸ್ತುತ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಕ್ಕಿಪಿಕ್ಕಿ ಸಮುದಾಯದ ಎಷ್ಟು ಕುಟುಂಬಗಳು ಕುಡಿಯುವ ನೀರಿನ ಸೌಲಭ್ಯಗಳನ್ನು ಸಮರ್ಪಕವಾಗಿ ಹೊಂದಿವೆ ಎಂದು ನೋಡಲಾಗಿ ಕಂಡು ಬಂದ ಅಂಶಗಳನ್ನು ಈ ಕೆಳಗೆ ನೀಡಲಾಗಿದೆ.

ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ವಿಭಾಗದದಿಂದ ಸಾರ್ವಜನಿಕ ಉಪಯೋಗಕ್ಕಾಗಿ ಗ್ರಾಮಗಳಲ್ಲಿ ಅಲ್ಲಲ್ಲಿ ಸಾರ್ವಜನಿಕ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಯಡಿ ನೀರನ್ನು ಕೊಳವೆ/ನಲ್ಲಿ ಮೂಲಕ ಸರಬರಾಜು ಮಾಡಲಾಗುತ್ತಿದ್ದರೂ ಎಷ್ಟೋ ಪರಿಶಿಷ್ಟ ಸಮುದಾಯ ಮತ್ತು ಪರಿಶಿಷ್ಟ ಪಂಗಡಗಳಿಗೆ ಆ ಯೋಜನೆಗಳು ಇಂದಿಗೂ ತಲುಪುತ್ತಿಲ್ಲ. ಬಹುಶಃ ಇದಕ್ಕೆ ಮೇಲ್ಜಾಜಿಗಳ ರಾಜಕಾರಣ ಒಂದು ರೀತಿಯಲ್ಲಿ ಕಾರಣವಾದರೆ ಇನ್ನೊಂದು ರೀತಿಯ ಕಾರಣವೆಂದರೆ ತಳ ಸಮುದಾಯಗಳಿಗೆ ತಮ್ಮ ಮೂಲಭೂತ ಅವಶ್ಯಕತೆಗಳ ಕುರಿತಾಗಿ ಸರಿಯಾದ ತಿಳುವಳಿಕೆ ಇಲ್ಲದೇ ಇರುವುದೂ ಕಾರಣವಾಗಿದೆ. ಎಷ್ಟೋ ಗ್ರಾಮಗಳಲ್ಲಿ ತಳ ಸಮುದಾಯಗಳು ಬಾವಿಕಟ್ಟೆ ಹತ್ತುವಂತಿಲ್ಲ. ಮೇಲ್ಜಾತಿಗಳು ಬಳಸುವ ಕೊಳವೆ ಬಾವಿಗಳನ್ನು ಮುಟ್ಟದಂತಹ ಸ್ಥಿತಿ ಇದೆ. ಇಂದಿಗೂ ಎಷ್ಟೋ ಗ್ರಾಮಗಳಲ್ಲಿ ತಳ ಜಾತಿಗಳ ಕೊಡಗಳಿಗೆ ಮೇಲ್ಜಾತಿಯವರು ಕೃಪೆದೋರಿ ನೀರನ್ನು ಹಾಕಿದರೆ ಮಾತ್ರ ತಳ ಜಾತಿಗಳಿಗೆ ಕುಡಿಯುವ ನೀರು ಲಭ್ಯ, ಇಲ್ಲದಿದ್ದರೆ ಕುಡಿಯುವ ನೀರೇ ಅಂದು ಆ ಸಮುದಾಯಗಳಿಗೆ ಇಲ್ಲ ಎನ್ನುವಂತಹ ಸ್ಥಿತಿ ಇದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕಿರುನೀರು ಸರಬರಾಜು ಯೋಜನೆಯಡಿ ನೀರು ಪೂರೈಕೆಯಾದ ಸಹ ಆ ನೀರು ಕುಡಿಯಲು ಯೋಗ್ಯವಾಗಿರುವುದಿಲ್ಲ. ಕಾರಣ ಆ ನೀರನ್ನು ಶುದ್ಧೀಕರಿಸುವ ಕಾರ್ಯವನ್ನು ಮಾಡುವುದೇ ಇಲ್ಲ. ಅವರ ಅರ್ಥದಲ್ಲಿ ನೀರನ್ನು ಶುದ್ಧೀಕರಿಸುವುದು ಎಂದರೆ ವರ್ಷದಲ್ಲಿ ಒಂದೆರಡು ಬಾರಿ ಬ್ಲೀಚಿಂಗ್ ಪುಡಿಯನ್ನು ನೀರಿಗೆ ಸೇರಿಸುವುದು. ಇಷ್ಟಾದರೆ ಶುದ್ದೀಕರಣ ಪೂರ್ಣಗೊಂಡಂತೆ ಎಂದು ಆಡಳಿತ ವ್ಯವಸ್ಥೆ ಭಾವಿಸುತ್ತದೆ.

ಕರ್ನಾಟಕದ ಶೇಕಡ ೮೦ ರಷ್ಟು ಗ್ರಾಮಗಳಲ್ಲಿ ಇಂದು ಫ್ಲೋರೈಡ್‌ಯುಕ್ತ ನೀರಿನ ಸರಬರಾಜಿನಿಂದಾಗಿ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದನ್ನು ನಾವು ಸುದ್ದಿ ಮಾದ್ಯಮಗಳ ಮೂಲಕ ಅರಿತೇ ಇದ್ದೇವೆ. ಇದಕ್ಕೆ ಬಳ್ಳಾರಿ ಜಿಲ್ಲೆಯ ಗ್ರಾಮಗಳು ಹೊರತಾಗಿಲ್ಲ. ಇಂದು ಬಳ್ಳಾರಿ ಜಿಲ್ಲೆಯ ಬಹುತೇಕ ಎಲ್ಲಾ ತಾಲೂಕುಗಳಲ್ಲಿಯೂ ಫ್ಲೋರೈಡ್‌ಯುಕ್ತ ನೀರು ಕಂಡು ಬರುತ್ತಿದೆ. ಆಶ್ವರ್ಯವಾಗುವ ವಿಚಾರವೆಂದರೆ ಗ್ರಾಮ ಪಂಚಾಯಿತಿಗಳಲ್ಲಿ ತಮ್ರಹಳ್ಳಿ, ಬಾಚಿಗೊಂಡನಹಳ್ಳಿ, ನಂ ೧೦ ಮುದ್ದಾಪುರ ಮುಂತಾದ ಗ್ರಾಮಗಳು ನೆಲೆಸಿರುವುದು ತುಂಗಾಭದ್ರ ನದಿಗೆ ತೀರಾ ಹತ್ತಿರದಲ್ಲಿ. ಆದರೆ ಈ ಗ್ರಾಮದ ಜನ ಇಂದಿಗೂ ಫ್ಲೋರೈಡ್‌ಯುಕ್ತ ಕೊಳವೆ ಬಾವಿಗಳಿಂದ ಸರಬರಾಜಾಗುವ ನೀರನ್ನೇ ಕುಡಿಯಬೇಕಾದ ಸ್ಥಿತಿ ಇದೆ. ಬಳ್ಳಾರಿ ಜಿಲ್ಲೆಯಲ್ಲಿ ತುಂಗಾಭದ್ರ ನದಿಯಿಂದ ಹತ್ತಾರು ಕಾರ್ಖಾನೆಗಳು ತಮ್ಮ ವೈಯಕ್ತಿಕ ಉಪಯೋಗಕ್ಕಾಗಿ ೬೦–೭೦ ಕಿ.ಮೀ ದೂರದವರೆಗೂ ನೀರನ್ನು ಒಯ್ಯುವುದನ್ನು ಕಾಣುತ್ತೇವೆ. ಆದರೆ ನದಿ ದಂಡೆಯ ಮೇಲೆ ಬದುಕುವ ಗ್ರಾಮೀಣ ಜನರಿಗೆ ಆ ನೀರಿನ ಸೌಲಭ್ಯವಿಲ್ಲವೆಂಬುದು ಸತ್ಯದ ಸಂಗತಿಯಾಗಿದೆ. ಹಿಂದೆ ಫ್ಲೋರೈಡ್‌ಯುಕ್ತ ನೀರಿನಿಂದ ಜನಸಾಮಾನ್ಯರ ಆರೋಗ್ಯದಲ್ಲಾಗುವ ಏರುಪೇರನ್ನು ನಿಯಂತ್ರಿಸುವ ಉದ್ದೇಶದಿಂದ ಫ್ಲೋರೈಡನ್ನು ಸೋಸುವ ಫಿಲ್ಟರ್‌ಗಳನ್ನು ಗ್ರಾಮೀಣ ಜನತೆಗೆ ಸಬ್ಸಿಡಿ ಆಧಾರದಲ್ಲಿ ಜಿಲ್ಲಾ ಪಂಚಾಯಿತಿಯಿಂದ ನೀಡಲಾಗುತ್ತಿತ್ತು. ಇಂತಹ ಫಿಲ್ಟರ್‌ಗಳನ್ನು ಆಂಧ್ರ ಮೂಲದ ಯಾವುದೋ ಒಂದು ಕಂಪನಿಗೆ ಕಾಂಟ್ರಾಕ್ಟ್ ವಹಿಸಲಾಗಿತ್ತು. ಆದರೆ ಸಬ್ಸಿಡಿ ಫಿಲ್ಟರ್ ಟ್ಯಾಂಕ್‌ಗಳಿಂದ ಜನತೆಗೆ ಆದ ಉಪಯೋಗಕ್ಕಿಂತ ಆ ಫಿಲ್ಟರ್‌ಗಳನ್ನು ಸರಬರಾಜು ಮಾಡಿದ ಕಂಪನಿಗೆ ಒಳ್ಳೆಯ ಆರ್ಥಿಕ ಲಾಭವಿತ್ತು. ಅದರಿಂದ ಯೊವೊಬ್ಬ ಗ್ರಾಮೀಣ ಕುಟುಂಬಕ್ಕೂ ಎಳ್ಳುಕಾಳಿನಷ್ಟು ಉಪಯೋಗವಾಗಲಿಲ್ಲ. ಇದರ ಒಟ್ಟು ಅರಾಜಕತೆಯನ್ನು ಕನ್ನಡ ವಿಶ್ವವಿದ್ಯಾಲಯದ ಮೌಲ್ಯಮಾಪನ ವರದಿ ಬಿಚ್ಚಿಟ್ಟ ತರುವಾಯ ಆ ಯೋಜನೆಯನ್ನು ಕೈ ಬಿಡಲಾಯಿತು. ಆದರೆ ಗ್ರಾಮೀಣ ಜನತೆ ಮಾತ್ರ ಇಂದಿಗೂ ಫ್ಲೋರೈಡ್‌ಯುಕ್ತ ನೀರಿನಿಂದ ಮಾತ್ರ ಬಿಡುಗಡೆಗೊಂಡಿಲ್ಲ. ಒಟ್ಟಾರೆಯಾಗಿ ಇಂದು ಬಹುತೇಕ ಬಳ್ಳಾರಿ ಜಿಲ್ಲೆಯ ಎಲ್ಲಾ ಗ್ರಾಮ, ನಗರಗಳು ಸರ್ಕಾರದ ನಾನಾ ಯೋಜನೆಗಳ ಮೂಲಕ ನೀರನ್ನು ಕಾಣುವಂತಾಗಿದೆಯಾದರೂ ಅದು ಎಷ್ಟರ ಮಟ್ಟಿಗೆ ಉಪಯುಕ್ತವಾದ ನೀರು ಎಂಬುದು ಪ್ರಶ್ನೆಯಾಗಿಯೇ ಉಳಿದುಬಿಟ್ಟಿದೆ. ಕಂಪ್ಲಿಯಲ್ಲಿ ತುಂಗಾಭದ್ರಾ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಕುಡಿಯುವ ನೀರನ್ನು ಶುದ್ಧೀಕರಿಸುವ ಘಟಕವಿರುವುದಾದರೂ ಕುಡಿಯಲು ಯೋಗ್ಯವಲ್ಲದ ನೀರನ್ನು ಸರಬರಾಜು ಮಾಡುವರೆಂಬ ಮಾತುಗಳು ಸ್ಥಳೀಯರಿಂದ ಕೇಳಿಬರುತ್ತಿದೆ.


೪.೧೩.೫. ಕಂಪ್ಲಿಯಲ್ಲಿ ಹಕ್ಕಿಪಿಕ್ಕಿ ಕುಟುಂಬಗಳ ಕುಡಿಯುವ ನೀರಿನ ಸೌಲಭ್ಯ

ಹಕ್ಕಿಪಿಕ್ಕಿ ಕಾಲೋನಿಯಲ್ಲಿ ಕುಡಿಯುವ ನೀರಿಗಾಗಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳಿಂದಲೇ ಕುಡಿಯುವ ನೀರನ್ನು ತರಲಾಗುತ್ತದೆ. ಹಕ್ಕಿಪಿಕ್ಕಿಯರ ಯಾವೊಂದು ಕುಟುಂಬವೂ ಕುಡಿಯುವ ನೀರಿಗಾಗಿ ವೈಯಕ್ತಿಕ ನಲ್ಲಿಯನ್ನು ಹೊಂದಿರುವುದಿಲ್ಲ.

ಕೋಷ್ಟಕ: ೬

ಹಕ್ಕಿಪಿಕ್ಕಿ ಕುಟುಂಬದವರ ಪಡಿತರ ಚೀಟಿ ಹೊಂದಿರುವ ವಿವರ.

ಕ್ರಸಂ	ಪಟಿತರ ಚೀಟಿಯ ಪ್ರಕಾರ	ಸಂಖ್ಯೆ	ಶೇಕಡ
೧	ಎ.ಪಿ.ಎಲ್	೦	೦
೨	ಬಿ.ಪಿ.ಎಲ್	೬೦	೬೯.೭೬
೩	ಅಂತ್ಯೋದಯ	೬	೬.೯೭
೪	ಯಾವುದು ಇಲ್ಲ	೨೦	೨೩.೨೫
	ಒಟ್ಟು	೮೬	೧೦೦




ಹಕ್ಕಿಪಿಕ್ಕಿ ಕುಟುಂಬಗಳಲ್ಲಿ ಎಪಿಎಲ್ ಕಾರ್ಡು ಹೊಂದಿರುವ ಸ್ಥಿತಿವಂತರು ಯಾರೂ ಇರುವುದಿಲ್ಲ. ಶೇಕಡ ಪ್ರಮಾಣ ೬೯.೭೬ರಷ್ಟು ಕುಟುಂಬಗಳು ಬಿಪಿಎಲ್ (ಬಡತನ ರೇಖೆಗಿಂತ ಕೆಳಗಿರುವವರ ಪಡಿತರ ಚೀಟಿ) ಹೊಂದಿವೆ. ಶೇಕಡ ಪ್ರಮಾಣ ೬.೯೭ ಕುಟುಂಬಗಳು ಕಡುಬಡತನದಲ್ಲಿದ್ದು ಅಂತ್ಯೋದಯ ಪಡಿತರ ಚೀಟಿಯನ್ನು ಹೊಂದಿವೆ. ಇನ್ನುಳಿದ ಶೇಕಡ ಪ್ರಮಾಣ ೨೩.೨೫ರಷ್ಟು ಕುಟುಂಬಗಳಿಗೆ ಇಂದಿಗೂ ಯಾವುದೇ ರೀತಿಯ ಪಡಿತರ ಚೀಟಿ ಇರುವುದಿಲ್ಲ. ಪಡಿತರ ಚೀಟಿಯನ್ನು ಹೊಂದಲು ಮನೆಯ ವಿದ್ಯುತ್ ಬಿಲ್, ಆಧಾರ ಕಾರ್ಡ್, ವೋಟರ್ ಐಡಿ ಕಾರ್ಡುಗಳು ಅಗತ್ಯವಿರುವುದರೊಂದಿಗೆ ಜಾತಿ ಮತ್ತು ಆದಾಯ ಪತ್ರಗಳ ಅವಶ್ಯಕತೆ ಇರುವುದಾಗಿ ತಿಳಿಸಲಾಗುತ್ತದೆ. ಆದರೆ ಈ ಕುಟುಂಬಗಳಲ್ಲಿ ಒಂದು ದಾಖಲೆ ಇದ್ದರೆ ಮತ್ತೊಂದು ದಾಖಲೆ ಇರುವುದಿಲ್ಲ. ಹೀಗಾಗಿ ಇವರ ಕುಟುಂಬಗಳು ಪಡಿತರ

ಚೀಟಿ ಸೌಲಭ್ಯ ಪಡೆಯಲು ಇಂದಿಗೂ ಸಾಧ್ಯವಾಗುತ್ತಿಲ್ಲ. ಬಿ.ಪಿ.ಎಲ್. ಹಾಗೂ ಅಂತ್ಯೋದಯ ಪಡಿತರ ಚೀಟಿಯನ್ನು ಹೊಂದಿದವರಿಗೆ ಕರ್ನಾಟಕ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಅನ್ನಭಾಗ್ಯದಂತಹ ಯೋಜನೆಗಳು ದುಡಿಯುವ ಬಡವರ್ಗಗಳಾದ ಹಕ್ಕಿಪಿಕ್ಕಿಯಂತಹ ಸಮುದಾಯಗಳಿಗೆ ನೆರವಾಗಿದೆ.

ಕೋಷ್ಟಕ: ೭

ಹಕ್ಕಿಪಿಕ್ಕಿ ಕುಟುಂಬದವರ ಪಶು ಸಂಪತ್ತು ವಿವರಗಳು

ಕ್ರಸಂ	ಪಶುಗಳು	ಸಂಖ್ಯೆ	ಶೇಕಡ
೧	ಹಸು	೦	೦
೨	ಎತ್ತು	೦	೦
೩	ಎಮ್ಮೆ	೦	೦
೪	ಕುರಿ	೦೫	೫.೮೧
೫	ಮೇಕೆ	೦	೦
೬	ಕೋಳಿ	೦೬	೬.೯೭
೭	ಹಂದಿ	೧	೧.೧೬
೮	ಯಾವುದು ಇಲ್ಲ	೭೪	೮೬.೦೪
	ಒಟ್ಟು	**೮೬**	೧೦೦



ಕೃಷಿಯಿಂದ ದೂರವುಳಿದಿರುವುದರಿಂದ ಇವರು ಹಸು, ಎತ್ತು, ಎಮ್ಮೆ ಸಾಕುವುದರಿಂದ ದೂರವಿರುವರು. ಹಿಂದೆ ಆಡುಗಳು ಸಾಕುತ್ತಿದ್ದರಾದರೂ ಇಂದು ಆಡುಗಳ ಸಾಕಣಿಕೆಯಿಂದಲೂ ದೂರವಿರುವರು. ಕೇವಲ ಶೇಕಡ ಪ್ರಮಾಣ ೫.೮೧ರಷ್ಟು ಕುಟುಂಬಗಳು ಮಾತ್ರ ಮನೆಯಲ್ಲಿ ಒಂದೆರಡು ಕುರಿಗಳನ್ನು ಸಾಕಿಕೊಂಡಿರುವರು. ಕೋಳಿ ಸಾಕಣಿಯ ಪ್ರಮಾಣವೂ ಕಡಿಮೆಯಿದ್ದು ಶೇಕಡ ಪ್ರಮಾಣ ೬.೯೭ರಷ್ಟು ಕುಟುಂಬಗಳು ತಮ್ಮ ಆಹಾರಕ್ಕಾಗಿ ಒಂದೆರಡು ಕೋಳಿಗಳನ್ನು ಹೊಂದಿರುವುದು ಕಂಡುಬರುತ್ತಿದೆ. ಶೇಕಡ ಪ್ರಮಾಣ ೧.೧೬ರಷ್ಟು ಕುಟುಂಬಗಳು ಹಂದಿ ಸಾಕಣಿಕೆಯನ್ನು ಮಾಡುತ್ತಿವೆ. ಶೇಕಡ ಪ್ರಮಾಣ ೮೬.೦೪ ಕುಟುಂಬಗಳು ಯಾವುದೇ ರೀತಿಯ ಪಶು ಸಂಪತ್ತನ್ನು ಹೊಂದಿಲ್ಲ. ಹಿಂದೆ ಬೇಟೆಯ ಉದ್ದೇಶಕ್ಕಾಗಿ ನಾಯಿಗಳನ್ನು ಸಾಕುತ್ತಿದ್ದರೂ ಇಂದು ಬೇಟೆಗಾರಿಕೆ ನಿಂತುಹೋಗಿರುವುದರಿಂದ ನಾಯಿ ಸಾಕಣೆಯೂ ಇರುವುದಿಲ್ಲ.

೪.೧೪. ಕರ್ನಾಟಕದ ಪರಿಶಿಷ್ಟ ಪಂಗಡದ ಕೆಲಸಗಾರರ ಪ್ರಮಾಣ

'ಕರ್ನಾಟಕದ ಒಟ್ಟು ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು, ಅದರಲ್ಲಿ ಪರಿಶಿಷ್ಟ ಪಂಗಡದ ಕೆಲಸಗಾರರನ್ನು ವಿಂಗಡಸಿದರೆ ದೊರೆಯುವ ಅಂಕಿ ಅಂಶಗಳನ್ನು ಶೇಕಡವಾರುಗಳಲ್ಲಿ ನೀಡಲಾಗಿದೆ. ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣವು ಶೇಕಡ ೪೯.೪೦ ಇದ್ದು ಇದರಲ್ಲಿ ಪುರುಷರು ಶೇಕಡ ೫೮.೩ ಮಹಿಳೆಯರು ಶೇಕಡ ೭೧.೭ ರಷ್ಟಿದ್ದಾರೆ. ಒಟ್ಟು ಪರಿಶಿಷ್ಟ ಪಂಗಡದ ಜನಸಂಖ್ಯೆಯಲ್ಲಿ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಕೆಲಸಗಾರರನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೫೧.೫೦ ಇದ್ದು ಇದರಲ್ಲಿ ಪುರುಷರು ಶೇಕಡ ೫೭.೬೦ ಹಾಗೂ ಮಹಿಳೆಯರು ಶೇಕಡ ೪೫.೩೦ರಷ್ಟಿದ್ದಾರೆ. ಹಾಗೇ ನಗರ ಪ್ರದೇಶದಲ್ಲಿ ಪರಿಶಿಷ್ಟ ಪಂಗಡದ ಒಟ್ಟು ಕೆಲಸಗಾರರ ಪ್ರಮಾಣ ಶೇಕಡ ೩೭.೬೦ ಇದ್ದು ಇದರಲ್ಲಿ ಪುರುಷರು ಶೇಕಡ ೫೨.೬೦ ಹಾಗೂ ಮಹಿಳೆಯರು ಶೇಕಡ ೨೧.೯೦ರಷ್ಟಿದ್ದಾರೆ.

'೦' ವಯೋಮಾನದಿಂದ ೧೮ ವರ್ಷದವರೆಗಿನ ಮತ್ತು ೬೦ ವರ್ಷಕ್ಕೆ ಮೇಲ್ಪಟ್ಟವರನ್ನು ಕೆಲಸಗಾರರೆಂದು ಪರಿಗಣಿಸಿರುವುದಿಲ್ಲ. ಹೀಗಾಗಿ ಇಂತಹ ಕೆಲಸಗಾರರಲ್ಲದವರ ಒಟ್ಟು ಪ್ರಮಾಣ ಶೇಕಡ ೫೦.೬ರಷ್ಟಿದೆ.

ಮುಖ್ಯ ಕೆಲಸಗಾರರೆಂದು ಪರಿಗಣಿತವಾದವರ ಒಟ್ಟು ಪ್ರಮಾಣವು ಶೇಕಡ ೭೭.೯೦ರಷ್ಟಿದೆ. ಇದರಲ್ಲಿ ಗ್ರಾಮೀಣ ಪ್ರದೇಶದ ಒಟ್ಟು ಮುಖ್ಯ ಕೆಲಸಗಾರರು ಶೇಕಡ ೭೬.೪೦ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೮೯.೧೦ರಷ್ಟಿದೆ.

ಖಾಯಂ ಆಗಿ ವರ್ಷಪೂರ್ತಿ ಕೆಲಸವಿಲ್ಲದೆ ಅರೆಕಾಲಿಕ ಕೆಲಸಗಾರರಾಗಿ ದುಡಿಯುವವರ ಪ್ರಮಾಣವು ಒಟ್ಟು ಶೇಕಡ ೨೨.೧ ಇದ್ದು ಇದು ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಶೇಕಡ ೨೩.೬೦ ರಷ್ಟಿದ್ದರೆ ನಗರ ಪ್ರದೇಶದಲ್ಲಿ ಇವರ ಪ್ರಮಾಣವು ಶೇಕಡ ೧೦.೯೦ರಷ್ಟಿದೆ' (೨೦೧೧ರ ಜನಗಣತಿ ವರದಿ)


ಭಾರತದಲ್ಲಿ ೦-೬ ಹಾಗೂ ೬-೧೮ ವರ್ಷದೊಳಗಿನ ಮಕ್ಕಳು ಯಾವುದೇ ಕೆಲಸದಲ್ಲಿ ತೊಡಗಲು ಯೋಗ್ಯರಲ್ಲವೆಂದು ಪರಿಗಣಿಸಲಾಗುತ್ತದೆ. ಅಕಸ್ಮಾತ್ ಅವರು ಯಾವುದೇ ವೃತ್ತಿಯಲ್ಲಿ ತೊಡಗಿದರೆ ಅದು ಅಪರಾಧವೆಂದೇ ಪರಿಗಣಿತವಾಗುವುದು. ಅದೇ ರೀತಿ ೬೦ ವರ್ಷಗಳನ್ನು ದಾಟಿದ ವ್ಯಕ್ತಿಗಳನ್ನು ನಿವೃತ್ತರು,

ವಿಶ್ರಾಂತಿ ತೆಗೆದುಕೊಳ್ಳುವ ವಯೋಮಾನದವರೆಂದು ಪರಿಗಣಿಸಲಾಗುವುದು. ಹೀಗಾಗಿ ೦-೧೮ ಹಾಗೂ ೬೦ ವರ್ಷ ಮೇಲ್ಪಟ್ಟ ವಯೋಮಾನದವರನ್ನು ಕಾಯಕರ್ಹರಲ್ಲವೆಂದೇ ಪರಿಗಣಿಸಲಾಗುವುದು.

ಕೋಷ್ಟಕ: ೮

ಕಾಯಕಾರ್ಹರಾದವರ ಜನಸಂಖ್ಯೆ

ಕ್ರಸಂ	ಕಾಯಕಾರ್ಹವದವರು			ಕಾಯಕಾರ್ಹರಲ್ಲದವರು		
	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
೦೧	೧೦೬	೧೨೦	೨೨೬	೧೦೨	೧೧೯	೨೨೧




ಕಂಪ್ಲಿಯಲ್ಲಿ ಸಮೀಕ್ಷೆಗೊಳಪಡಿಸಿದ ೮೬ ಹಕ್ಕಿಪಿಕ್ಕಿ ಕುಟುಂಬದಿಂದ ಒಟ್ಟು ೪೪೭ ಜನಸಂಖ್ಯೆಯಲ್ಲಿ ಒಟ್ಟು ೨೨೬ ಜನ ಕಾಯಕಾರ್ಹವಾಗಿರುವರು. ಇದರಲ್ಲಿ ೧೦೬ ಪುರುಷರು (ಶೇಕಡ ಪ್ರಮಾಣ ೪೬.೯ರಷ್ಟು), ೧೨೦ ಮಹಿಳೆಯರು ಕಾಯಕಾರ್ಹರಾಗಿರುವರು (ಶೇಕಡ ಪ್ರಮಾಣ ೫೩.೦೯ರಷ್ಟು). ಇನ್ನು ೨೨೧ ಜನರು ಕಾಯಕಾರ್ಹರಲ್ಲದವರು. ಇದರಲ್ಲಿ ೧೦೨ ಪುರುಷರು (ಶೇಕಡ ಪ್ರಮಾಣ ೪೬.೧೫ರಷ್ಟು) ಹಾಗೂ ೧೧೯ ಮಹಿಳೆಯರು (ಶೇಕಡ ಪ್ರಮಾಣ ೫೩.೮೪ರಷ್ಟು) ಕಾಯಕಾರ್ಹರರಲ್ಲವೆಂದು ಪರಿಗಣಿಸಲಾಗಿದೆ.

ಕೋಷ್ಟಕ: ೯

ಹಕ್ಕಿಪಿಕ್ಕಿ ಸಮುದಾಯದ ಕಾಯಕ ನಿರತರ ವಿವರ

ಕ್ರಸಂ	ಕಾಯಕಾರ್ಹರು			ಕಾಯಕ ನಿರತರು		
೧	ಗಂ	ಹೆ	ಒಟ್ಟು	ಗಂ	ಹೆ	ಒಟ್ಟು
೨	೧೦೬	೧೨೦	೨೨೬	೧೨೫	೧೩೮	೨೬೩




ಹಕ್ಕಿಪಿಕ್ಕಿಯರಲ್ಲಿ ಕಾಯಕಾರ್ಹರಾದವರು ಒಟ್ಟು ೨೨೬ ಜನರಿರುವರು. ಇದರಲ್ಲಿ ಪುರುಷರು ೧೦೬ (ಶೇಕಡ ಪ್ರಮಾಣ ೪೬.೯೦ರಷ್ಟು) ಹಾಗೂ ಮಹಿಳೆಯರು ೧೨೦ ಜನರಿರುವರು (ಶೇಕಡ ಪ್ರಮಾಣ ೫೩.೦೯ರಷ್ಟು). ಆದರೆ ಕಾಯಕ ನಿರತರು ೨೬೩ ಜನರಿರುವರು. ಕಾಯಕ ನಿರತರಲ್ಲಿ ಪುರುಷರು ೧೨೫, (ಶೇಕಡ ಪ್ರಮಾಣ ೪೭.೫೨ರಷ್ಟು) ಹಾಗೂ ಮಹಿಳೆಯರು ೧೩೮ ಜನರಿರುವರು (ಶೇಕಡ ಪ್ರಮಾಣ ೫೨.೪೭ರಷ್ಟು). ಹಕ್ಕಿಪಿಕ್ಕಿಯರಲ್ಲಿ ಕಾಯಕಾರ್ಹರಿಗಿಂತ ಕಾಯಕನಿರತರ ಪ್ರಮಾಣವು ಅಧಿಕವಾಗಿದೆ.

ಕೋಷ್ಟಕ: ೧೦

ಹಕ್ಕಿಪಿಕ್ಕಿಯವರ ಅವಲಂಬಿತ ವೃತ್ತಿಗಳು

ಕ್ರಸಂ	ವೃತ್ತಿಯ ವಿವರ	ಕಾಯಕಾರ್ಹರು		
		ಗಂ	ಹೆ	ಒಟ್ಟು
೧	ಕೃಷಿ ಕೂಲಿ	೪೬	೬೫	೧೧೧
೨	ಕೃಷಿಯೇತರ ಕೂಲಿ	೬೯	೬೮	೧೩೭
೩	ಸಣ್ಣ ವ್ಯಾಪಾರ	೦೨	೦	೦೨
೫	ಸರ್ಕಾರಿ ವೃತ್ತಿ	೦	೦	೦
೬	ಮನೆಕೆಲಸ	೦	೦೩	೦೩
೭	ಇತರೆ	೨೨	೦೨	೨೪
	ಒಟ್ಟು	೧೨೫	೧೩೮	೨೬೩



ಕಂಪ್ಲಿ ಸುತ್ತಮುತ್ತಲ ಮಾಗಾಣಿಯಲ್ಲಿ ಕೃಷಿ ಚಟುವಟಿಕೆಗಳು ಪ್ರಾರಂಭವಾದಾಗ ಕೃಷಿಕೂಲಿಗಳ ಅಭಾವವಾದಾಗ ಕೃಷಿಕರು ಅನಿವಾರ್ಯವಾಗಿ ಹಕ್ಕಿಪಿಕ್ಕಿ ಸಮುದಾಯದ ಪುರುಷರು ಮತ್ತು ಮಹಿಳೆಯರು

ಕೃಷಿಕೂಲಿಗಳಾಗಿ ಕಾರ್ಯನಿರ್ವಹಿಸುವರು. ಪುರುಷರು ಜಮೀನಿಗೆ ನೀರು ಕಟ್ಟುವುದು, ಕೃಷಿ ಬೆಳೆ ಕಾಯುವ ಕೆಲಸ ಮಾಡಿದರೆ ಮಹಿಳೆಯರು ಕಳೆ ತೆಗೆಯುವ, ಭತ್ತದ ಸಸಿ ಹಚ್ಚುವ, ಮೆದೆ ಹೋರುವ, ಮೆಣಸಿನ ಕಾಯಿ, ಹತ್ತಿಯನ್ನು ಬಿಡಿಸುವ ಮುಂತಾದ ಕೃಷಿ ಕೆಲಸಗಳಿಗೆ ಕೂಲಿಯಾಗಿ ಹೋಗುವರು. ಕೃಷಿ ಕೂಲಿಗಳಲ್ಲಿ ಪುರುಷರು ೪೬ ಜನರಿದ್ದರೆ ಮಹಿಳೆಯರು ೬೫ ಜನರಿರುವರು. ಕೃಷಿ ಕೂಲಿಯು ಇವರಿಗೆ ನಿರಂತರವಾಗಿಯೇನೂ ದೊರೆಯುವುದಿಲ್ಲ. ಸುಗ್ಗಿ ಕಾಲದಲ್ಲಿ ಮಾತ್ರ ಕೃಷಿ ಕೂಲಿ ದೊರೆಯುತ್ತಿದ್ದು ತರುವಾಯ ನಿರುದ್ಯೋಗಿಗಳಾಗಿ ಇಲ್ಲವೆ ಬೇರೆ ಕೆಲಸಗಳನ್ನು ಹುಡುಕಿಕೊಂಡು ಪರವೂರುಗಳಿಗೆ ಹೋಗುವರು.


ಕೃಷಿಯೇತರ ಕೂಲಿಗಳಾಗಿ ೬೯ ಪುರುಷರು ಕಾರ್ಯನಿರ್ವಹಿಸುವರು. ಸಾಮಾನ್ಯವಾಗಿ ಸಿಮೆಂಟು, ಇತರೆ ಸಾಮಾಗ್ರಿಗಳನ್ನು ಎತ್ತುವ, ಇಳಿಸುವ ಹಮಾಲಿ ವೃತ್ತಿಯನ್ನು ಪುರುಷರು ಮಾಡುವರು. ೬೮ ಮಹಿಳೆಯರು ಇತರ ಮನೆಗಳಲ್ಲಿ ಕಸ, ಮುಸುರೆಯ ಕೆಲಸಕ್ಕೆ ಹೋಗುವರು.

ಹಕ್ಕಿಪಿಕ್ಕಿ ಕಾಲೋನಿಯಲ್ಲಿಯ ಇಬ್ಬರು ಪುರುಷರು ಚಿಕ್ಕದಾದ ಬೀಡಿ ಅಂಗಡಿ (ಡಬ್ಬ ಅಂಗಡಿ) ಇರಿಸಿಕೊಂಡಿರುವರು. ಹಕ್ಕಿಪಿಕ್ಕಿಯರಲ್ಲಿ ಗಂಡು ಹೆಣ್ಣು ಎನ್ನುವ ಭೇದವಿರದೆ ಕುಟುಂಬದ ನಿರ್ವಹಣೆಗಾಗಿ ದುಡಿಯುವರು. ಆದರೆ ಕೇವಲ ಮೂರು ಜನ ಮಹಿಳೆಯರು ಗೃಹಿಣಿಯರಾಗಿ ಮನೆಯೊಳಗಿನ ಮನೆಕೆಲಸ ಕಾರ್ಯಗಳನ್ನು ಮಾತ್ರ ಮಾಡುತ್ತಿರುವರು. ಯಾವುದೇ ಕೂಲಿ ಮಾಡಲು ಸಾಧ್ಯವಾಗದ ವೃದ್ಧರು ರದ್ದಿ ಆಯುವ ಕೆಲಸವನ್ನು ಮಾಡುವರು. ಈ ರೀತಿ ರದ್ದಿ ಆಯುವ ಕಾಯಕವನ್ನು ೨೦ ಜನ ಪುರುಷರು ಮಾಡುವರು. ಇನ್ನುಳಿದ ಎರಡು ಜನ ಭಿಕ್ಷಾಟನೆಯಿಂದ ಜೀವನ ನಿರ್ವಹಣೆ ಮಾಡುವರು. ಹಾಗೆಯೇ ಇಬ್ಬರು ಮಹಿಳೆಯರೂ ಸಹ ಭಿಕ್ಷಾಟನೆಯಿಂದ ಜೀವನ ಮಾಡುವರು. ಒಟ್ಟಾರೆ ಹೇಳುವುದಾದರೆ ಕಾಯಕಾರ್ಹರಿಗಿಂತ ಕಾಯಕನಿರತರೇ ಹೆಚ್ಚಾಗಿದ್ದು ಸ್ವಾಭಿಮಾನದ ಜೀವನ ನಡೆಸುವರು.

ಕೋಷ್ಟಕ: ೧೧.

ಸಂಪನ್ಮೂಲ ವ್ಯಕ್ತಿಗಳ ವಯೋಮಾನದ ವಿವರಗಳು

ಕ್ರಸಂ	ವಯಸ್ಸು	ಒಟ್ಟು	ಶೇಕಡಾ
೧	೧೫-೩೦	೩೨	೩೭.೨
೨	೩೧-೪೫	೩೮	೪೪.೧೮
೩	೪೬-೬೦	೧೫	೧೭.೪೪
೪	೬೦ ಕ್ಕಿಂತ ಹೆಚ್ಚು	೧	೧.೧೬
	ಒಟ್ಟು	೮೬	೧೦೦




ಕೋಷ್ಟಕ ೧೧ರಲ್ಲಿ ಸಂಪನ್ಮೂಲ ವ್ಯಕ್ತಿಗಳ ವಯೋಮಾನದ ವಿವರಣೆಯನ್ನು ನೀಡಲಾಗಿದ್ದು, ಮಾಹಿತಿಯನ್ನು ನೀಡುವಲ್ಲಿ ಸಂಪನ್ಮೂಲ ವ್ಯಕ್ತಿಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತಾರೆ. ಸಂಪನ್ಮೂಲ ವ್ಯಕ್ತಿಗಳು ನೀಡಿರುವ ಮಾಹಿತಿಗಳು ನಿಬಂಧ ರಚಿಸುವಲ್ಲಿ ಸಹಕಾರಿಯಾಗುತ್ತದೆ. ಇದರಲ್ಲಿ ಶೇಕಡ ಪ್ರಮಾಣ ೩೭.೨ರಷ್ಟು ಸಂಪನ್ಮೂಲ ವ್ಯಕ್ತಿಗಳು ೧೫ ರಿಂದ ೩೦ ವರ್ಷದ ಒಳಗಿನವರಾಗಿದ್ದಾರೆ. ಶೇಕಡ ಪ್ರಮಾಣ ೪೪.೧೮ ರಷ್ಟು ೩೧ ರಿಂದ ೪೫ ವರ್ಷದ ಒಳಗಿನವರಾಗಿದ್ದಾರೆ. ಶೇಕಡ ಪ್ರಮಾಣ ೧೭.೪೪ ರಷ್ಟು ೪೬ ರಿಂದ ೬೦ ವರ್ಷದ ಒಳಗಿನವರಾಗಿದ್ದು. ಹಾಗೂ ಶೇಕಡ ಪ್ರಮಾಣ ೧.೧೬ರಷ್ಟು ೬೦ಕ್ಕಿಂತ ಹೆಚ್ಚು ವಯಸ್ಸಿನವರಿದ್ದಾರೆ.

ಕೋಷ್ಟಕ: ೧೨.

ಸಂಪನ್ಮೂಲ ವ್ಯಕ್ತಿಗಳ ಲಿಂಗವಾರು ವಿವರಗಳು

ಕ್ರಸಂ	ಗಂಡು		ಹೆಣ್ಣು		ಒಟ್ಟು	
೧	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ	ಸಂಖ್ಯೆ	ಶೇಕಡ
	೪೦	೪೬.೫೧	೪೬	೫೩.೪೮	೮೬	೧೦೦






ಕೋಷ್ಟಕ ೧೨ ರಲ್ಲಿ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಸಮೀಕ್ಷೆಗೆ ಒಳಪಡಿಸಿದ ಒಟ್ಟು ೮೬ ಕುಟುಂಬಗಳಲ್ಲಿ ಸಂಪನ್ಮೂಲ ವ್ಯಕ್ತಿಗಳ ಲಿಂಗವಾರು ವಿವರಗಳನ್ನು ನೀಡಲಾಗಿದೆ. ಇದರಲ್ಲಿ ಶೇಕಡ ಪ್ರಮಾಣ ೪೬.೫೧ ರಷ್ಟು ಪುರುಷರಾಗಿದ್ದು, ಇನ್ನು ಶೇಕಡ ಪ್ರಮಾಣ ೫೩.೪೮ ರಷ್ಟು ಮಹಿಳೆಯರಿದ್ದಾರೆ ಎಂದು ಈ ಕೋಷ್ಟಕದ ಮೂಲಕ ತಿಳಿದುಬರುತ್ತದೆ.

ಕೋಷ್ಟಕ: ೧೩

ಸಂಪನ್ಮೂಲ ವ್ಯಕ್ತಿಗಳ ಶಿಕ್ಷಣ ವಿವರಗಳು

ಕ್ರಸಂ	ಶಿಕ್ಷಣ	ಸಂಖ್ಯೆ	ಶೇಕಡ
೧	ಅನಕ್ಷರಸ್ಥರು	೬೫	೭೫.೫೮
೨	ಪ್ರಾಥಮಿಕ	೬	೬.೯೭
೩	ಮಾಧ್ಯಮಿಕ	೮	೯.೩
೪	ಪ್ರೌಢ	೬	೬.೯೭
೫	ಪದವಿ ಪೂರ್ವ	೧	೧.೧೬
೬	ಪದವಿ	೦	೦
	ಒಟ್ಟು	೮೬	೧೦೦






ಕೋಷ್ಟಕ ೧೩ ರಲ್ಲಿ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡ ಸಂಪನ್ಮೂಲ ವ್ಯಕ್ತಿಗಳ ಶಿಕ್ಷಣದ ಪ್ರಮಾಣವನ್ನು ಸೂಚಿಸಲಾಗಿದೆ. ಒಟ್ಟು ೮೬ ಕುಟುಂಬಗಳಲ್ಲಿ ಶೇಕಡ ಪ್ರಮಾಣ ೭೫.೫೮ ರಷ್ಟು ಸಂಪನ್ಮೂಲ ವ್ಯಕ್ತಿಗಳು ಅನಕ್ಷರಸ್ಥರಾಗಿದ್ದು ಶೇಕಡ ಪ್ರಮಾಣ ೯.೭ ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದವರಾಗಿದ್ದಾರೆ. ಶೇಕಡ ಪ್ರಮಾಣ ೯.೩ ರಷ್ಟು ಮಾಧ್ಯಮಿಕ ಶಿಕ್ಷಣವನ್ನು ಪಡೆದವರಾಗಿದ್ದಾರೆ. ಪೌಢ ಶಿಕ್ಷಣವನ್ನು ಶೇಕಡ ಪ್ರಮಾಣ ೬.೯೭ ರಷ್ಟು ಸಂಪನ್ಮೂಲ ವ್ಯಕ್ತಿಗಳು ಪಡೆದಿದ್ದಾರೆ. ಶೇಕಡ ಪ್ರಮಾಣ ಪದವಿ ಪೂರ್ವ ಶಿಕ್ಷಣವನ್ನು ೧.೧೬ ರಷ್ಟು ಪಡೆದಿದ್ದು ಪದವಿ ವಿದ್ಯಾಭ್ಯಾಸವು ಶೇಕಡ ೦ ರಷ್ಟಿದೆ ಎಂದು ತಿಳಿಯುತ್ತದೆ. ಪದವಿಯನ್ನು ವಿದ್ಯಾಭ್ಯಾಸ ಮಾಡಿದವರು ಯಾರು ಇಲ್ಲವೆಂದು ತಿಳಿದುಬರುತ್ತದೆ.

ಕೋಷ್ಟಕ: ೧೪

ಹಕ್ಕಿಪಿಕ್ಕಿ ಕುಟುಂಬದವರ ಮಾಸಿಕ ಅದಾಯ ವಿವರಗಳು

ಕ್ರ.ಸಂ	ಅದಾಯ	ಸಂಖ್ಯೆ	ಶೇಕಡ
೧	೦-೧೦೦೦	೧	೧.೧೬
೨	೧೦೦೧-೨೦೦೦	೫೫	೬೩.೯೫
೩	೨೦೦೧-೩೦೦೦	೧೯	೨೨.೦೯
೪	೩೦೦೧-೪೦೦೦	೯	೧೦.೪೬
೫	೪೦೦೧-೫೦೦೦	೨	೨.೩೨
	ಒಟ್ಟು	೮೬	೧೦೦




ಕೋಷ್ಟಕ ೧೪ರಲ್ಲಿ ಹಕ್ಕಿಪಿಕ್ಕಿಯರ ಮಾಸಿಕ ಆದಾಯದ ಅಂಕಿ ಅಂಶಗಳನ್ನು ನೀಡಲಾಗಿದೆ. ಆದಾಯವು ವ್ಯಕ್ತಿಯ ಜೀವನ ಗುಣಮಟ್ಟವನ್ನು ತೋರಿಸುತ್ತದೆ. ಹೆಚ್ಚು ಆದಾಯ ಪಡೆಯುವವರ ಜೀವನ ಗುಣಮಟ್ಟವು ಉನ್ನತವಾಗಿರುತ್ತದೆ. ಆದಾಯ ಕಡಿಮೆ ಇರುವವರ ಜೀವನದ ಗುಣಮಟ್ಟವು ಕೇಳಸ್ಥರವಾಗಿರುವುದನ್ನು ಕಾಣುತ್ತೇವೆ. ಹೀಗೆ ಹಕ್ಕಿಪಿಕ್ಕಿಯರ ಆದಾಯದ ವಿವರಗಳನ್ನು ನೋಡುವುದಾದರೆ. ಸಂಮೀಕ್ಷೆಗೆ ಒಳಪಡಿಸಿದ ಒಟ್ಟು ೮೬ ಹಕ್ಕಿಪಿಕ್ಕಿ ಕುಟುಂಬಗಳಲ್ಲಿ ಶೇಕಡ ಪ್ರಮಾಣ ೧.೧೬ರಷ್ಟು ಕುಟುಂಬದವರ ಮಾಸಿಕ ಅದಾಯ ೦ ರಿಂದ ೧೦೦೦ ವರೆಗೆ ಇದೆ. ಶೇಕಡ ಪ್ರಮಾಣ ೬೩.೯೫ ರಷ್ಟು ಕುಟುಂಬದವರ ಅದಾಯವು ೧೦೦೧ ರಿಂದ ೨೦೦೦ ವರೆಗೆ ಇದ್ದು. ಶೇಕಡ ಪ್ರಮಾಣ ೨೨.೦೯ರಷ್ಟು ಕುಟುಂಬದವರ ಅದಾಯವು ೨೦೦೧ ರಿಂದ ೩೦೦೦ ವರೆಗೆ ಇದೆ. ಶೇಕಡ ಪ್ರಮಾಣ ೧೦.೪೬ ರಷ್ಟು ಕುಟುಂಬದವರ ಅದಾಯವು ೩೦೦೧ ರಿಂದ ೪೦೦೦ ವರೆಗೆ ಇದ್ದು, ಶೇಕಡ ಪ್ರಮಾಣ ೨.೩೨ ರಷ್ಟು ಕುಟುಂಬದವರ ಅದಾಯವು ೪೦೦೧ ರಿಂದ ೫೦೦೦ ವರೆಗೆ ಇದೆ ಎಂದು ಅಧ್ಯಯನದ ಸಮೀಕ್ಷೆಯಿಂದ ತಿಳಿದುಬರುತ್ತದೆ.

ಕೋಷ್ಟಕ: ೧೫

ಸಂಪನ್ಮೂಲ ವ್ಯಕ್ತಿಗಳ ಬ್ಯಾಂಕ್ ಖಾತೆಯ ವಿವರಗಳು

ಕ್ರಸಂ	ಬ್ಯಾಂಕಿನ ಹೆಸರು	ಸಂಖ್ಯೆ	ಶೇಕಡ
೧	ಸಹಕಾರಿ ಬ್ಯಾಂಕು	೦	೦
೨	ಪ್ರಾದೇಶಿಕ ಗ್ರಾಮೀಣ ಬ್ಯಾಂಕು	೦೭	೮.೧೩
೩	ಅಂಚೆ ಬ್ಯಾಂಕು	೦	೦
೪	ರಾಷ್ಟ್ರೀಕೃತ ಬ್ಯಾಂಕು	೩೭	೪೩.೦೨
೫	ಖಾಸಗಿ ಬ್ಯಾಂಕು	೩	೩.೪೮
೬	ಬ್ಯಾಂಕ್ ಖಾತೆ ಇಲ್ಲ	೩೯	೪೫.೩೪
	ಒಟ್ಟು	೮೬	೧೦೦




ಕೋಷ್ಟಕ ೧೫ರಲ್ಲಿ ಸಂಪನ್ಮೂಲ ವ್ಯಕ್ತಿಗಳ ಬ್ಯಾಂಕ್ ಖಾತೆಯ ವಿವರಗಳನ್ನು ಸೂಚಿಸಲಾಗಿದೆ. ಈ ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ಸಹಕಾರಿ ಬ್ಯಾಂಕು ಮತ್ತು ಅಂಚೆ ಬ್ಯಾಂಕುಗಳಲ್ಲಿ ಯಾವುದೇ ರೀತಿಯ ಖಾತೆಗಳು ಹೊಂದಿಲ್ಲದಿರುವುದು ತಿಳಿದುಬರುತ್ತದೆ. ಶೇಕಡ ೮.೧೩ ರಷ್ಟು ಸಂಪನ್ಮೂಲ ವ್ಯಕ್ತಿಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಲ್ಲಿ ಖಾತೆಯನ್ನು ಹೊಂದಿದ್ದಾರೆ, ಶೇಕಡ ಪ್ರಮಾಣ ೪೩.೦೨ ರಷ್ಟು ಸಂಪನ್ಮೂಲ ವ್ಯಕ್ತಿಗಳು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದಾರೆ. ಶೇಕಡ ಪ್ರಮಾಣ ೩.೪೮ ರಷ್ಟು ಸಂಪನ್ಮೂಲ ವ್ಯಕ್ತಿಗಳು ಖಾಸಗಿ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದು ಯಾವುದೇ ರೀತಿಯ ಬ್ಯಾಂಕ್ ಖಾತೆ ಇಲ್ಲದವರು ಶೇಕಡ ಪ್ರಮಾಣ ೪೫.೩೪ ರಷ್ಟು ಸಂಪನ್ಮೂಲ ವ್ಯಕ್ತಿಗಳು ಇದ್ದಾರೆಂಬುದನ್ನು ಕಾಣುತ್ತೇವೆ. ಕೇಂದ್ರ ಸರ್ಕಾರವು ಜಾರಿಗೆತಂದಿರುವ ಜನ್‌ಧನ್ ಖಾತೆಯಿಂದಾಗಿ ಇಂದು ಹಲವಾರು ಹಕ್ಕಿಪಕ್ಕಿ ಕುಟುಂಬದವರು ಬ್ಯಾಂಕ್ ಖಾತೆಯನ್ನು ಹೊಂದಿರುವುದಾಗಿ ತಿಳಿದುಬಂದಿದೆ.

ಕೋಷ್ಟಕ: ೧೬

ಸಂಪನ್ಮೂಲ ವ್ಯಕ್ತಗಳ ಕುಟುಂಬದವರ ಸಾಲದ ಮಾಹಿತಿಗಳ ವಿವರ

ಕ್ರಸಂ	ಮೂಲ	ಸಂಖ್ಯೆ	ಶೇಕಡ
೧	ಖಾಸಗಿ ವ್ಯಕ್ತಿಗಳು	೬೧	೭೦.೯೩
೨	ಖಾಸಗಿ ಹಣಕಾಸು ಸಂಸ್ಥೆಗಳು	೩	೩.೪೮
೩	ಸಹಕಾರಿ ಬ್ಯಾಂಕು	೦	೦
೪	ಪ್ರಾದೇಶಿಕ ಗ್ರಾಮೀಣ ಬ್ಯಾಂಕು	೪	೪.೬೫
೫	ರಾಷ್ಟ್ರೀಕೃತ ಬ್ಯಾಂಕು	೧	೧.೧೬
೬	ಸಾಲ ಇಲ್ಲ	೧೭	೧೯.೭೬
	ಒಟ್ಟು	೮೬	೧೦೦




ಕೋಷ್ಟಕ ೧೬ ರಲ್ಲಿ ಸಮೀಕ್ಷೆಗೆ ಒಳಪಡಿಸಿದ ಒಟ್ಟು ೮೬ ಕುಟುಂಬಗಳ ಸಾಲದ ವಿವರಗಳನ್ನು ಸೂಚಿಸುತ್ತದೆ. ಇದರಲ್ಲಿ ಶೇಕಡ ಪ್ರಮಾಣ ೭೦.೯೩ ರಷ್ಟು ಕುಟುಂಬದವರು ಖಾಸಗಿ ವ್ಯಕ್ತಿಗಳ ಬಳಿ ಸಾಲವನ್ನು ಮಾಡಿದ್ದು, ಶೇಕಡ ಪ್ರಮಾಣ ೩.೪೮ ರಷ್ಟು ಕುಟುಂಬದವರು ಖಾಸಗಿ ಹಣಕಾಸು ಸಂಸ್ಥೆಗಳ ಬಳಿ ಸಾಲ ಮಾಡಿರುವುದಾಗಿ ತಿಳಿಯುತ್ತದೆ. ಸಹಕಾರಿ ಬ್ಯಾಂಕುಗಳಲ್ಲಿ ಯಾವದೇ ರೀತಿಯ ಸಾಲ ಇಲ್ಲವೆಂಬುದು ತಿಳಿಯುತ್ತದೆ. ಶೇಕಡ ಪ್ರಮಾಣ ೪.೬೫ ರಷ್ಟು ಕುಟುಂಬದವರು ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಇದೆ ಎಂದು ಹಾಗೂ ಶೇಕಡ ಪ್ರಮಾಣ ೧೯.೭೬ ರಷ್ಟು ಕುಟುಂಬದವರು ಯಾವುದೇ ರೀತಿಯ ಸಾಲ ಇಲ್ಲ ಎಂಬುದು ಕಂಡುಬರುತ್ತದೆ. ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ ಖಾಸಗಿ ವ್ಯಕ್ತಿಗಳಿಂದ ಹೆಚ್ಚು ಕುಟುಂಬಗಳು ಸಾಲ ಮಾಡಿರುವುದು ತಿಳಿಯುತ್ತದೆ. ಬಹುತೇಕರು ಕೂಲಿಕೆಲಸ ಮಾಡುವವರಾಗಿರುವ ಇವರುಗಳು ತಮ್ಮ ಜೀವನ ನಿರ್ವಹಣೆಗೆ ಹಣಕಾಸಿನ ಸಮಸ್ಯೆ ಉಂಟಾದಾಗ ಲೇವದೇಹಿ ಮಾಡುವವರ ಬಳಿ ಸುಲಭ ಹಾಗೂ ಬೇಗನೆ ಸಾಲ ಸಿಗುವುದರಿಂದ ಇವರ ಬಳಿ ಸಾಲ ತೆಗೆದುಕೊಳ್ಳುವುದು ಕಂಡುಬರುತ್ತದೆ. ಕೆಲವು ಕುಟುಂಬಗಳು ಸಾಲಕ್ಕಾಗಿ ಬ್ಯಾಂಕಿನ ಮೊರೆ ಹೋದ ಸಂದರ್ಭದಲ್ಲಿ ಸಾಲಕ್ಕಾಗಿ ಬ್ಯಾಂಕ್‌ಗೆ ಭದ್ರತೆ ರೂಪದಲ್ಲಿ ಆಸ್ತಿಯ ಆಧಾರಗಳನ್ನು ನೀಡಬೇಕಾಗುತ್ತದೆ. ಕೂಲಿಕೆಲಸವನ್ನು ಮಾಡುವ ಬಡವರು ಈ ಸಮುದಾಯದವರಾಗಿದ್ದು ತಮ್ಮ ಬಳಿ ಯಾವುದೇ ರೀತಿಯ ಆಸ್ತಿ ಇಲ್ಲದಿರುವುದರಿಂದ ಬ್ಯಾಂಕುಗಳಲ್ಲಿ ಸಾಲ ಸಿಗುತ್ತಿಲ್ಲದಿರುವುದು ಸಂಪನ್ಮೂಲ ವ್ಯಕ್ತಿಗಳ ಮಾಹಿತಿಯಿಂದ ತಿಳಿದು ಬರುತ್ತದೆ.

ಕೋಷ್ಟಕ: ೧೭

ಹಕ್ಕಿಪಿಕ್ಕಿ ಕುಟುಂಬದವರ ಉದ್ಯೋಗದ ಸ್ವರೂಪದ ವಿವರಗಳು

ಕ್ರಸಂ	ಸ್ವರೂಪ	ಸಂಖ್ಯೆ	ಶೇಕಡ
೧	ಪೂರ್ಣ ಉದ್ಯೋಗ	೬	೬.೯೭
೨	ಅರೆ ಉದ್ಯೋಗ	೪೮	೫೫.೮೧
೩	ಋತುಮಾನ ಉದ್ಯೋಗ	೩೨	೩೭.೨೦
	ಒಟ್ಟು	೮೬	೧೦೦




ಕೋಷ್ಟಕ ೧೭ ರಲ್ಲಿ ಸಂಪನ್ಮೂಲ ವ್ಯಕ್ತಿಗಳ ಉದ್ಯೋಗದ ಸ್ವರೂಪದ ವಿವರಗಳನ್ನು ನೀಡಲಾಗಿದೆ. ಇದರಲ್ಲಿ ಶೇಕಡ ಪ್ರಮಾಣ ೬.೯೭ ರಷ್ಟು ಕುಟುಂಬದವರು ಪೂರ್ಣ ಉದ್ಯೋಗದಲ್ಲಿದ್ದಾರೆಂದು ತಿಳಿಯುತ್ತದೆ. ಶೇಕಡ ಪ್ರಮಾಣ ೫೫.೮೧ ರಷ್ಟು ಕುಟುಂಬದವರು ಅರೆ ಉದ್ಯೋಗ ಮಾಡುತ್ತಿರುವುದಾಗಿ ತಿಳಿಯುತ್ತದೆ. ಶೇಕಡ ಪ್ರಮಾಣ ೩೭.೨ ರಷ್ಟು ಕುಟುಂಬದವರು ಋತುಮಾನ ಉದ್ಯೋಗವನ್ನು ಮಾಡುತ್ತಿರುವುದಾಗಿ ಕಂಡುಬರುತ್ತದೆ. ಕೋಷ್ಟಕದಲ್ಲಿರುವ ಅಂಕಿಅಂಶಗಳನ್ನು ಗಮನಿಸಿದಾಗ ಋತುಮಾನ ಹಾಗೂ ಅರೆ ಉದ್ಯೋಗ ಮಾಡುವವರು ಹೆಚ್ಚಾಗಿರುವುದನ್ನು ಕಾಣುತ್ತೇವೆ.

ಕೋಷ್ಟಕ: ೧೮

ಹಕ್ಕಿಪಿಕ್ಕಿ ಕುಟುಂಬದವರು ಪಡೆಯುವ ಕೂಲಿಯ ಪ್ರಕಾಗಳು

ಕ್ರಸಂ	ಕೂಲಿಯ ಪ್ರಕಾರ	ಸಂಖ್ಯೆ	ಶೇಕಡ
೧	ಪ್ರತಿನಿತ್ಯ ಪಡೆಯುವ ಕೂಲಿ	೩೫	೪೦.೬೯
೨	ವಾರಕ್ಕೆ ಪಡೆಯುವ ಕೂಲಿ	೪೫	೫೨.೩೨
೩	ಮಾಸಿಕ ಪಡೆಯುವ ಕೂಲಿ	೦೬	೬.೯೭
	ಒಟ್ಟು	೮೬	೧೦೦




ಕೋಷ್ಟಕ ೧೮ ರಲ್ಲಿ ಸಮೀಕ್ಷೆಗೆ ಒಳಪಡಿಸಿದ ಒಟ್ಟು ೮೬ ಹಕ್ಕಿಪಿಕ್ಕಿ ಸಂಪನ್ಮೂಲ ವ್ಯಕ್ತಿಗಳ ಕುಟುಂಬದವರು ಪಡೆಯುವ ಕೂಲಿ ಪ್ರಕಾರವನ್ನು ತಿಳಿಸುತ್ತದೆ. ಬಹುತೇಕರು ಕೃಷಿ ಹಾಗೂ ಕೃಷಿಯೇತರ ಕೂಲಿಕೆಲಸ ಮಾಡುವವರಾಗಿದ್ದು ಇವರು ಪಡೆಯುವ ಕೂಲಿ ಪ್ರಕಾರವು ಹೀಗಿದೆ. ಇದರಲ್ಲಿ ಶೇಕಡ ಪ್ರಮಾಣ ೪೦.೬೯ ರಷ್ಟು ಸಂಪನ್ಮೂಲ ವ್ಯಕ್ತಿಗಳ ಕುಟುಂಬದವರು ಪ್ರತಿನಿತ್ಯ ಕೂಲಿ ಪಡೆಯುವರಾಗಿದ್ದು ಶೇಕಡ ಪ್ರಮಾಣ ೫೨.೩೬ ರಷ್ಟು ಸಂಪನ್ಮೂಲ ವ್ಯಕ್ತಿಗಳ ಕುಟುಂಬದವರು ವಾರಕ್ಕೆ ಕೂಲಿ ಪಡೆಯುವರಾಗಿದ್ದು ಹಾಗೂ ಶೇಕಡ ಪ್ರಮಾಣ ೬.೯೭ ರಷ್ಟು ಸಂಪನ್ಮೂಲ ವ್ಯಕ್ತಿಗಳ ಕುಟುಂಬದವರು ಮಾಸಿಕ ಕೂಲಿ ಪಡೆಯುವರಾಗಿದ್ದಾರೆ ಎಂಬುದು ಮೇಲಿನ ಅಂಕಿ ಅಂಶಗಳನ್ನು ಗಮನಿಸಿದಾಗ ತಿಳಿಯುತ್ತದೆ.

ಕೋಷ್ಟಕ: ೧೯

ಹಕ್ಕಿಪಿಕ್ಕಿ ಕುಟುಂಬದವರ ಮಾಸಿಕ ತರಕಾರಿ ವೆಚ್ಚದ ವಿವರಗಳು

ಕ್ರಸಂ	ತರಕಾರಿ ವೆಚ್ಚ	ಸಂಖ್ಯೆ	ಶೇಕಡ
೧	೨೫೦ ಕಿಂತ್ತ ಕಡಿಮೆ	೨೩	೨೬.೭೪
೨	೨೫೧-೫೦೦	೩೭	೪೩.೦೨
೩	೫೦೧-೭೫೦	೨೦	೨೩.೨೫
೪	೭೫೧-೧೦೦೦	೬	೬.೯೭
	ಒಟ್ಟು	೮೬	೧೦೦




ಕೋಷ್ಟಕ ೧೯ ರಲ್ಲಿ ಸಂಪನ್ಮೂಲ ವ್ಯಕ್ತಿಗಳ ಕುಟುಂಬದವರ ಮಾಸಿಕ ತರಕಾರಿ ವೆಚ್ಚದ ವಿವರಗಳನ್ನು ನಿಡಲಾಗಿದ್ದು. ಇದರಲ್ಲಿ ಶೇಕಡ ಪ್ರಮಾನ ೨೬.೭೪ ರಷ್ಟು ಕುಟುಂಬದವರು ೨೫೦ಕ್ಕಿಂತ ಕಡಿಮೆ ರೂಪಾಯಿಗಳನ್ನು ಮಾಸಿಕ ತರಕಾರಿಗಾಗಿ ವೆಚ್ಚ ಮಾಡುತ್ತಾರೆ. ಶೇಕಡ ಪ್ರಮಾಣ ೪೩.೦೨ ರಷ್ಟು ಕುಟುಂಬದವರು ೨೫೧ ರಿಂದ ೫೦೦ರ ವರೆಗೆ ರೂಪಾಯಿಗಳನ್ನು ಮಾಸಿಕ ತರಕಾರಿಗಾಗಿ ವೆಚ್ಚಮಾಡುತ್ತಿದ್ದಾರೆ. ಶೇಕಡ ಪ್ರಮಾಣ ೨೩.೨೫ ರಷ್ಟು ಕುಟುಂಬದವರು ೫೦೧ ರಿಂದ ೭೫೦ ರೂಪಾಯಿಗಳ ವರೆಗೆ ಮಾಸಿಕ ತರಕಾರಿ ವೆಚ್ಚವನ್ನು ಮಾಡುತ್ತಿದ್ದು. ಹಾಗೂ ಶೇಕಡ ಪ್ರಮಾಣ ೬.೯೭ ರಷ್ಟು ಕುಟುಂಬದವರು ಮಾಸಿಕ ತರಕಾರಿ ವೆಚ್ಚಕ್ಕಾಗಿ ರೂಪಾಯಿ ೭೫೧ ರಿಂದ ೧೦೦೦ ರೂಪಾಯಿ ವರೆಗೆ ಇದೆ ಎಂಬುದು ಅಂಕಿ ಅಂಶಗಳ ಮೂಲಕ ತಿಳಿದುಬರುತ್ತದೆ.

ಕೋಷ್ಟಕ: ೨೦.

ಹಕ್ಕಿಪಿಕ್ಕಿ ವ್ಯಕ್ತಿಗಳ ಕುಟುಂಬದವರ ಮಾಸಿಕ ದಿನಸಿ ವೆಚ್ಚ

ಕ್ರಸಂ	ದಿನಸಿ ವೆಚ್ಚ	ಸಂಖ್ಯೆ	ಶೇಕಡ
೧	೧೦೦೦-೨೦೦೦	೧೨	೧೩.೯೫
೨	೨೦೦೧-೩೦೦೦	೬೪	೭೪.೪೧
೩	೩೦೦೧-೪೦೦೦	೮	೯.೩೦
೪	೪೦೦೧-೫೦೦೦	೨	೨.೩೨
	ಒಟ್ಟು	೮೬	೧೦೦



ಕೋಷ್ಟಕ ೨೧ರಲ್ಲಿ ಸಂಪನ್ಮೂಲ ವ್ಯಕ್ತಿಗಳ ಕುಟುಂಬದವರ ಮಾಸಿಕ ದಿನಸಿ ವೆಚ್ಚವನ್ನು ಸೂಚಿಸುತ್ತದೆ. ಇದರಲ್ಲಿ ಶೇಕಡ ೧೩.೯೫ ರಷ್ಟು ಕುಟುಬಂದವರು ಮಾಸಿಕ ದಿನಸಿ ವೆಚ್ಚಕ್ಕಾಗಿ ೧೦೦೦ ರಿಂದ ೨೦೦೦ ರೂಪಾಯಿಗಳ ವರೆಗೆ ವೆಚ್ಚ ಮಾಡುವವರಾಗಿದ್ದಾರೆ. ಶೇಕಡ ಪ್ರಮಾಣ ೭೪.೪೧ ರಷ್ಟು ಕುಟುಂಬದವರು ಮಾಸಿಕ ದಿನಸಿ ವೆಚ್ಚಕ್ಕಾಗಿ ೨೦೦೧ ರಿಂದ ೩೦೦೦ ರೂಪಾಯಿಗಳ ವರೆಗೆ ವೆಚ್ಚ ಮಾಡುವವರಾಗಿದ್ದಾರೆ. ಶೇಕಡ ಪ್ರಮಾಣ ೮.೯೩ ರಷ್ಟು ಕುಟುಂಬದವರು ಮಾಸಿಕ ದಿನಸಿ ವೆಚ್ಚಕ್ಕಾಗಿ ೩೦೦೧ ರಿಂದ ೪೦೦೦ ರೂಪಾಯಿಗಳ ವರೆಗೆ ವೆಚ್ಚ ಮಾಡುವವರಾಗಿದ್ದು ಹಾಗೂ ೪೦೦೧ ರಿಂದ ೫೦೦೦ ರೂಪಾಯಿಗಳ ವರೆಗೆ ಮಾಸಿಕ ದಿನಸಿ ವೆಚ್ಚ ಮಾಡುವವರು ಶೇಕಡ ಪ್ರಮಾಣ ೨.೩೨ ರಷ್ಟು ಕುಟುಂಬದವರು ಇದ್ದಾರೆಂಬುದು ಈ ಮೇಲಿನ ಅಂಕಿ ಅಂಶಗಳ ಮೂಲಕ ತಿಳಿದುಬರುತ್ತದೆ.

ಅಡಿ ಟಿಪ್ಪಣಿ

೧. ಕಲ್ಲೂರು ಎಂ ಎಸ್, ಪ್ರಭಾಕರ ಶಿಶಿಲ ಬಿ., ಕೃಷಿ ಅರ್ಥಶಾಸ್ತ್ರ, ಕಲಾಪ್ರಕಾಶನ ಬೆಂಗಳೂರು, ೨೦೦೦, ಪುಟ–೩೭.

೨. ಕಲ್ಲೂರು ಎಂ ಎಸ್, ಪ್ರಭಾಕರ ಶಿಶಿಲ ಬಿ, ಕೃಷಿ ಅರ್ಥಶಾಸ್ತ್ರ, ಕಲಾಪ್ರಕಾಶನ ಬೆಂಗಳೂರು, ೨೦೦೦, ಪುಟ–೩೭.

೩. ಅದೇ ಪುಟ–೧೩೨

೪. ಅದೇ ಪುಟ–೧೩೨

೫. ಮಾನವಾಭಿವೃದ್ಧಿ ವರದಿ, ೨೦೦೫, ಪುಟ–೨೬೦

೬. ಕೃಷಿ ಗಣತಿ ವರದಿ, ೨೦೦೧

೭. ಮಾನವಾಭಿವೃದ್ಧಿ ವರದಿ, ೨೦೦೫, ಪುಟ–೨೬೧

೮. ಮಾನವಾಭಿವೃದ್ಧಿ ವರದಿ, ೨೦೦೫, ಪುಟ–೨೦೫

೯. ೨೦೧೧ ರ ಜನಗಣತಿ ವರದಿ

೧೦. ಮಾದರಿ ಸಮೀಕ್ಷೆ; ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ– ೨೦೦೪, ಪುಟ–೨೪

೧೧. ೨೦೧೧ರ ಜನಗಣತಿ ವರದಿ

ಸಮಾರೋಪ

ಫಲಿತಗಳು

ಸಲಹೆಗಳು

ಸಮಾರೋಪ

ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯವನ್ನು ಬ್ರಿಟೀಷರ ಆಡಳಿತಾವಧಿಯಲ್ಲಿ ಬಲವಂತವಾಗಿ ಕಾಡಿನಿಂದ ಹೊರಹಾಕಿರುವುದನ್ನು ಕಾಣುತ್ತೇವೆ. ಈ ಸಮುದಾಯವು ಆಂದಿನಿಂದ ಬದುಕನ್ನು ಕಟ್ಟಿಕೊಳ್ಳಲು ಒಂದು ಕಡೆಯಿಂದ ಇನ್ನೊಂದು ಕಡೆಗೆ ವಿವಿಧ ವೃತ್ತಿಗಳನ್ನು ಮಾಡುತ್ತಾ ಶೋಷಣೆ, ದೌರ್ಜನ್ಯಗಳನ್ನು ಹೆದರಿಸುತ್ತಾ ಹಂತ ಹಂತವಾಗಿ ತಮ್ಮ ಜೀವನನ್ನು ಇಂದು ಕಟ್ಟಿಕೊಂಡಿದ್ದಾರೆ. ಆದರೆ ಇಂದಿಗೂ ಸಹ ಹೀನಾಯ ಸ್ಥಿತಿಯಲ್ಲಿರುವ ಇವರು ಕೃಷಿ ಕೂಲಿ ಹಾಗೂ ಕೃಷಿಯೇತರ ಕೂಲಿ ಆಳುಗಳಾಗಿ ಪರಿಶ್ರಮ ಜೀವನನ್ನು ನಡೆಸುತ್ತಿರುವುದನ್ನು ಕಾಣುತ್ತೇವೆ. ಕೃಷಿ ಚಟುವಟಿಕೆಗಳು ಆರಂಭದ ಸಮಯದಲ್ಲಿ ಇವರಿಗೆ ಹೆಚ್ಚಿನ ಉದ್ಯೋಗ ದೊರೆಯುತ್ತದೆ. ನಂತರ ದಿನಗಳಲ್ಲಿ ಕೃಷಿಯೇತರ ಕೆಲಸಗಳಿಗಾಗಿ ದಿನಗೂಲಿ ಆಳುಗಳಾಗಿ ದುಡಿಯುತ್ತಾರೆ. ಸ್ಥಳೀಯವಾಗಿ ಕೆಲಸವಿಲ್ಲದ ಸಮಯದಲ್ಲಿ ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನು ಕಾಣುತ್ತೇವೆ.

ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಹಕ್ಕಿಪಿಕ್ಕಿಯರನ್ನು ತಲುಪುತ್ತಿಲ್ಲ. ಹೀಗಾಗಿ ಸರ್ಕಾರಿ ಯೋಜನೆಗಳಿಂದ ಹಕ್ಕಿಪಿಕಿಯರು ವಂಚಿತರಾಗಿದ್ದಾರೆ. ಬುಡಕಟ್ಟು ಸಮುದಾಯಗಳಿಗೆ ಮೀಸಲಿರುವ ಅನೇಕ ಕಾರ್ಯಕ್ರಮಗಳು ಸಹ ಹಕ್ಕಿಪಿಕ್ಕಿಯರಂತಹ ಬುಡಕಟ್ಟು ಸಮುದಾಯಗಳಿಗೆ ನೆರವಾಗುತ್ತಿಲ್ಲದಿರುವುದು ಕಂಡುಬರುತ್ತದೆ. ಸಮಸ್ಯೆಗಳಲ್ಲಿಯೇ ಜೀವನ ನಡೆಸುತ್ತಿರುವ ಹಕ್ಕಿಪಿಕ್ಕಿಯರ ನೆಮ್ಮದಿ ಸಂತೋಷಯುತ ಜೀವನಕ್ಕಾಗಿ ಸರ್ಕಾರ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಿದೆ.

ಫಲಿತಗಳು

೧. ಹಕ್ಕಿಪಿಕ್ಕಿಯರು ಶೈಕ್ಷಣಿಕವಾಗಿ ತೀರ ಹಿಂದುಳಿದಿರುವುದನ್ನು ಈ ಅಧ್ಯಯನದಿಂದ ಕಂಡುಬರುತ್ತದೆ. ಬಹುತೇಕ ಅನಕ್ಷರಸ್ಥರು ಇರುವುದನ್ನು ಕಾಣುತ್ತೇವೆ.

೨. ಹಕ್ಕಿಪಿಕ್ಕಿಯರು ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಕೂಲಿ ಹಾಗೂ ಕೃಷಿಯೇತರ ಕೆಲಸದ ಕೂಲಿ ಆಳುಗಳಾಗಿ ದುಡಿಯುವುದನ್ನು ಕಾಣುತ್ತೇವೆ.

೩. ಹಕ್ಕಿಪಿಕ್ಕಿ ಮಹಿಳೆಯರು ಸಹ ಪುರುಷರಂತೆ ದೈಹಿಕವಾದಂತಹ ಶ್ರಮದ ಕೆಲಸವನ್ನು ಮಾಡುವುದನ್ನು ನೋಡುತ್ತೇವೆ.

೪. ಹಕ್ಕಿಪಿಕ್ಕಿಯರು ತಮ್ಮ ವೃತ್ತಿಯಿಂದ ಗಳಿಸುವ ಆದಾಯ ಕಡಿಮೆ ಇರುವುದು ಕಂಡುಬರುತ್ತದೆ ಇದು ಇವರು ಆರ್ಥಿಕವಾಗಿ ಹಿಂದುಳಿದಿರುವಿಕೆಗೆ ಒಂದು ಮುಖ್ಯ ಕಾರಣವಾಗಿರುವುದು.

೫. ಹಕ್ಕಿಪಿಕ್ಕಿಯರಲ್ಲಿ ಬಹುತೇಕರ ಒಟ್ಟು ಮಾಸಿಕ ವೆಚ್ಚವು ಅವರ ಒಟ್ಟು ಮಾಸಿಕ ಆದಾಯಕ್ಕಿಂತ ಹೆಚ್ಚಿರುವುದನ್ನು ಕಾಣುತ್ತೇವೆ. ವೆಚ್ಚಕ್ಕಾಗಿ ಅವರ ಆದಾಯ ತೃಪ್ತಿಕರವಾಗಿಲ್ಲದಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.

೬. ಹಕ್ಕಿಪಿಕ್ಕಿಯರು ವಾಸಿಸುತ್ತಿರುವ ಪ್ರದೇಶವು ಮೂಲಸೌಕರ್ಯಗಳಿಂದ ವಂಚಿತವಾಗಿದ್ದು, ಹಕ್ಕಿಪಿಕ್ಕಿಯರ ವಸತಿಗಳು ಹೀನಾಯ ಸ್ಥಿತಿಯಲ್ಲಿರುವುದನ್ನು ಕಾಣುತ್ತೇವೆ.

೭. ಹಕ್ಕಿಪಿಕ್ಕಿಯರು ಹೆಚ್ಚಾಗಿ ಖಾಸಗಿ ವ್ಯಕ್ತಿಗಳಿಂದ ಸಾಲ ತೆಗೆದುಕೊಳ್ಳುತ್ತಿರುವುದನ್ನು ಹೆಚ್ಚಾಗಿ ನೋಡುತ್ತೇವೆ.

೮. ಹಕ್ಕಿಪಿಕ್ಕಿಯರು ಹೆಚ್ಚಾಗಿ ಅಡುಗೆ ಮಾಡುವುದಕ್ಕೆ ಕಟ್ಟಿಗೆ ಒಲೆಯನ್ನು ಅವಲಂಬಿಸುರುವುದನ್ನು ಕಾಣುತ್ತೇವೆ.

೯. ಹಕ್ಕಿಪಿಕ್ಕಿಯರು ವಾಸಿಸುತ್ತಿರುವ ವಸತಿಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದಿರುವುದು.

೧೦. ಹಕ್ಕಿಪಿಕ್ಕಿಯರಲ್ಲಿ ಗರಿಷ್ಟ ಪ್ರಮಾಣದ ಕುಟುಂಬದವರು ಕೃಷಿ ಭೂಮಿ ಇಲ್ಲದಿರುವುದು ಅಧ್ಯಯನದಿಂದ ತಿಳಿಯುತ್ತದೆ.

೧೧. ಹಕ್ಕಿಪಿಕ್ಕಿಯರು ಹೆಚ್ಚಿನ ಪ್ರಮಾಣದಲ್ಲಿ ಅರೆ ಮತ್ತು ಋತುಮಾನ ವೃತ್ತಿ ಮಾಡುವವರಾಗಿದ್ದು ಪೂರ್ಣಪ್ರಮಾಣದ ವೃತ್ತಿಗಳಿಂದ ವಂಚಿತರಾಗಿದ್ದಾರೆ.

೧೨. ತಾವು ಮಾಡುತ್ತಿರುವ ವೃತ್ತಿಯಿಂದ ಹಕ್ಕಿಪಿಕ್ಕಿಯರು ಆರ್ಥಿಕವಾಗಿ ಬಲಿಷ್ಠರಾಗಿಲ್ಲದಿರುವುದನ್ನು ಕಾಣುತ್ತೇವೆ.

೧೩. ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರು ಮತ್ತು ಮಕ್ಕಳು ಅಪೌಷ್ಟಿಕತೆಯಿಂದ ಹಾಗೂ ಅನಾರೋಗ್ಯದಿಂದ ಬಳಲುತ್ತಿರುವುದು ಕಂಡು ಬರುತ್ತದೆ.

೧೪. ಹಕ್ಕಿಪಿಕ್ಕಿಯರಲ್ಲಿ ಬಹುತೇಕರು ದುಶ್ಚಟದ ದಾಸರಾಗಿದ್ದು ಮದ್ಯಪಾನ ತಂಬಾಕು ದುಶ್ಚಟಗಳಿಗೆ ಬಲಿಯಾಗಿದ್ದಾರೆ.

ಸಲಹೆಗಳು

೧. ಹಕ್ಕಿಪಿಕ್ಕಿಯರು ವಾಸಿಸುತ್ತಿರುವ ಪ್ರದೇಶವು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು, ಈ ಪ್ರದೇಶಕ್ಕೆ ಸರ್ಕಾರವು ಮೂಲಭೂತ ಸೌಕರ್ಯ ಒದಗಿಸುವ ಕಾರ್ಯಮಾಡಬೇಕಾಗಿದೆ.

೨. ಹಕ್ಕಿಪಿಕ್ಕಿಯರು ಶೈಕ್ಷಣಿಕವಾಗಿ ಹಿಂದುಳಿದಿದ್ದು ಹಕ್ಕಿಪಿಕ್ಕಿಯರಿಗೆ ಶಿಕ್ಷಣದ ಬಗ್ಗೆ ಅರಿವು ಮೂಡಿಸಬೇಕು. ಹಾಗೂ ಹಕ್ಕಿಪಿಕ್ಕಿ ಮಕ್ಕಳಿಗೆ ಶಿಕ್ಷಣದ ಸೌಲಭ್ಯ ನೀಡಿ ಅವರ ವಿದ್ಯಾಭ್ಯಾಸಕ್ಕೆ ಸಹಕಾರ ನೀಡಬೇಕು.

೩. ಇವರಲ್ಲಿ ಪೂರ್ಣ ಪ್ರಮಾಣದ ಉದ್ಯೋಗ ಸಿಗದೆ ಉದ್ಯೋಗಕ್ಕಾಗಿ ನೆರೆಯ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದು ಸ್ಥಳೀಯವಾಗಿ ಉದ್ಯೋಗವಕಾಶ ಹೆಚ್ಚಿಸಬೇಕು.

೪. ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗೆ ಇರುವ ಯೋಜನೆಗಳು ಹಕ್ಕಿಪಿಕ್ಕಿಯರಿಗೆ ಸರಿಯಾಗಿ ಲಭಿಸುತ್ತಿಲ್ಲ ಹಕ್ಕಿಪಿಕ್ಕಿಯರಿಗೆ ಈ ಯೋಜನೆಗಳು ದೊರಕುವ ಪ್ರಮಾಣಿಕ ಪ್ರಯತ್ನ ಸರ್ಕಾರದಿಂದ ಆಗಬೇಕು.

೫. ಹಕ್ಕಿಪಿಕ್ಕಿಯರು ಆರ್ಥಿಕವಾಗಿ ಹಿಂದುಳಿದವರಾಗಿದ್ದು ಇವರ ಆರ್ಥಿಕ ಅಭಿವೃದ್ಧಿಗೆ ಸಹಕಾರ (ಸಹಾಯ) ವಾಗುವಂತಹ ಕಾರ್ಯಕ್ರಮಗಳನ್ನು ಸರ್ಕಾರ ಅನುಷ್ಠಾನಗೊಳಿಸಬೇಕಿದೆ.

೬. ಹಕ್ಕಿಪಿಕ್ಕಿಯರ ವಸತಿಗಳು ಹೀನಾಯ ಸ್ಥಿತಿಯಲ್ಲಿದ್ದು, ಇವರುಗಳಿಗೆ ಸರ್ಕಾರದಿಂದ ವಸತಿ ನಿರ್ಮಾಣದ ವವ್ಯಸ್ಥೆಯಾಗಬೇಕು.

೭. ಹಕ್ಕಿಪಿಕ್ಕಿಯರಿಗಾಗಿ ದಾನಿಗಳು ವಾಸಿಸುವುದಕ್ಕೆ ಮತ್ತು ಕೃಷಿಗೆ ಸುಗ್ಗೇನಹಳ್ಳಿಯಲ್ಲಿ ದಾನಿಗಳು ಭೂಮಿಯನ್ನು ನೀಡಿದ್ದು ಈ ಭೂಮಿಯನ್ನು ಬೇರೆಯವರು ಆಕ್ರಮಿಸಿ (ಅತಿಕ್ರಮಿಸಿ)ಕೊಂಡಿದ್ದು ಈ ಭೂಮಿಯನ್ನು ಮರಳಿಕೊಡಿಸುವ ಪ್ರಮಾಣಿಕ ಕೆಲಸವನ್ನು ಸರ್ಕಾರ ಮಾಡಬೇಕು.

೮. ದುಶ್ಚಟಗಳಿಂದ ಆಗುವ ಪರಿಣಾಮದ ಬಗ್ಗೆ ಸರ್ಕಾರ ಹಕ್ಕಿಪಿಕ್ಕಿಯರಲ್ಲಿ ಜಾಗೃತಿ ಮೂಡಿಸಬೇಕಾದಂತಹ ಕೆಲಸವನ್ನು ಸರ್ಕಾರ ಮತ್ತು ಸಂಘ ಸಂಸ್ಥೆಗಳು ಮಾಡಬೇಕು.

೯. ಹಕ್ಕಿಪಿಕ್ಕಿಯರಿಗೆ ಕೌಶಲ್ಯದ ಕೆಲಸಗಳ ಬಗ್ಗೆ ತರಬೇತಿಯನ್ನು ನೀಡಿ, ಅವರನ್ನು ಸ್ವಾವಲಂಬಿಯಾಗಿ ಜೀವಿಸುವ ಅವಕಾಶವನ್ನು ಸರ್ಕಾರ ಮತ್ತು ಸಂಘ ಸಂಸ್ಥೆಗಳು ಮಾಡಬೇಕಿದೆ.

೧೦. ಹಕ್ಕಿಪಿಕ್ಕಿಯರ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ ಶ್ರಮವಹಿಸಬೇಕಿದೆ.

ಅನುಬಂಧಗಳು

ಪ್ರಶ್ನಾವಳಿ

ಸಂಪನ್ಮೂಲ ವ್ಯಕ್ತಿಗಳ ವಿವರ

ಪರಾಮಾರ್ಶನ ಗ್ರಂಥಗಳು

ನಕ್ಷೆ

ಛಾಯಾ ಚಿತ್ರಗಳು

ಕ್ಷೇತ್ರಕಾರ್ಯದ ಪ್ರಶ್ನಾವಳಿ
ಹಕ್ಕಿಪಿಕ್ಕಿ ಬುಡಕಟ್ಟಿನ ಆರ್ಥಿಕ ಜೀವನ

ಸಾಮಾನ್ಯ ಮಾಹಿತಿ

೧. ತಿಳುವಳಿಕೆದಾರರ ಹೆಸರು

೨. ವಯಸ್ಸು

೩. ಲಿಂಗ

೪. ಬೆಡಗು

೫. ಕುಟುಂಬದ ವಿಧ

ಅ. ಅವಿಭಕ್ತ ಕುಟುಂಬ ಆ. ವಿಭಕ್ತ ಕುಟುಂಬ

೬. ವೈವಾಹಿಕ ಜೀವನ

ಅ. ಅವಿವಾಹಿತ ಆ. ವಿವಾಹಿತ

೮. ಕುಟುಂಬದ ಸ್ಥಾನಮಾನ

ಅ. ವಿಚ್ಛೇದಿತ ವಿಧುವೆ ಇ. ವಿಧುರ

ಕೌಟುಂಬಿಕ ಮಾಹಿತಿ

೯. ಕುಟುಂಬದ ಮುಖ್ಯಸ್ಥರ ಹೆಸರು

ಅ. ಕುಟುಂಬದ ಸದಸ್ಯರ ಮಾಹಿತಿ (ಮುಖ್ಯಸ್ಥರನ್ನು ಒಳಗೊಂಡಂತೆ)

ಕ್ರಸಂ.	ಹೆಸರು	ಮುಖ್ಯಸ್ಥರೊಂದಿಗೆ ಸಂಬಂಧ	ವಯಸ್ಸು	ಲಿಂಗ	ವೈವಾಹಿಕ ಸ್ಥಾನಮಾನ	ಶಿಕ್ಷಣ	ವೃತ್ತಿ	ಮತದಾನದ ಗರುತಿನ ಚೀಟಿ	ಆಧಾರ ಕಾರ್ಡ್
೧.									
೨.									
೩.									
೪.									
೫.									
೬.									
೭.									
೮.									
೯.									
೧೦.									

೧೦. ಮಾಸಿಕ ಆದಾಯ ರೂ.-----------------

೧೧. ನಿಮ್ಮ ಕುಟುಂಬದಲ್ಲಿ ಆರ್ಥಿಕ ನಿರ್ಧಾರವನ್ನು ತೆಗೆದುಕೊಳ್ಳುವವರು ಯಾರು?

ಅ. ಗಂಡ   ಆ. ಹೆಂಡತಿ

ಇ. ಇಬ್ಬರೂಸೇರಿ   ಈ. ಕುಟುಂಬದ ಎಲ್ಲರ ತಿರ್ಮಾನ

೧೨. ನಿಮ್ಮ ವೆಚ್ಚದ ವಿವರ

ಅ. ನಿಮ್ಮ ಒಟ್ಟು ಮಾಸಿಕ ವೆಚ್ಚ.________________

ಆ. ಕುಟುಂಬದ ವೆಚ್ಚವನ್ನು ಯಾರೂ ನಿಭಾಯಿಸುತ್ತಾರೆ.

ಅ. ಗಂಡ   ಆ. ಹೆಂಡತಿ

ಇ. ಇಬ್ಬರೂ ಸೇರಿ   ಕುಟುಂಬದ ಎಲ್ಲರ ತಿರ್ಮಾನ

ಇ. ನಿಮ್ಮ ವೆಚ್ಚಕ್ಕಾಗಿ ಆದಾಯ ತೃಪ್ತಿಕರವಾಗಿದೆಯೇ?

ಹೌದು / ಇಲ್ಲ

ಈ. ನಿಮ್ಮ ಆದಾಯ ಕೊರತೆ ಇದ್ದಲ್ಲಿ ಅದನೂ ಹೇಗೆ ನೀಭಾಯಿಸುತ್ತೀರಾ?

ಅ. ಮುಂಗಡ   ಆ. ಇತರ ಮೂಲಗಳಿಂದ ಸಾಲ

ಉ. ನೀವು ಸಾಲ ಪಡೆದಲ್ಲಿ ಮಾಹಿತಿ ನೀಡಿರಿ?

ಕ್ರಸಂ	ಮೂಲ	ಮಾಬಲಗು ರೂ.	ಎಷ್ಟು ಸಾಲ ತೀರಿಸಿದ್ದೀರಿ	ಸಾಲ ಬಾಕಿ ಇದಲ್ಲಿ ರೂ
೧.	ಖಾಸಗಿ ವ್ಯಕ್ತಿಗಳು			
೨.	ಖಾಸಗಿ ಹಣಕಾಸು ಬ್ಯಾಂಕ್			
೩.	ಸಹಕಾರಿ ಬ್ಯಾಂಕ್			
೪.	ಪ್ರದೇಶಿಕ ಗ್ರಾಮೀಣ ಬ್ಯಾಂಕ್			
೫.	ರಾಷ್ಟ್ರೀಕೃತ ಬ್ಯಾಂಕ್			

೧೬. ಕುಟುಂಬದ ಮಾಸಿಕ ಆಹಾರ ವೆಚ್ಚ

ಕ್ರಸಂ	ತರಕಾರಿ	ದಿನಿಸಿ	ಹಾಲು/ಮೊಸರು	ಹಣ್ಣು ಹಾಂಪಲುಗಳು
೧.				
೨.				
೩.				

೧೭. ವಸತಿ ಸೌಲಭ್ಯ

ಅ. ವಸತಿ ಮಾಲಿಕತ್ವದ ನಮೂನೆ

ಅ. ಸ್ವಂತ ಆ. ಬಾಡಿಗೆ ಇ. ಇತರೆ

ಆ. ವಸತಿ ಪ್ರಕಾರ

ಅ. ಗುಡಾರ ಆ. ಅಂಚಿನ ಮನೆ

ಇ. ಗುಡಿಸಲು ಮನೆ ಈ ಸೀಟಿನ ಮನೆ ಉ. ಆರ್.ಸಿ.ಸಿ

ಇ. ಅಡುಗೆ ಮನೆ

ಅ. ಕಟ್ಟಿಗೆ ಹೊಲೆ ಆ. ಸೀಮೆ ಎಣ್ಣೆ

ಇ. ಗ್ಯಾಸ್ ಈ. ಇತರೆ

ಈ. ಕುಡಿಯುವ ನೀರು

ಅ. ಬಾವಿ ಆ. ಕೈಪಂಪ್

ಇ. ನಳದ ನೀರು ಈ. ಇತರೆ

ಉ. ಶೌಚಾಲಯದ ವ್ಯವಸ್ಥೆ ಇದೆಯೇ?

ಹೌದು / ಇಲ್ಲ

ಊ. ವಿದ್ಯೂತ್ ಬಳಕೆ

ಇದೆಯೇ / ಇಲ್ಲ

ಋ. ಪಶು ಸಂಪತ್ತು

ಕ್ರಸಂ	ವಿವರಗಳು	ಸಂಖ್ಯೆ	ಮೌಲ್ಯ
೧.	ಹಸು		
೨.	ಎತ್ತು		
೩.	ಎಮ್ಮೆ		
೪.	ಕುರಿ		
೫.	ಮೇಕೆ		
೬.	ಕೋಳಿ		
೭.	ಇತರೆ		

೧೮. ಸರ್ಕಾರದ ಈ ಸೌಲಭ್ಯ ಹೊಂದಿರುವಿರಾ?

ಅ. ಪಡಿತರ ಚೀಟಿ ಹೊಂದಿರುವಿರಾ?

ಹೌದು / ಇಲ್ಲ

ಆ. ಪಡಿತರ ಚೀಟಿ ಪ್ರಕಾರಗಳು

ಅ. ಬಿ.ಪಿ.ಎಲ್ ಆ. ಎ.ಪಿ.ಎಲ್

ಇ. ವಾಹನ ಚಾಲನೆ ಲೈಸನ್ಸ ಪಡೆದಿರುವಿರಾ?

ಹೌದು / ಇಲ್ಲ

ಉ. ಯಾವ ಬ್ಯಾಂಕ್‌ನಲ್ಲಿ ನಿಮ್ಮ ಖಾತೆ ಇದೆ.

ಅ. ಸಹಕಾರಿ ಬ್ಯಾಂಕ್ ಆ. ಅಂಚೆ ಬ್ಯಾಂಕ್

ಇ. ಗ್ರಾಮೀಣ ಬ್ಯಾಂಕ್ ಈ. ರಾಷ್ಟ್ರೀಯುತ ಬ್ಯಾಂಕ್

೧೯. ನೀವು ಮಾಡುತ್ತಿರುವ ಮೂಲ ವೃತ್ತಿಯಲ್ಲಿ ಬದಲಾವಣೆಯಾಗಿದೇಯೇ?

ಹೌದು / ಇಲ್ಲ

೨೦. ಹೊಸ ಹೊಸ ದುಡಿಮೆಯ ವಿಧಾನಗಳನ್ನು ಅವಲಂಬಿಸಿ ತಮ್ಮ ಸಮುದಾಐ ಬದಲಾಗುತ್ತಿದೆ ಎಂದು ಅನ್ನಿಸುತ್ತಿದೆಯೇ?

ಅ.

ಆ.

ಇ.

ಈ.

೨೧. ನಿಮಗೆ ಕೃಷಿ ಭೂಮಿ ಇದೆಯೇ?

ಅ. ನಿಮಗೆ ಭೂಮಿ ಇದ್ದರೆ ಅದನ್ನು ತಾವು ಹೇಗೆ ಪಡೆದುಕೊಂಡಿರಿ?

ಅ. ಪೂರ್ವಜರಿಂದ ಬಂದಿದ್ದ ಆ. ಸ್ವಂತಕ್ಕೆ ತೆಗೆದುಕೊಂಡಿದ್ದು

ಇ. ಧಾನಿಗಳು ನೀಡಿದ್ದು ಈ. ಸರ್ಕಾರ ಕೋಟ್ಟಿದ್ದು

ಆ. ಕೃಷಿ ಭೂಮಿಯ ಪ್ರಮಾಣ? (ಎಕರೆಯಲ್ಲಿ)

ಅ.

ಇ. ಯಾವ ರೀತಿಯ ಕೃಷಿ ಭೂಮಿ?

ಅ ಮಳೆಧಾರಿತ ಆ. ನೀರಾವರಿ

ಈ. ಕೃಷಿ ಇಂದು ನಿಮ್ಮ ಕುಟುಂಬವನ್ನು ಸಾಕಬಲ್ಲದು ಎಂದೆನ್ನಿಸುತ್ತಿದೆಯೇ?

ಹೌದು / ಇಲ್ಲ – ಕಾರಣಗಳಾವುವು?

೨೨. ನೀವು ಮಾಡುತ್ತಿರುವ ವೃತ್ತಿಯಿಂದ ಆರ್ಥಿಕವಾಗಿ ಅಭಿವೃದ್ಧಿಯಾಗಿದ್ದೀರಿ?

ಹೌದು / ಇಲ್ಲ – ಕಾರಣಗಳಾವುವು?

೨೩. ಇಂದು ನಿಮ್ಮ ಸಮುದಾಯವು ಯಾವ ಬಗೆಯ ದುಡಿಮೆಗಳಲ್ಲಿ ತೊಡಗಿಕೊಂಡಿದೆ ಬೇಗ ಅಭಿವೃದ್ಧಿಯಾಗಬಹುದೆಂದು ಭಾವಿಸುವಿರಿ?

ಹೌದು / ಇಲ್ಲ – ಕಾರಣಗಳಾವುವು?

ಅ. ನೀವು ಮೀಸಲಾತಿಯಿಂದ ಉಪಯೋಗ ಪಡೆದುಕೊಂಡಿದ್ದೀರಾ?

ಹೌದು / ಇಲ್ಲ

ಆ. ಯಾವ ಕ್ಷೇತ್ರದಕ್ಕು ಉಪಯೋಗ ಪಡೆದುಕೊಂಡಿದ್ದಿರೀ?

ಅ. ಶಿಕ್ಷಣ ಆ. ಸರ್ಕಾರಿ ಉದ್ಯೋಗ

ಇ. ಸರ್ಕಾರಿ ಸೌಲಭ್ಯಗಳು ಈ. ಮೇಲಿನ ಎಲ್ಲವೂ

೨೪. ನೀವು ಸರ್ಕಾರದಿಂದ ಯಾವುದಾದರು ಆರ್ಥಿಕ ಸೌಲಭ್ಯ ಪಡೆದಿದ್ದಿರಾ?

ಕ್ರಸಂ	ಯಾವ ರೀತಿಯ ಸೌಲಭ್ಯ	ಆರ್ಥಿಕ ಮೌಲ್ಯ
೧.		
೨.		
೩.		
೪.		

೨೫. ಕೆಳಗೆ ಕಾಣಿಸಿದ ಕ್ಷೇತ್ರಗಳಲ್ಲಿ ನಿಮಗೆ ಸಮಸ್ಯೆಗಳಿದ್ದಲ್ಲಿ ಆದ್ಯತೆಯ ಮೇರೆಗೆ ನಿಮ್ಮ ಪ್ರಮುಖ ಸಮಸ್ಯೆಯನ್ನು ತಿಳಿಸಿರಿ?

ಕ್ರಸಂ	ವಿವರ	ಸಮಸ್ಯೆಗಳು	ಪರಿಹಾರಕ್ಕಾಗಿ ನಿಮ್ಮ ಸಲಹೆಗಳು
೧.	ವಸತಿ		
೨.	ಭೂಮಿ		
೩.	ಕುಡಿಯುವ ನೀರು		
೪.	ಕೂಲಿ		
೫.	ಕೃಷಿ		
೬.	ಆಹಾರ		
೭.	ಆರೋಗ್ಯ		
೮.	ಸಾರಿಗೆ		
೯.	ಶಿಕ್ಷಣ		
೧೦.	ಆರ್ಥಿಕ		
೧೧.	ಇತರೆ		

೨೬. ಸಾಮಾನ್ಯ ಸಲಹೆ ಸೂಚನೆಗಳು

ಅ. ಆ.

ಇ. ಈ.

೨೭. ಸಂಶೋಧಕರ ಅಭಿಪ್ರಾಯ

ಅ.

ಆ.

ಇ.

ಸಂಪನ್ಮೂಲ ವ್ಯಕ್ತಿಗಳ ವಿವರ

ಕ್ರಸಂ	ಹೆಸರು	ವಯಸ್ಸು	ವೃತ್ತಿ	ವಿಳಾಸ
೧.	ಶಿಕಾರಿ ರಮೇಶ್	೩೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨.	ಶಿಕಾರಿ ಲಕ್ಷ್ಮಣ	೪೦	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩.	ಶಿಕಾರಿ ರಾಮು	೩೮	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪.	ಶಿಕಾರಿ ಬಾಬು	೪೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫.	ಬಾಬು	೨೭	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬.	ಜಗದೀಶ್	೩೪	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭.	ಜಮುನಾ	೩೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೮.	ಮಲ್ಲೇಶ್	೨೭	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೯.	ಮಂಜುಳಾ	೪೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೧೦.	ಈರಮ್ಮ	೬೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೧೧.	ನಾಗೇಶ್	೨೦	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೧೨.	ಅಂಬಣ್ಣ	೩೧	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೧೩.	ಗಂಗಪ್ಪ	೩೮	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೧೪.	ಮಲ್ಲಿಕಾ	೨೮	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೧೫.	ಎಚ್ ಪಿ ಸುರೇಶ್	೨೮	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೧೬.	ಲಕ್ಷ್ಮಣ್ ಸಿಂಗ್	೩೮	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೧೭.	ಜಲ್ದು	೩೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ

೧೮. ಲಾಲೇಪ್ಪ	೨೮	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೧೯. ಶಾಂತಿ	೨೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೦. ಲಲಿತಮ್ಮ	೪೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೧. ವಿಜಯ	೩೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೨. ಸರೋಜಮ್ಮ	೪೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೩. ರೇಣುಕ್ಕಮ್ಮ	೪೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೪. ನಾಗರಾಜ	೩೩	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೫ ಎಚ್ ಪಿ ಮಾದೇವಿ	೨೪	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೬. ಎಚ್ ಪಿ ಅಂಜು	೨೬	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೭. ಗಿರಿಜಮ್ಮ	೪೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೮. ಕಾವೇರಿ	೨೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೨೯. ರೇಣುಕಮ್ಮ	೨೧	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೦. ಅನುಮಕ್ಕ	೩೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೧. ಗಿರಿಜಮ್ಮ	೫೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೨. ಸಣ್ಣ ಅಂಬಣ್ಣ	೨೩	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೩. ಶಾರದ	೨೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೪. ಲಕ್ಷ್ಮಿ	೨೮	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೫. ರುದ್ರಪ್ಪ	೪೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೬. ಶಂಕ್ರಮ್ಮ	೨೦	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೭. ಜಂಬಮ್ಮ	೪೦	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೮. ಸುಶೀಲಮ್ಮ	೪೦	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೩೯. ಶೀಲಾ	೩೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪೦. ಈರಮ್ಮ	೩೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪೧. ಅಂಬಿಕಾ	೨೪	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪೨. ಜಂಬಮ್ಮ	೨೬	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪೩. ಹೀರೂ	೫೧	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪೪. ಗಿರಿಜಮ್ಮ	೫೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ

೪೫. ಹೊನ್ನೂರಮ್ಮ	೩೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪೬. ನಂದಿನಿ	೧೮	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪೭. ಶೀಲಾ	೨೩	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪೮. ಶೋಭಾ	೪೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೪೯. ಸಣ್ಣ ಜಲ್ಲು	೬೦	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೦. ಬಸಪ್ಪ	೫೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೧. ರೇಣುಕಮ್ಮ	೨೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೨. ರಾಮಚಂದ್ರಪ್ಪ	೩೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೩. ಪಾರ್ವತಿ	೩೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೪. ಭಾರತಿ	೨೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೫. ಲಕ್ಷ್ಮಿ	೩೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೬. ದೀಪ	೨೧	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೭. ಈರಮ್ಮ	೬೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೮. ಸೀತಮ್ಮ	೬೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೫೯. ಗೌರಮ್ಮ	೪೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೦ ಮೀನಾಕ್ಷಮ್ಮ	೫೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೧. ಶಿವು	೨೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೨. ಮಾಣಿಕ್ಯಮ್ಮ	೨೮	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೩. ಶಿಕಾರಿ ಗಂಗಪ್ಪ	೬೧	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೪. ಧರ್ಮ	೪೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೫. ಈರಮ್ಮ	೨೯	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೬. ತಾರಾ	೨೮	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೭. ತಿಪ್ಪಮ್ಮ	೪೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೮. ಜ್ಯೋತಿ	೨೨	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೬೯. ಪವನ್	೧೬	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭೦. ಗುಮುಲಮ್ಮ	೪೦	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭೧. ರಾಮಚಂದ್ರ	೫೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ

೭೨.	ಎಚ್ ಪಿ ಸುರೇಶ್	೩೮	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭೩.	ರಾಜು	೨೮	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭೪.	ಮಾರುತಿ	೩೧	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭೫.	ಆನಂದ	೨೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭೬.	ಮಾಣಿಕ್ಯಮ್ಮ	೪೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭೭.	ಎಚ್ ಪಿ ಅಂಜಿನಿ	೩೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭೮.	ಮಾರುತಿ	೩೮	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೭೯.	ಮಾರುತಿ	೩೨	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೮೦.	ಈರಣ್ಣ	೪೯	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೮೧.	ಗೋಪಿ	೩೨	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೮೨.	ಎಚ್.ಪಿ. ಶಿಕಾರಿ ರಾಮು	೪೩	ಗ್ರಂಥಪಾಲಕ	ಶಿಕಾರಿ ಕಾಲೋನಿ, ಕಂಪ್ಲಿ
೮೩.	ಲಕ್ಷ್ಮಿ	೩೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೮೪.	ಎಚ್ ಪಿ ನಾಗೇಶ	೩೫	ಕೃಷಿಯೇತರ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ
೮೫.	ಎಚ್ ಪಿ ಶ್ರೀಕಾಂತ	೪೮	ಪಶುಸಂಗೋಪನೆ	ಶಿಕಾರಿ ಕಾಲೋನಿ, ಕಂಪ್ಲಿ
೮೬.	ವಿಜಯ ಶಾಲ್ಕು	೩೫	ಕೃಷಿ ಕೂಲಿ	ಶಿಕಾರಿ ಕಾಲೋನಿ, ಕಂಪ್ಲಿ

ಪರಾಮಾರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ, ಕಚ್ಚೇಗೌಳಿಗರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೨. ಕಲಬುರ್ಗಿ ಎಂ ಎಂ., (ಸಂ), ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪,

೩. ಕಲ್ಲೂರು ಎಂ ಎಸ್, ಪ್ರಭಾಕರ ಶಿಶಿಲ ಬಿ., ಕೃಷಿ ಅರ್ಥಶಾಸ್ತ್ರ, ಕಲಾಪ್ರಕಾಶನ ಬೆಂಗಳೂರು, ೨೦೦೦.

೪. ಕಾಳೆಗೌಡ ನಾಗರವಾರ, ಎನ್ ಹುಚ್ಚಪ್ಪ ಮಾಸ್ತರ, (ಸಂ), ಗಿರಿಜನ ಸಂಸ್ಕೃತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೇಮಿ, ಬೆಂಗಳೂರು, ೨೦೦೦.

೫. ಕಿಕ್ಕೇರಿ ನಾರಾಯಣ, (ಸಂ), ಬುಡಕಟ್ಟು ಸಂಸ್ಕೃತಿ, ಅರುಹು ಕುರುಹು ಪ್ರಕಾಶನ, ೨೦೧೧.

೬. ಕುಮುದಾ ಬಿ ಸುಶೀಲಪ್ಪ, ಹಕ್ಕಿಪಿಕ್ಕಿ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

೭. ಕೇಶವನ್ ಪ್ರಸಾದ್ ಕೆ., (ಸಂ), ಮಲೆಮಾದೇಶ್ವರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೮. ಗಂಗಾಧರ ದೈವಜ್ಞ, ಬುಡಕಟ್ಟು ಸಮಾಜ ಹುಟ್ಟು ಸಾವಿನ ನಡುವೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫.

೯. ಗುರುಲಿಂಗಯ್ಯ ಎಂ., ಬುಡಕಟ್ಟುಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ೨೦೦೪.

೧೦. ಚಂದ್ರು ಕಾಳೆನಹಳ್ಳಿ, ಸೋಲಿಗರ ಸಂಸ್ಕೃತಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೧. ಚಲುವರಾಜು, (ಸಂ), ಜುಂಜಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೧೨. ಚಿಕ್ಕಣ್ಣ ಯಣ್ಣೆಕಟ್ಟೆ, ಬುಡಕಟ್ಟು ಜನಾಂಗ ಮತ್ತು ಸಂಸ್ಕೃತಿ, ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ತುಮಕೂರು, ೨೦೧೩.

೧೩. ಜಾನಕಲ್ ರಾಜಣ್ಣ ಎಂ., ದಕ್ಕಲಿಗ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

೧೪. ನಾಯಕ್ ಎನ್ ಆರ್., ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೫.ನಾಯಕ್ ಡಿ. ಬಿ., ಹಕ್ಕಿಪಿಕ್ಕಿ ಬುಡಕಟ್ಟು ಸಂಸ್ಕೃತಿ, ಬಂಜಾರ ಪ್ರಕಾಶನ, ಗುಲ್ಬರ್ಗ, ೨೦೦೮.

೧೬.ಪ್ರಭಾಕರ್ ಎ. ಎಸ್., ಚಂದ್ರಕಾಂತ ಟಿ. ಎನ್, (ಸಂ), ಸಿದ್ದಾರ್ಥ ಪ್ರಕಾಶನ, ಹೊಸಪೇಟೆ, ೨೦೦೬

೧೭.ಪ್ರಭಾಕರ್ ಎ. ಎಸ್., (ಸಂ), ಆದಿವಾಸಿ ಆಖ್ಯಾನ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ, ೨೦೦೬.

೧೮.ಪ್ರಭಾಕರ ಎ ಎಸ್., ಡೊಂಬರ ಒಂದು ಚಾರಿತ್ರಿಕ ಹಿನ್ನೋಟ, ಸಿದ್ದಾರ್ಥ ಪ್ರಕಾಶನ, ಹೊಸಪೇಟೆ, ೨೦೦೬,

೧೯.ಪಾರ್ವತಮ್ಮ ಸಿ., ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೦.ಬೋರಲಿಂಗಯ್ಯ ಹಿ ಚಿ., ಬುಡಕಟ್ಟು ದೈವಾರಾಧನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫.

೨೧.ಬೋರಲಿಂಗಯ್ಯ ಹಿ ಚಿ., ಗಿರಿಜನ ನಾಡಿಗೆ ಪಯಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೨೨.ಬೋರಲಿಂಗಯ್ಯ ಹಿ ಚಿ., ಪ್ರಭಾಕರ್ ಎಎಸ್., ಕರ್ನಾಟಕ ಬುಡಕಟ್ಟು ಸಚಿತ್ರಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫.

೨೩.ಬೋರಲಿಂಗಯ್ಯ ಹಿ ಚಿ., ನಮ್ಮೊಳಗೊಂದು ಪುಟ್ಟ ಆಫ್ರಿಕಾ, ಸಿ.ವಿ.ಜಿ ಪಬ್ಲಿಕೇಶನ್ಸ್, ಬೆಂಗಳೂರು, ೨೦೧೪.

೨೪.ಬೋರಲಿಂಗಯ್ಯ ಹಿ ಚಿ., ಕಾಡು ಕಾಂಕ್ರೀಟ್ ಮತ್ತು ಜಾನಪದ, ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ, ೧೯೯೫.

೨೫.ಬೋರಲಿಂಗಯ್ಯ ಹಿ ಚಿ., ಗಿರಿಜನ ನಾಡಿಗೆ ಪಯಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫.

೨೬.ಮಲ್ಲಿಕಾರ್ಜುನ ಬಿ ಮಾನ್ಪಡೆ, ತಂತಿ ಬೇಲಿಯೊಳಗಿನ ಜಗತ್ತು, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ, ೨೦೧೪.

೨೭.ಮೂಲಗಿ ಆರ್. ಬಿ., ಧಾರವಾಡ ಜಿಲ್ಲೆಯ ಜನಪದ ಸಂಪ್ರದಾಯಗಳು, ಸಾಹಿತ್ಯ ಪ್ರಕಾಶನ ಹುಬ್ಬಳಿ, ೨೦೧೦,

೨೮.ಮೇತ್ರಿ ಕೆ ಎಂ., 'ಬುಡಕಟ್ಟು ಕುಲಕಸುಬುಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨.

೨೯.ಮೇತ್ರಿ ಕೆ ಎಂ., 'ಕರ್ನಾಟಕದ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೭.

೩೦.ಮೊಗಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೩೧.ಯರ್ರಪ್ಪ ಡಿ., (ಸಂ), ಅಲೆಮಾರಿ ಕುರುಬ, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

೩೨.ರಮೇಶ್ ಸ ಚಿ., ಅಲೆಮಾರಿಗಳ ಸ್ಥಿತಿಗತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೩೩.ರಾಜಶೇಖರಯ್ಯ ಎಲ್., ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿವಹಾ ಪದ್ಧತಿ, ಅಭಿರುಚಿ ಪ್ರಕಾಶನ ಮೈಸೂರು, ೨೦೦೨.

೩೪.ಲಕ್ಕಿ ಪೃಥ್ವಿರಾಜ್, ಶಿಕಾರಿ ರಾಮು ಎಚ್ ಪಿ., ಪಾರ್ಧಿ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೦೮.

೩೫.ಲಕ್ಷ್ಮಣ್ ತೆಲಗಾವಿ, ಸ್ಥಳೀಯ ಚರಿತ್ರೆ ಅಧ್ಯಯನ ತಾತ್ವಿಕತೆ ಮತ್ತು ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೩೬. ವಿರೂಪಾಕ್ಷಿ ಪೂಜಾರಳ್ಳಿ, ಚಿತ್ರುದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೩೭. ವಿರೂಪಾಕ್ಷಿ ಪೂಜಾರಳ್ಳಿ, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೩೮.ಸುರೇಶ್ ಕೆ ಎಂ., ಕರ್ನಾಟಕ ದೇವಾಲಯ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೩೯.ಸಿದ್ಧೇಶ್ವರಿ ಎ ಎನ್., ಬಳ್ಳಾರಿ ಜಿಲ್ಲೆಯ ಜನಪದ ಆಚರಣೆಗಳು, ಪ್ರಭುದೇವರ ಜನಕಲ್ಯಾಣ ಸಂಸ್ಥೆ ಸೊಂಡುರು, ೨೦೧೪,


ಎಂ.ಫಿಲ್ ಮತ್ತು ಪಿಎಚ್.ಡಿ ಪ್ರಬಂಧಗಳು

೧. ನಾಗೇಶ ಎಂ., ಹಕ್ಕಿಪಿಕ್ಕಿ ಸಮುದಾಯದ ಸಾಮಾಜಿಕ ಬದಲಾವಣೆ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩.

೨. ಲಕ್ಕಿ ಪೃಥ್ವಿರಾಜ್, ಪಾರ್ಧಿ ಬುಡಕಟ್ಟು: ಒಂದು ಮಾನವಶಾಸ್ತ್ರೀಯ ಅಧ್ಯಯನ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೩. ವಿಜಯ ಲಕ್ಷ್ಮಿ ಎಂ., ಹಕ್ಕಿಪಿಕ್ಕಿಯರ ಸಾಮಾಜಿಕ ಬದಲಾವಣೆ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಕಂಪ್ಲಿ ತಾಲೂಕು ನಕ್ಷೆ



ಛಾಯಾ ಚಿತ್ರಗಳು

ಛಾಯಾ ಚಿತ್ರಗಳು



ಹಕ್ಕಿಪಿಕ್ಕಿ ನೃತ್ಯ ಕಲಾತಂಡ



ಹಕ್ಕಿಪಿಕ್ಕಿ ತಪ್ಪಾರಾಮ್ ಡೋಲ್ ತಂಡ



ಪ್ರಶಸ್ತಿ ಸ್ವಿಕರಿಸುತ್ತಿರುವ ಹಕ್ಕಿಪಿಕ್ಕಿ ಕಲಾತಂಡ



ಹಕ್ಕಿಪಿಕ್ಕಿ ಕಲಾತಂಡ



ಕಾರ್ಯಕ್ರಮದಲ್ಲಿ ಸಂಸ್ಕೃತಿಕ ನೃತ್ಯ ಪ್ರದರ್ಶನ ನೀಡಿದ ಹಕ್ಕಿಪಿಕ್ಕಿ ಕಲಾತಂಡ



ಮದುವೆ ಸಂದರ್ಭದಲ್ಲಿ ವರ ವದುವಿಗೆ ತಾಳಿಕಟ್ಟುತ್ತಿರುವುದು



ಹಕ್ಕಿಪಿಕ್ಕಿಯರ ಪೆಟ್ಟಿಗೆ ದೇವರು



ಹಕ್ಕಿಪಿಕ್ಕಿ ಕಲಾತಂಡ



ಆರತಕ್ಷತೆ ಸಮಾರಂಭದಲ್ಲಿ ವಧು ವರರು



ಕ್ಷೇತ್ರಕಾರ್ಯದಲ್ಲಿ ಮಾಹಿತಿಯನ್ನು ಪಡೆಯುತ್ತಿರುವ ಸಂಶೋಧಕ



ಹಕ್ಕಿಪಿಕ್ಕಿಯರ ಕುಟುಂಬ



ಹಕ್ಕಿಪಿಕ್ಕಿಯರ ಕುಟುಂಬ



ಹಂದರ(ಮಂಡವ) ಕಟ್ಟುತ್ತಿರುವುದು



ಹಕ್ಕಿಪಿಕ್ಕಿಯರ ಶೌಚಾಲಯ ವ್ಯವಸ್ಥೆ



ಹಕ್ಕಿಪಿಕ್ಕಿಯರ ಶೌಚಾಲಯ ವ್ಯವಸ್ಥೆ



ಹಕ್ಕಿಪಿಕ್ಕಿ ಸಮುದಾಯದವರಿಂದ ಮಾಹಿತಿ ಸಂಗ್ರಹಿಸುತ್ತಿರುವ ಸಂಶೋಧಕ



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಬುಡಕಟ್ಟು ಅಧ್ಯಯನ ವಿಭಾಗ